# ಆಮಂತ್ರಣ

## ಕಿರು ಅರಣ್ಯ ಉತ್ಪನ್ನಗಳ ಸುಸ್ಥಿರ ಸಂಗ್ರಹಣೆ (ಬೆತ್ತ ಹಾಗೂ ಉಪ್ಪಾಗೆ)

ನಾಟಾ ಕಡಿಯುವುದರ ಲಾಭ ಕೇವಲ ಸರ್ಕಾರಕ್ಕೆ, ಗುತ್ತಿಗೆದಾರರಿಗೆ ಆಗುತ್ತದೆ. ಇದರಿಂದ ಪರಿಸರಕ್ಕೂ ಹಾನಿ. ಆದರೆ ಕಿರು ಅರಣ್ಯ ಉತ್ಪನ್ನಗಳಿಂದ ಲಾಭ ಸಿಗುವುದು ನೇರವಾಗಿ ಅರಣ್ಯಾವಲಂಬಿ ಜನರಿಗೆ. ಈ ಉತ್ಪನ್ನಗಳನ್ನು ಪರಿಸರಕ್ಕೆ ಯಾವುದೇ ರೀತಿಯಲ್ಲಿ ಹಾನಿಯಾಗದಂತೆ ಸಂಗ್ರಹಿಸಲು ಸಾಧ್ಯವಿದೆ. ಆದರೆ ನಮ್ಮದೇ ತಪ್ಪುಗಳಿಂದಾಗಿ ಇಂದು ಹಲವು ಉತ್ಪನ್ನಗಳು ವಿನಾಶದ ಅಂಚಿನಲ್ಲಿವೆ. ಉದಾಹರಣೆಗೆ ಬೆತ್ತ, ಉಪ್ಪಾಗೆ, ಮುರುಗಲು, ರಾಂಪತ್ರೆ, ಸೀಗೆ, ಜೇನು ಮುಂತಾದವು.

ನಮ್ಮ ಸುತ್ತಲಿನ ಅರಣ್ಯ ಪ್ರದೇಶದಲ್ಲಿ ಈ ಉತ್ಪನ್ನಗಳು ಮುಂದಿನ ವರ್ಷಗಳಲ್ಲೂ ನಿರಂತರವಾಗಿ ಸಿಗುವಂತೆ ಮಾಡಲು ಸರಿಯಾದ ರೀತಿಯಲ್ಲಿ ಸಂಗ್ರಹಿಸುವಂತೆ ನೋಡಿಕೊಳ್ಳಲು ನಾವು ಹಾಗೂ ಅರಣ್ಯ ಇಲಾಖೆ ಯಾವ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ ಎನ್ನುವುದನ್ನು ನಿರ್ಧರಿಸಬೇಕಾಗಿದೆ. ಕಾರಣ ಪರಿಸರ ಸಂರಕ್ಷಣಾ ಕೇಂದ್ರ, ಅರಣ್ಯ ಇಲಾಖೆ, ಮುರೇಗಾರ್ ಮತ್ತು ಕುದ್ರಗೋಡ ಗ್ರಾಮ ಅರಣ್ಯ ಸಮಿತಿಗಳು ಮತ್ತಿತರರೊಡನೆ ಒಂದು ದಿನದ ಕಾರ್ಯಾಗಾರ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಲಹೆಸೂಚನೆ ನೀಡಿ ನಿಸರ್ಗದ ಸಂಪನ್ಮೂಲವನ್ನು ರಕ್ಷಿಸಲು ಮುಂದಾಗಬೇಕೆಂದು ವಿನಂತಿ.

**ದಿನಾಂಕ : ಗುರುವಾರ ೨೧ ನವೆಂಬರ್, ೨೦೦೨**

**ಸಮಯ :** ಬೆಳಿಗ್ಗೆ ೧೦-೩೦ ರಿಂದ ೫-೩೦

ಸ್ಥಳ : **ಮುರೇಗಾರ ಕನ್ನಡ ಶಾಲೆ**

ಆಸಕ್ತರಿಗೆ ಸ್ವಾಗತ

: ಸಂಘಟಕರು :

**ಪರಿಸರ ಸಂರಕ್ಷಣಾ ಕೇಂದ್ರ**
ಚೌಕಿಮಠ, ಶಿರಸಿ

**ಕರ್ನಾಟಕ ಅರಣ್ಯ ಇಲಾಖೆ**
**ಮುರೇಗಾರ, ಕುದ್ರಗೋಡ**
**ಕೆಳಾಸೆ ಗ್ರಾಮಸ್ಥರು**

**ಅಧ್ಯಕ್ಷರು**
**ಮುರೇಗಾರ್ ಗ್ರಾಮ ಅರಣ್ಯ ಸಮಿತಿ**
**ಕುದ್ರಗೋಡ ಗ್ರಾಮ ಅರಣ್ಯ ಸಮಿತಿ**


# ಎಸ್. ಆರ್. ಕಡವೆ ಪ್ರತಿಷ್ಠಾನ [ರಿ] ಶಿರಸಿ

## ಶ್ರೀ ಗುರುನಾಥ ಗಣಪತಿ ಹೆಗಡೆ, ಹುಲೇಮಳಗಿ

### ಅವರಿಗೆ ಅರ್ಪಿಸಿದ



## ಸನ್ಮಾನ ಪತ್ರ



ಸನ್ಮಾನ್ಯ ಶ್ರೀ ಜಿ. ಜಿ. ಹೆಗಡೆ ಅವರೇ,

ತಮ್ಮ ಸಾಮಾಜಿಕ ಕಳಕಳಿ ಹಾಗೂ ಸುದೀರ್ಘ ಸಾರ್ವಜನಿಕ ಸೇವೆಯನ್ನು ಮೆಲಕು ಹಾಕಿದಾಗ ತಮ್ಮ ಬಗ್ಗೆ ನಮಗೆ ಅಭಿಮಾನ ಹಾಗೂ ಹೆಮ್ಮೆ ಉಕ್ಕೇರುತ್ತದೆ. ೧೯೨೮ ರಲ್ಲಿ ಶಿರಸಿ ತಾಲೂಕ ಹುಲೇಮಳಗಿಯಲ್ಲಿ ಕೃಷಿ ಕುಟುಂಬದಲ್ಲಿ ಜನ್ಮತಳೆದ ತಾವು ಮಾಧ್ಯಮಿಕ ಶಿಕ್ಷಣ ಮುಗಿಸಿದ ಮೇಲೆ ಕೆಲ ವರ್ಷ ಸಿಂಡಿಕೇಟ್ ಬ್ಯಾಂಕಿನಲ್ಲಿ ಉದ್ಯೋಗಿಗಳಾದರೂ ಸ್ವತಂತ್ರ ಹಾಗೂ ಸ್ವಾಭಿಮಾನದ ಮನೋವೃತ್ತಿಯ ತಮಗೆ ನೌಕರಿ ವೃತ್ತಿ ಒಗ್ಗದೆ ಅದನ್ನು ತ್ಯಜಿಸಿ ಜೀವನೋಪಾಯಕ್ಕಾಗಿ ಸ್ವತಂತ್ರ ವೃತ್ತಿ ಕೈಕೊಂಡಿದ್ದು ವಿದ್ಯಾವಂತ ಯುವಕರಿಗೆಲ್ಲ ಒಂದು ಮಾರ್ಗದರ್ಶಿ ಸೂತ್ರವಾಗಿದೆ ಎಂದೇ ಭಾವಿಸುತ್ತೇವೆ.

ಆರಂಭದ ಕೆಲವರ್ಷ ಕಟ್ಟಿಗೆ ಮಿಲ್ ಹಾಗೂ ಕಟ್ಟಿಗೆ ವ್ಯಾಪಾರ ಕೈಗೊಂಡಿರಾದರೂ ಮುಂದೆ ಕೃಷಿಪೂರಕವಾದ ನೀರಾವರಿ ಯಂತ್ರೋಪಕರಣಗಳು, ಪಶು ಆಹಾರ ವಿತರಿಸುವ 'ಹುಲೇಮಳಗಿ ಬ್ರದರ್ಸ್' ಮಾರಾಟ ಮಳಿಗೆಯನ್ನು ಸ್ಥಾಪಿಸಿದ್ದೇ ಅಲ್ಲದೆ ನವಣಗೆರೆಯಲ್ಲಿ ಭತ್ತದ ಗಿರಣಿಯೊಂದನ್ನು ಸ್ಥಾಪಿಸಿ ಆ ಭಾಗದ ಭತ್ತದ ಬೆಳೆಗಾರರಿಗೆ ಸೌಕರ್ಯವನ್ನೂ ಮಾಡಿಕೊಟ್ಟಿರಿ.

ಸ್ವಂತಕ್ಕೊಂದು ಉದ್ಯೋಗ, ನಂಬಿದವರಿಗೊಂದು ನೆರವು ಆಗಿ ಉದ್ಯಮ ನೆಮ್ಮದಿ ನೀಡಿದ್ದರೂ ಅದರ ಹೊಣೆಗಾರಿಕೆಯನ್ನು ಮಕ್ಕಳಿಗೆ ವಹಿಸಿ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯಲು ಮುಂದಾದದ್ದು ತಾಲೂಕಿನ ಸಾಮಾಜಿಕ ಕ್ಷೇತ್ರಕ್ಕೆ ದೊರೆತ ಒಂದು ಭಾಗ್ಯವೆಂದೇ ಭಾವಿಸಲಾಯಿತು.

ಹುಟ್ಟಿದೂರಿನಲ್ಲಿ-ಹುಲೇಮಳಗಿ ಬೆಂಗಳೆ ಪ್ರದೇಶದಲ್ಲಿ ಮಾಧ್ಯಮಿಕ ಶಾಲೆಯೊಂದನ್ನು ಸ್ಥಾಪಿಸಿ-ಬೆಳೆಸಿ ಮಕ್ಕಳಿಗೆ ಸನಿಹದಲ್ಲೇ ಮಾಧ್ಯಮಿಕ ಶಿಕ್ಷಣ ದೊರಕುವಂತೆ ಮಾಡಿದುದೇ ಅಲ್ಲದೇ ಶಿರಸಿಯಲ್ಲಿ ಮಾಡರ್ನ್ ಎಜ್ಯುಕೇಶನ್ ಸೊಸೈಟಿಯ ಕಾಲೇಜು ಸ್ಥಾಪನೆಯಲ್ಲೂ-ಅದರ ಆಡಳಿತ ಮಂಡಳಿಯಲ್ಲೂ ಕಾರ್ಯನಿರ್ವಹಿಸಿ ತಮ್ಮ ಶಿಕ್ಷಣ ಪ್ರೇಮವನ್ನು ವ್ಯಕ್ತಪಡಿಸಿದ್ದೀರಿ.

ಇತಿಹಾಸಪ್ರಸಿದ್ಧ ಬನವಾಸಿ ಶ್ರೀ ಮಧುಕೇಶ್ವರ ದೇವಸ್ಥಾನದ ಟ್ರಸ್ಟಿಗಳಾಗಿ ದೇವಸ್ಥಾನದ ಹಾಗೂ ಬನವಾಸಿ ವಲಯದ ಅಭಿವೃದ್ಧಿಗೆ-ಸಂಶೋಧನೆ- ಸೆಮಿನಾರುಗಳಿಗೆ ದುಡಿದಿದ್ದಲ್ಲದೆ ಇನ್ನೊಂದು ಐತಿಹಾಸಿಕ ಸ್ಥಳವಾದ ಸ್ವಾದಿಯ ಸ್ವರ್ಣವಲ್ಲಿ ಮಠದ ಆಡಳಿತ ಮಂಡಳಿಯ ಸದಸ್ಯರಾಗಿ ದುಡಿದಿದ್ದೀರಿ. ಹೀಗೆ ಧಾರ್ಮಿಕ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದೀರಲ್ಲದೆ, ಶಿರಸಿ ನಗರದ ತೋಟಗಾರರ ಕಲ್ಯಾಣಮಂಟಪದ ಆಡಳಿತದಲ್ಲೂ ಪಾಲುಗಾರರಾಗಿ ಕಾರ್ಯ ಮಾಡುತ್ತಿರುವದೂ ಸಾರ್ಥಕ ಬದುಕಿಗೆ ಸಾಕ್ಷಿಯಾಗಿದೆ.

ಶಿರಸಿ ತಾಲೂಕಾ ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ಅಧ್ಯಕ್ಷರಾಗಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಗಣನೀಯ ಸೇವೆ ಸಲ್ಲಿಸಿದ ತಾವು ಶಿರಸಿ ತಾಲೂಕಾ ಅಡಿಕೆ ಬೆಸಾಯಗಾರರ ಸಂಘದ ಕಾರ್ಯದರ್ಶಿಗಳಾಗಿ ಬೆಳೆಗಾರರ ಹಿತಕ್ಕಾಗಿ ದುಡಿಯುತ್ತ ಜಿಲ್ಲೆಯ ಸಾಂಬಾರು ಮಂಡಳಿಯನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿಯೂ ದುಡಿಯುತ್ತಿರುವುದು ಉಲ್ಲೇಖನೀಯವಾಗಿದೆ.

ಶಿರಸಿ ತೋಟಗಾರರ ಸಹಕಾರಿ ಮಾರಾಟ ಸಂಸ್ಥೆ ಹಾಗೂ ತೋಟಗಾರರ ಸಹಕಾರೀ ಗ್ರಾಮೀಣ ಬ್ಯಾಂಕಿನ, ಲೇಬರ್ ಸೊಸೈಟಿಯ ನಿರ್ದೇಶಕರಾಗಿಯೂ ಸಹಕಾರೀ ಕ್ಷೇತ್ರದಲ್ಲಿ ಕೆಲಸ ಮಾಡಿರುವದನ್ನು ಕಡೆಗಣಿಸುವಂತಿಲ್ಲ.

ಹೀಗೆ ಅಂದಿನಿಂದ ಇಂದಿನವರೆಗೂ ಸಮಾಜಕ್ಕಾಗಿ-ಸಾರ್ವಜನಿಕರಿಗಾಗಿ-ಪ್ರದೇಶಕ್ಕಾಗಿ ಸೇವೆಸಲ್ಲಿಸುತ್ತ ಈ ಇಳಿವಯಸ್ಸಿನಲ್ಲಿಯೂ ಸದ್ದಿಲ್ಲದೆ ದುಡಿಯುತ್ತಿರುವದನ್ನು ಸ್ಮರಿಸುತ್ತೇವೆ, ಶ್ಲಾಘಿಸುತ್ತೇವೆ.

ಇದೂ ಅಲ್ಲದೆ ಈ ಭಾಗದ ಸರಿಸಾಟಿಯಿಲ್ಲದ ಜನಸೇವಕರಾಗಿ ಕಾರ್ಯಮಾಡಿ ಜನಮನದಲ್ಲಿ ಮಾಸದ ಮುದ್ರೆ ಮೂಡಿಸಿದ ಹಿರಿಯ ಚೇತನ ದಿ. ಶ್ರೀಪಾದ ಹೆಗಡೆ ಕಡವೆ ಅವರ ನಿಕಟ-ನಿಷ್ಠಾವಂತ ಜೊತೆಗಾರರಾಗಿ ಗುರುತಿಸಿಕೊಂಡಿರುವುದನ್ನೂ ಮರೆಯುವದು ಸಾಧ್ಯವಿಲ್ಲ. ಅವರಂತೆಯೇ ಸಾರ್ವಜನಿಕ ಜೀವನದಲ್ಲಿ ಪಾವಿತ್ರ್ಯತೆಯೊಂದಿಗೆ ಗುಣಗೌರವ ಹೆಚ್ಚಿಸಿದ ತಮ್ಮ ಅಂಹಕಾರರಹಿತ ಸ್ವಚ್ಛ-ಸರಳ - ಸಾತ್ವಿಕ ನಡೆನುಡಿ ತುಂಬಿದ ನಿರ್ಮಾಲ್ಯ ಬದುಕು ಸರ್ವಕಾಲಿಕ ಹೆಗ್ಗಳಿಕೆಗೆ ಪಾತ್ರವಾದುದು ಎಂದು ಹೇಳಲು ನಮಗೆ ಅತ್ಯಂತ ಹೆಮ್ಮೆಯೆನಿಸುತ್ತದೆ.

ಇಂತಹ ಕಲಂಕರಹಿತ ಸೇವಾನಿರತ ಬದುಕು ಬಾಳಿದ ತಮ್ಮನ್ನು ಎಸ್. ಆರ್. ಕಡವೆ ಪ್ರತಿಷ್ಠಾನದಿಂದ ಸನ್ಮಾನಿಸಿ ಗೌರವಿಸುವುದು ನಮಗೆ ದೊರೆತ ಭಾಗ್ಯವೆಂದೇ ಭಾವಿಸುತ್ತ ತಮಗೆ ಪರಮಾತ್ಮನು ಇನ್ನೂ ಹೆಚ್ಚಿನ ಆಯುರಾರೋಗ್ಯ ಸಂಪದ ಕರುಣಿಸಿ ಇನ್ನೂ ಹೆಚ್ಚಿನ ಜನಸೇವೆಗೈದು ಕೀರ್ತಿ ಯಶಸ್ಸು ಗಳಿಸುವಂತೆ ಅನುಗ್ರಹಿಸಲಿ ಎಂದು ತುಂಬು ಹೃದಯದಿಂದ ಪ್ರಾರ್ಥಿಸುತ್ತ ಈ ಸನ್ಮಾನ ಪತ್ರ ಅರ್ಪಿಸುತ್ತೇವೆ.

ಶಿರಸಿ

೧೨-೧೧-೧೯೯೬

**ದಿವಸ್ಪತಿ ವಿಶ್ವಾಮಿತ್ರ**

**ಅಧ್ಯಕ್ಷರು**

ಮುದ್ರಕರು: ಚಿತ್ರರೇಖಾ ಮುದ್ರಣ, ಶಿರಸಿ ☏ : 76884

# ಭತ್ತ ಉತ್ಸವ

7 ಮತ್ತು 8 ಜೂನ್ 2008

ಬನವಾಸಿ, ಶಿರಸಿ ತಾಲ್ಲೂಕು



ಸಹಜ ಸಮೃದ್ಧ

ಭತ್ತ ಉಳಿಸಿ ಆಂದೋಲನ

# ಉದ್ಘಾಟನಾ ಸಮಾರಂಭ



7 ಜೂನ್ 2008ರ ಶನಿವಾರ,
ಬೆಳಗ್ಗೆ 11ರ ಆಸುಪಾಸು

ಸ್ಥಳ: ಶ್ರೀ ಜಯಂತಿ ಪ್ರೌಢಶಾಲೆ ಆವರಣ
ಬನವಾಸಿ

**ಉದ್ಘಾಟನೆ**
**ಡಾ॥ ಎ. ರಾಜಣ್ಣ**
ನಿರ್ದೇಶಕರು, ಕೃಷಿ ಇಲಾಖೆ,
ಕರ್ನಾಟಕ ಸರ್ಕಾರ

**ಅಧ್ಯಕ್ಷತೆ**
**ಶ್ರೀ ಶಾಂತರಾಮ್ ಹೆಗಡೆ ಶೀಗೆಹಳ್ಳಿ**
ಅಧ್ಯಕ್ಷರು, ಶಿರಸಿ ತೋಟಗಾರ್ ಸೊಸೈಟಿ

**ಪುಸ್ತಕ ಬಿಡುಗಡೆ**
ಶ್ರೀಮತಿ. **ಉಷಾ**
ಭತ್ತ ಉಳಿಸಿ ಆಂದೋಲನ, ಕೇರಳ

**ಮುಖ್ಯ ಅತಿಥಿಗಳು**
**ಶ್ರೀ ಎನ್. ಎಸ್. ಹೆಗಡೆ ಕೋಟೆಕೊಪ್ಪ**
ಅಧ್ಯಕ್ಷರು, APMC, ಶಿರಸಿ

**ಡಾ॥ ಅಮಾನ್ ಶೇಕಬ್**
ಜಂಟಿ ಕೃಷಿ ನಿರ್ದೇಶಕರು,ಉತ್ತರ ಕನ್ನಡ ಜಿಲ್ಲೆ

**ಪ್ರೊ. ಬಿ. ಎಂ. ಕುಮಾರ ಸ್ವಾಮಿ**
ಚಿಂತಕರು, ಸ್ವದೇಶಿ ಜಾಗರಣ ಮಂಚ್

**ಶ್ರೀ ಲಿಂಗಮಾದಯ್ಯ**
ರಾಷ್ಟ್ರ ಪ್ರಶಸ್ತಿ ವಿಜೇತ ರೈತ ವಿಜ್ಞಾನಿ

**ಪ್ರಸ್ತಾವನೆ**
**ಜಿ. ಕೃಷ್ಣಪ್ರಸಾದ್**
ನಿರ್ದೇಶಕರು, ಸಹಜ ಸಮೃದ್ಧ

---

**ಸಿರಿವಂತೆ ಚಂದ್ರಶೇಖರ್‌ರವರ 1000 ಅಡಿ ಉದ್ದದ ದಾಖಲೆಯ ಭತ್ತದ ತೋರಣದ ಅನಾವರಣ ಉದ್ಘಾಟನಾ ಸಮಾರಂಭದ ವಿಶೇಷ**

# ಚಾವಡಿ ಚಿಂತನೆ

## 7 ಜೂನ್ 2008ರ ಶನಿವಾರ

**ಮಧ್ಯಾಹ್ನ 2 ಗಂಟೆಗೆ - ಭತ್ತದ ಕೃಷಿ ಮತ್ತು ಸಂಸ್ಕೃತಿ ದಾಖಲಾತಿ**

ಮಲೆನಾಡು, ಕರಾವಳಿ, ಬಯಲು ಸೀಮೆ ಮತ್ತು ಎರೆ ಸೀಮೆಯ ರೈತರಿಂದ ಪ್ರದೇಶವಾರು ಭತ್ತದ ಕೃಷಿ ಜ್ಞಾನ ದಾಖಲಾತಿ

**ಗೋಷ್ಠಿಯ ಅಧ್ಯಕ್ಷರು: ಶ್ರೀ ಪಾಂಡುರಂಗ ಹೆಗಡೆ, ಪರಿಸರವಾದಿ, ಶಿರಸಿ**

**ಇಳಿ ಸಂಜೆಯ ನಂತರ**

**ಮಲ್ಲಿಕಾರ್ಜುನ ಹೊಸಪಾಳ್ಯ** - 'ಭತ್ತ ಲೋಕದ ಅದ್ಭುತ ಜಗತ್ತು' ಸ್ಲೈಡ್ ಶೊ

**ಡಾ॥ ಮೋಹನ ತಲಕಾಲುಕೊಪ್ಪ** - ಪಶ್ಚಿಮ ಘಟ್ಟಗಳ ಭತ್ತ ವೈವಿಧ್ಯದ ದಾಖಲಾತಿ ಮತ್ತು ಸಂರಕ್ಷಣೆಯ ಕಥನ

**ವರದಾ ನದಿ ಪಾತ್ರದ ಭತ್ತ ವೈವಿಧ್ಯ** - ಫಿಲಂ ಶೊ

**ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ**

## 8 ಜೂನ್ 2008ರ ಭಾನುವಾರ

ಬೆಳಗಿನ 9 ಗಂಟೆಗೆ

### ಭತ್ತ ಸಂರಕ್ಷಕರ ಅನುಭವದ ಮಾತು

ಶ್ರೀಮತಿ. **ದುಮ್ಮಳ್ಳಿ ಶಿವಮ್ಮ** - ಸಾವಯವ ಕೃಷಿಯಲ್ಲಿ ಭತ್ತ ಬೆಳೆದ ಸಾಧಕಿ
ಶ್ರೀ. **ಬೋರೆಗೌಡ** - 30 ಜಾತಿ ಭತ್ತದ ತಳಿಗಳ ಸಂರಕ್ಷಕ
ಶ್ರೀ. **ಆಂಜನೇಯ** - ಸಮುದಾಯದ ಜೊತೆ ಭತ್ತ ಸಂರಕ್ಷಣೆಯ ಸಾಧಕ
ಶ್ರೀ. **ಹೊಯ್ಸಳ ಅಪ್ಪಾಜಿ** - ಅಪರೂಪದ ಭತ್ತದ ತಳಿಗಳಿಗೆ ಜೀವಕೊಟ್ಟವರು

ಬೆಳಗಿನ 10 ಗಂಟೆಗೆ

### ಭತ್ತದ ತಳಿ ಅಭಿವೃದ್ಧಿ ತಂತ್ರಗಳು

| | |
|---|---|
| -ಡಾ॥ ರಮೇಶ್ ಭಟ್, ವಿಜ್ಞಾನಿ<br>ಧಾರವಾಡ ಕೃಷಿ ವಿಶ್ವವಿದ್ಯಾಲಯ | ದೇಸೀಯ ಭತ್ತದ ತಳಿಗಳ ಸಂಗ್ರಹ ಮತ್ತು ದಾಖಲಾತಿ |
| -ಶ್ರೀ ರುದ್ರಾರಾಧ್ಯ,<br>ಹಿರಿಯ ವಿಜ್ಞಾನಿ | ಭತ್ತದ ತಳಿ ಶುದ್ಧೀಕರಣ ಮತ್ತು ತಳಿ ಅಭಿವೃದ್ಧಿಯ ಸುಲಭ ತಂತ್ರಗಳು |
| -ಶ್ರೀ ಶಂಕರ್ ಗುರು,<br>ಟಿ. ನರಸೀಪುರ | ಹೊಸ ಭತ್ತದ ತಳಿಗಳ ಅಭಿವೃದ್ಧಿಯ ಅನುಭವಕಥನ |

ಬೆಳಗಿನ 11 ಗಂಟೆಗೆ

### ಭತ್ತದ ಕೃಷಿಯ ಹೊಸ ಸಾಧ್ಯತೆಗಳು

| | |
|---|---|
| -ಶ್ರೀ. ಬಿ.ಎನ್. ನಂದೀಶ್,<br>ಶಿಕಾರಿಪುರ | ಗೊಬ್ಬರವ ಬಳಸದೆ ಅಬ್ಬರದ ಬೆಳೆ ತೆಗೆಯುವ 'ಲೆಗ್ಯೂಮ್ ಕಲ್ಚರ್' |
| -ಡಾ॥ ವಿಷಕಂಠ, ಮೈಸೂರು<br>ಜಂಟಿ ಕೃಷಿ ನಿರ್ದೇಶಕರು | ಭತ್ತದ ಕೃಷಿಕರ ಭರವಸೆಯ ಬೆಳಕು 'ಶ್ರೀ' ಪದ್ಧತಿ |
| -ಡಾ॥ ಎನ್. ದೇವಕುಮಾರ್<br>ಸಾವಯವ ಕೃಷಿ ಸಂಶೋಧನ ಕೇಂದ್ರ, ಶಿವಮೊಗ್ಗ | ನೆಲ ಜಲ ಉಳಿಸುವ ಭತ್ತದ ಕೃಷಿ |

ಮಧ್ಯಾಹ್ನ 12 ಗಂಟೆಗೆ

### ಭತ್ತದ ಕೃಷಿಗೆ ಎದುರಾಗಿರುವ ಹೊಸ ಸವಾಲುಗಳು

| | |
|---|---|
| -ಪ್ರೊ. ಬಿ.ಎಂ.ಕುಮಾರ ಸ್ವಾಮಿ | ರೈತ ವಿರೋಧಿ ಸರ್ಕಾರಿ ನೀತಿ |
| -ಶ್ರೀ. ನಾಗೇಶ ಹೆಗಡೆ | ಬರಲಿದೆ ಜಿ.ಎಂ. ಭತ್ತ! |
| -ಶ್ರೀ. ಅರುಣ್ ಕುಮಾರ್ ವಿ.ಕೆ<br>ಕೃಷಿ ಪ್ರಯೋಗ ಪರಿವಾರ | ಸಾವಯವ ಭತ್ತದ ಮಾರುಕಟ್ಟೆ ಮತ್ತು ಮೌಲ್ಯವರ್ಧನೆ |

ಮಧ್ಯಾನ 2.30 ಗಂಟೆಗೆ

ಭತ್ತ ಸಂರಕ್ಷಣೆಯ ಭವಿಷ್ಯದ ಕಾರ್ಯಕ್ರಮಗಳು-ಪ್ರದೇಶವಾರು ಗುಂಪು ಚರ್ಚೆ

# ಮುಕ್ತಾಯ ಸಮಾರಂಭ

**ಮಧ್ಯಾಹ್ನ 4.00 ಗಂಟೆಗೆ**

**ಮುಖ್ಯ ಅತಿಥಿಗಳು**
**ಡಾ॥ ಬಿ. ಎನ್. ಸಾಲಿಮಠ್**
ಸಂಶೋಧನಾ ನಿರ್ದೇಶಕರು, ಕೃವಿವಿ, ಧಾರವಾಡ

**ಡಾ॥ ಜಿ.ಎನ್. ಎಸ್. ರೆಡ್ಡಿ**
ಉಪಾಧ್ಯಕ್ಷರು, ಬೈಫ್, ತಿಪಟೂರು

**ಶ್ರೀ. ನಾಗೇಶ ಹೆಗಡೆ**
ಹಿರಿಯ ಪತ್ರಕರ್ತರು

**ಅಧ್ಯಕ್ಷತೆ**
**ಹೆಚ್. ಶಿವಾನಂದ ಮೂರ್ತಿ**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಉತ್ತರ ಕನ್ನಡ

**ಘೋಷಣೆ ಪ್ರಸ್ತುತಿ**
**ಶ್ರೀ. ಶಿವಾನಂದ ಕಳವೆ**
ಹವ್ಯಾಸಿ ಪತ್ರಕರ್ತರು, ಶಿರಸಿ



## ಭತ್ತ ಉತ್ಸವದ ಸಂಭ್ರಮಕ್ಕೆ ಜೊತೆಯಾದವರು

- ಶ್ರೀ ಮಾತೋಬರ ಮಧುಕೇಶ್ವರ ದೇವಸ್ಥಾನ ಸಮಿತಿ
- ಗ್ರಾಮ ಪಂಚಾಯಿತಿ, ಬನವಾಸಿ
- ವ್ಯವಸಾಯ ಸೇವಾಸಹಕಾರಿ ಬ್ಯಾಂಕ್
- ವಿಶ್ವೋದಯ ಗ್ರಾಮೀಣ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆ
- ವಲಯ ಅಭ್ಯುದಯ ಸಮಿತಿ
- ಬೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆ
- ಶ್ರೀ ಜಯಂತಿ ವಿದ್ಯಾವರ್ಧಕ ಸಂಘ
- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ
- ರೋಟರಿ ಸಮುದಾಯ ದಳ
- ನಾಮದೇವ ಕಲ್ಯಾಣ ಮಂಟಪ ಸಮಿತಿ
- ಗ್ರಾಮವಿಕಾಸ್, ಮುಳಬಾಗಿಲು
- ಕೃಷಿ ಸಂಶೋಧನ ಕೇಂದ್ರ (ಭತ್ತ), ಶಿರಸಿ
- ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ

**ಪ್ರಚಾರ ಸಮಿತಿ:** ಶ್ರೀ ಎನ್. ಜಿ. ರಾಯ್ಸದ್ ಮತ್ತು ಶ್ರೀ ಅರವಿಂದಶೆಟ್ಟಿ

**ಊಟ ಸಮಿತಿ:** ಶ್ರೀ ಟಿ.ಜಿ. ನಾಡಿಗೇರ್, ಶ್ರೀ ಅಬ್ದುಲ್ ರವೂಫ್ ಶೇಖ್ ಶ್ರೀ ವಜ್ರನಾಭ್ ಬಳಿಗಾರ್ ಮತ್ತು ಶ್ರೀ ಜಗದೇಗೌಡರು

**ವಸತಿ ಸಮಿತಿ:** ಶ್ರೀ ಹಾಲಪ್ಪ ಎಸ್. ಕೆರೂಡಿ

### ನಿಮಗೆಲ್ಲಾ ಬೀಜ ಪ್ರೀತಿಯ ಆಮಂತ್ರಣ

| | |
|---|---|
| ಎನ್.ಆರ್. ಶೆಟ್ಟಿ<br>ಅಧ್ಯಕ್ಷರು, ಸಹಜ ಸಮೃದ್ಧ | ಅಣಿಕಟ್ಟೆ ವಿಶ್ವನಾಥ<br>ಭತ್ತ ಉತ್ಸವದ ಸಂಚಾಲಕರು |

ಶ್ರೀ ಮೃತ್ಯುಂಜಯ ಎಲಿಗಾರ್
ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಬನವಾಸಿ

## ಬನ್ನಿ! ಭತ್ತ ಉಳಿಸೋಣ

ಕೋಟ್ಯಾಂತರ ಜನರ ಅನ್ನದ ಬಟ್ಟಲು ತುಂಬುವ ಭತ್ತ ಏಷ್ಯಾದ ಪ್ರಮುಖ ಬೆಳೆ. ಭಾರತದ ರೈತರು ಏಳು ಸಾವಿರ ವರ್ಷಗಳಿಂದ ಭತ್ತದ ಕೃಷಿ ಮತ್ತು ಸಂಸ್ಕೃತಿಯನ್ನ ಪೋಷಿಸುತ್ತಾ ಬಂದಿದ್ದಾರೆ. ಆಯಾ ಪ್ರದೇಶ, ವಾತಾವರಣ, ಆಹಾರ ಪದ್ಧತಿಗೆ ಸೂಕ್ತವಾಗಬಲ್ಲ ವಿವಿಧ ಬಗೆಯ ಭತ್ತದ ತಳಿಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಪೀಳಿಗೆಯಿಂದ ಪೀಳಿಗೆಗೆ ಸಾಗಿಸಿ ತಂದಿದ್ದಾರೆ.

ಹಸಿರುಕ್ರಾಂತಿಯ ಹೆಸರಿನಲ್ಲಿ ರಾಸಾಯನಿಕ ಕೃಷಿ ಭತ್ತದ ಗದ್ದೆಗಳಿಗೆ ಕಾಲಿಟ್ಟಿತು. ಆಹಾರದ ರುಚಿ, ಮೇವಿನ ಗುಣಮಟ್ಟದಂತ ಗುಣಗಳು ಮೂಲೆಗುಂಪಾಗಿ ಅಧಿಕ ಇಳುವರಿ ಮಂತ್ರವಾಯಿತು. ಇದ್ದಬದ್ದ ನಾಡುತಳಿಗಳು ನಾಶವಾದವು. ಇದು ಸಾಲದೆಂಬಂತೆ ಭತ್ತದ ಕೃಷಿಗೆ ಹೊಸ ಗಂಡಾಂತರ ಎದುರಾಗಿದೆ. ಜೀನ್ ಕ್ರಾಂತಿಯ ಹೆಸರಲ್ಲಿ ಜೈವಿಕವಾಗಿ ಮಾರ್ಪಡಿಸಿದ ಭತ್ತದ ತಳಿಗಳು ಬರುತ್ತಿವೆ. ಮಾನ್ಸಂಟೋ, ಸಿಂಜಂಟಾದಂತ ಬಹುರಾಷ್ಟ್ರೀಯ ಬೀಜ ಕಂಪನಿಗಳ ಕೈಯಲ್ಲಿ ಭತ್ತ ಬಂದಿಯಾಗುತ್ತಿದೆ.

ಭತ್ತದ ಕೃಷಿ ಮತ್ತು ಸಂಸ್ಕೃತಿಯನ್ನು ಜೀವಂತವಾಗಿಡುವ ಉದ್ದೇಶದಿಂದ 'ಸಹಜ ಸಮೃದ್ಧ' ವಿವಿಧ ಸಂಸ್ಥೆಗಳ ಜೊತೆಗೂಡಿ ಜೂನ್ 7 ಮತ್ತು 8 ರಂದು ಭತ್ತ ಉತ್ಸವವನ್ನ ಏರ್ಪಡಿಸಿದೆ.

ಭತ್ತದ ತಳಿ ಸಂರಕ್ಷಕರು, ವಿಜ್ಞಾನಿಗಳು, ಅಕ್ಕಿ ಗಿರಣಿಯ ಮಾಲೀಕರು, ಸಾವಯವ ಭತ್ತ ಖರೀದಿದಾರರು, ಸಾವಯವ ಕೃಷಿಕರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಮಾಧ್ಯಮ ಗೆಳೆಯರು ಭತ್ತ ಉತ್ಸವದಲ್ಲಿ ಭಾಗವಹಿಸಲಿದ್ದಾರೆ.

ಭತ್ತದ ತಳಿಗಳ ಪ್ರದರ್ಶನ, ಅಕ್ಕಿಯ ವಿವಿಧ ಬಗೆಯ ಅಡುಗೆಗಳು, ಭತ್ತದ ತಳಿ ಅಭಿವೃದ್ಧಿ, ಭತ್ತದ ಸಾವಯವ ಮಾರುಕಟ್ಟೆ, ಭತ್ತದ ಸಂಸ್ಕೃತಿಯ ಪರಿಚಯದ ಮೂಲಕ ಭತ್ತ ಸಂರಕ್ಷಣೆಯ ಬೇರುಗಳನ್ನ ಗಟ್ಟಿಗೊಳಿಸಲ್ಲಿದ್ದಾರೆ.

**ಭತ್ತದ ಬೀಜ, ತೋರಣ, ತೆನೆ ಹಿಡಿದು ಉತ್ಸವಕ್ಕೆ ಬನ್ನಿ!**

### ಬನವಾಸಿಗೆ ಬರುವುದು ಹೀಗೆ....

ರಾಜ್ಯದ ಎಲ್ಲ ಮುಖ್ಯ ಸ್ಥಳಗಳಿಂದ ಶಿರಸಿಗೆ ಬಸ್ ಸೌಕರ್ಯವಿದೆ. ಶಿರಸಿಯಿಂದ ಬನವಾಸಿ 22 ಕಿ.ಮಿ. ದೂರದಲ್ಲಿದೆ. ಪ್ರತಿ ಅರ್ಧ ಘಂಟೆಗೊಂದು ಬಸ್ ಇದೆ ಟೆಂಪೋ ಕೂಡ ಸಿಗುತ್ತವೆ.

ಸಂಪರ್ಕ: ಶಾಂತಕುಮಾರ್- 9731275656

# ಭತ್ತ ಉತ್ಸವ

7 ಮತ್ತು 8 ಜೂನ್ 2008

ಬನವಾಸಿ, ಶಿರಸಿ ತಾಲ್ಲೂಕು



ಸಹಜ ಸಮೃದ್ಧ ಭತ್ತ ಉಳಿಸಿ ಆಂದೋಲನ

ಸಹಜ ಸಮೃದ್ಧ, 'ನಂದನ', ನಂ-7, 2ನೇ ಕ್ರಾಸ್, 7ನೇ ಮುಖ್ಯರಸ್ತೆ,
ಸುಲ್ತಾನಪಾಳ್ಯ, ಬೆಂಗಳೂರು - 560037
ಫೋನ್: 080-22715744 / ಶಾಂತಕುಮಾರ್- 9731275656

# ಕರ್ನಾಟಕದಲ್ಲಿ ಜನಸಹಭಾಗಿತ್ವದ ಅರಣ್ಯ ನಿರ್ವಹಣೆಗಾಗಿ ಆಂದೋಲನ

## ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆಯಿಂದ ನೈಜ ಜನಸಹಭಾಗಿತ್ವದ, ಸುಸ್ಥಿರ ಮತ್ತು ನ್ಯಾಯಪರವಾದ ಅರಣ್ಯ ನಿರ್ವಹಣೆಯ ವ್ಯವಸ್ಥೆಯೆಡೆಗೆ...

- ಕರ್ನಾಟಕದಲ್ಲಿ ಪ್ರಸ್ತುತದಲ್ಲಿ ಜಾರಿಯಿರುವ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆಯು ಅದರ ಪರಿಕಲ್ಪನೆ ಮತ್ತು ಅಳವಡಿಕೆಯಲ್ಲಿರುವ ಹಲವಾರು ಕುಂದು ಕೊರತೆಗಳ ಕಾರಣ, ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಒಂದು ನಿಜವಾದ ಜನಸಹಭಾಗಿತ್ವ ಅರಣ್ಯ ನಿರ್ವಹಣಾ ವ್ಯವಸ್ಥೆಯೆಡೆಗೆ ಮುನ್ನಡೆಯಬೇಕಾದರೆ, ಹಲವಾರು ಮೂಲಭೂತ ಬದಲಾವಣೆಗಳನ್ನು ಮಾಡಬೇಕಾಗುತ್ತದೆ.
- ಜನಸಹಭಾಗಿತ್ವ ಅರಣ್ಯ ನಿರ್ವಹಣೆಯು ಪ್ರಾಕೃತಿಕ ಸಂಪನ್ಮೂಲಗಳ ಆಡಳಿತದ ವ್ಯವಸ್ಥೆ. *ಅದು ಅಲ್ಪಾವಧಿಯ ಯೋಜನೆ ಅಥವಾ ಕಾರ್ಯಕ್ರಮ ಅಲ್ಲ.*
- ಅರಣ್ಯ ಮತ್ತು ಸಾರ್ವಜನಿಕ ಭೂಮಿಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಸೌಲಭ್ಯಗಳನ್ನು ಪಡೆದುಕೊಳ್ಳುವ ಎಲ್ಲಾ ಸಮುದಾಯಗಳ ಮೂಲಭೂತ ಹಕ್ಕು ಜನಸಹಭಾಗಿತ್ವ ಅರಣ್ಯ ನಿರ್ವಹಣೆ. ಈ ಹಕ್ಕನ್ನು ಕಾನೂನುಬದ್ಧವಾಗಿ ಕೊಡಬೇಕು ಮತ್ತು ರಾಜ್ಯದ ಎಲ್ಲಾ ಪ್ರದೇಶಗಳಿಗೂ ಅನ್ವಯಿಸಬೇಕು. ಅದು ಸರಕಾರಿ ಆದೇಶ ಅಥವಾ ಯೋಜನಾ ನಿಧಿಯ ಮೇಲೆ ಅವಲಂಬಿತವಾಗಿರಬಾರದು.
- ಜನಸಹಭಾಗಿತ್ವ ಅರಣ್ಯ ನಿರ್ವಹಣೆಯೆಡೆಗೆ ಚಲಿಸುವುದೆಂದರೆ, ಸ್ಥಳೀಯ ಸಂಸ್ಥೆಗಳು, ಅರಣ್ಯದ ಹೊರಗಿರುವ ಆಸಕ್ತಿ ಗುಂಪುಗಳು, ಮತ್ತು ಸರಕಾರಿ ಸಂಸ್ಥೆಗಳು – ಇವುಗಳ ಮಧ್ಯೆ ಹಕ್ಕು ಮತ್ತು ಜವಾಬ್ದಾರಿಗಳ ಪುನರ್‌ಹಂಚಿಕೆಯಾಗಬೇಕು. ಹೀಗೆ ಮಾಡಲು, ಬಹು ದೊಡ್ಡ ಮೊತ್ತದ ನಿಧಿಯ ಅಗತ್ಯವಿಲ್ಲ. ಆದ್ದರಿಂದ, ಅರಣ್ಯ ಅಭಿವೃದ್ಧಿ ಅಥವಾ ಜೆ.ಎಫ್.ಪಿ.ಎಂ.ನ ಹೆಸರಿನಲ್ಲಿ ಯೋಜನೆಗಳನ್ನು ಜಾರಿಗೊಳಿಸಲು ಸರಕಾರವು ಯಾವುದೇ ಸಾಲ ತೆಗೆದುಕೊಳ್ಳಬಾರದು. ಈಗಾಗಲೇ ತೆಗೆದುಕೊಂಡಿರುವ ಸಾಲಗಳಲ್ಲಿ ಉಳಿದಿರುವ ಮೊತ್ತವನ್ನು ಕೂಡಲೇ ಹಿಂದಿರುಗಿಸಬೇಕು.
- ಜನಸಹಭಾಗಿತ್ವ ನಿರ್ವಹಣೆಯು ಗ್ರಾಮಸ್ಥರು ಉಪಯೋಗಿಸುವ ಮತ್ತು ನಿರ್ವಹಿಸಲು ತಯಾರಿರುವ ಎಲ್ಲಾ ಸಾರ್ವಜನಿಕ ಭೂಮಿಗಳನ್ನು ಒಳಗೊಂಡಿರಬೇಕು, "ಅವನತಿಗೊಂಡಿರುವ ಅರಣ್ಯ" ಮಾತ್ರವಲ್ಲ.
- ಜನಸಹಭಾಗಿತ್ವ ನಿರ್ವಹಣೆಯು ರಕ್ಷಿತ ಪ್ರದೇಶಗಳಿಗೂ (ರಾಷ್ಟ್ರೀಯ ಉದ್ಯಾನ ಮತ್ತು ರಕ್ಷಿತಾರಣ್ಯಗಳು) ವ್ಯಾಪಿಸಬೇಕು. ಅದರೊಂದಿಗೆ, ಸರಿಯಾದ ರಕ್ಷಣೋಪಾಯಗಳು ಮತ್ತು ಪರಿಹಾರ ಸವಲತ್ತುಗಳಿರಬೇಕು.

- ಈ ಭೂಮಿಯೊಳಗೆ, ಗ್ರಾಮಸ್ಥರಿಗೆ ಅರಣ್ಯ ಉತ್ಪನ್ನಗಳನ್ನು ಪಡೆದುಕೊಂಡು ಬಳಸಿಕೊಳ್ಳುವ ಹಾಗೂ ಹೆಚ್ಚಿನ ಉತ್ಪನ್ನಗಳನ್ನು ಅರಣ್ಯದ ಸುಸ್ಥಿರತೆಗೆ ಹಾನಿಯಾಗದಂತೆ ಮಾರಾಟ ಮಾಡುವ ಹಕ್ಕು ಇರಬೇಕು. ಎನ್.ಟಿ.ಎಫ್.ಪಿ. (ಮರಮುಟ್ಟು ಹೊರತುಪಡಿಸಿ ಇತರ ಅರಣ್ಯ ಉತ್ಪನ್ನಗಳು) ಅಥವಾ ಬಿದ್ದಿರುವ/ಒಣಗಿರುವ ಮರಗಳ ಸಂಗ್ರಹಣೆ ಮಾಡಲು ಗುತ್ತಿಗೆದಾರರಿಗೆ ಕೊಟ್ಟಿರುವ ಗುತ್ತಿಗೆಯನ್ನು ರದ್ದು ಪಡಿಸಬೇಕು.
- ಸಾರ್ವಜನಿಕ ಭೂಮಿಯಲ್ಲಿ ಇರುವ ವೈಯುಕ್ತಿಕ ಹಕ್ಕುಗಳಾದ ಸೊಪ್ಪಿನಬೆಟ್ಟ, ಕುಮ್ಕಿ, ಬಾಣೆ, ಮುಂತಾದವುಗಳನ್ನು ಜನಸಹಭಾಗಿತ್ವ ನಿರ್ವಹಣೆಯಡಿಯಲ್ಲಿ ತರಬೇಕು. ಅಲ್ಲದೆ ಇದರೊಂದಿಗೆ, ಈ ಹಕ್ಕುಗಳಿಂದಾಗಿ ಗ್ರಾಮದೊಳಗೆ ನಿರ್ಮಿತಗೊಂಡಿರುವ ಅಸಮಾನತೆಯನ್ನು ತೆಗೆದುಹಾಕಲು ಅಥವಾ ಸರಿಪಡಿಸಲು ಬೇಕಾದ ವ್ಯವಸ್ಥೆಯನ್ನು ಮಾಡಬೇಕು. ವಲಸೆ ಹೋಗುವ ಸಮುದಾಯಗಳ ಸಾಂಪ್ರದಾಯಿಕ ಹಕ್ಕುಗಳನ್ನೂ ರಕ್ಷಿಸಬೇಕು.
- ಜನಸಹಭಾಗಿತ್ವ ನಿರ್ವಹಣೆಯ ಒಂದು ಘಟಕವು ಆ ಸಮುದಾಯಕ್ಕೆ ಅಗತ್ಯವೆನಿಸಿದರೆ ಒಂದು ರೆವೆನ್ಯೂ ಗ್ರಾಮದ ಒಳಗಿರುವ ಒಂದು ಹಳ್ಳಿಯಷ್ಟು ಚಿಕ್ಕದಾಗಿರಬಹುದು.
- ಗ್ರಾಮ ಅಥವಾ ಹಳ್ಳಿ ಮಟ್ಟದ ಸಂಸ್ಥೆಗಳಿಗೆ ಸಾರ್ವಜನಿಕ ಭೂಮಿಯಲ್ಲಿ ನಡೆಯುವ ಎಲ್ಲಾ ಅತಿಕ್ರಮಣ ಅಥವ ಒತ್ತುವರಿ ನಿಲ್ಲಿಸುವ ಹಾಗೂ ಅತಿ ಬಡ ಮತ್ತು ಭೂರಹಿತರನ್ನು ಬಿಟ್ಟು ಈಗಾಗಲೇ ನಡೆದ ಇತರ ಒತ್ತುವರಿಗಳನ್ನು ರದ್ದುಗೊಳಿಸಿ ತೆರವು ಮಾಡಿಸುವ ಹಕ್ಕು ಕೊಡಬೇಕು. ಈ ಸಂಸ್ಥೆಯ ವ್ಯಾಪ್ತಿಯೊಳಗೆ ಮತ್ತು ಆಚೆಗೆ ಸಂಪನ್ಮೂಲದ ಬಳಕೆಗೆ ನಿಬಂಧನೆಗಳನ್ನು ಹಾಕಲು ಮತ್ತು ಈ ನಿಬಂಧನೆಗಳನ್ನು ಉಲ್ಲಂಘಿಸಿದವರ ಮೇಲೆ ಕ್ರಮ ಕೈಗೊಳ್ಳಲು ಕಾನೂನಿನಡಿಯಲ್ಲಿ ಅಧಿಕಾರವಿರಬೇಕು.
- ಗ್ರಾಮ ಅಥವಾ ಹಳ್ಳಿ ಮಟ್ಟದ ಸಂಸ್ಥೆಗಳಿಗೆ ಅರಣ್ಯ ಮತ್ತು ಸಾರ್ವಜನಿಕ ಭೂಮಿಯ ದಿನನಿತ್ಯದ ನಿರ್ವಹಣೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಈ ನಿರ್ವಹಣಾ ಸಮಿತಿಯಲ್ಲಿ ಯಾವುದೇ ಅರಣ್ಯ ಅಧಿಕಾರಿ ಇರಬಾರದು. ಬೇಕಿದ್ದರೆ, ಸ್ಪರ್ಧಿಸುವ, ಚುನಾಯಿಸುವ ಹಕ್ಕಿಲ್ಲದೆ ಬರಿ ವೀಕ್ಷಕರಾಗಿ, ಆಹ್ವಾನಿತರಾಗಿ ಇರಬಹುದು. ಈ ಸಮಿತಿಯ ಗಡಿಯಲ್ಲಿರುವ ಎಲ್ಲಾ ವಯಸ್ಕರು ಸಂಸ್ಥೆಯ ಸಾಮಾನ್ಯ ಸಮಿತಿಯಲ್ಲಿ ಸದಸ್ಯರಾಗಿರಬೇಕು, ಹಾಗೂ ನಿರ್ವಹಣಾ ಸಮಿತಿಯು ಇವರಿಗೆ ಜವಾಬ್ದಾರಿಯುತವಾಗಿರಬೇಕು
- ಪರಿಸರದ ಸವಲತ್ತುಗಳು ಮತ್ತು ದೀರ್ಘಕಾಲದ ಸುಸ್ಥಿರತೆಯನ್ನು ದೃಢಪಡಿಸಲು ಸಹಭಾಗಿತ್ವ ರೀತಿಯಲ್ಲಿ ಸಂಪನ್ಮೂಲ ನಿರ್ವಹಣಾ ಮಾದರಿಗಳನ್ನು ಮೊದಲೇ ನಿಶ್ಚಯಿಸಿ ನಂತರ ಪಾರದರ್ಶಕ ರೀತಿಯಲ್ಲಿ ಅರಣ್ಯ ಇಲಾಖೆಯು ಅದನ್ನು ಅಳವಡಿಸಬೇಕು. ಇದರೊಂದಿಗೆ, ಗ್ರಾಮಸ್ಥರು ಕೇಳಿದಾಗಲೆಲ್ಲ ಅರಣ್ಯ ರಕ್ಷಣೆಗೆ ಅರಣ್ಯ ಇಲಾಖೆಯು ಸಹಾಯ ನೀಡಬೇಕು.
- ಗ್ರಾಮಗಳ ಮಧ್ಯೆ, ಗ್ರಾಮ ಮತ್ತು ಅರಣ್ಯ ಇಲಾಖೆಯ ಮಧ್ಯೆ ಹಾಗೂ ಗ್ರಾಮಗಳು ಮತ್ತು ಅರಣ್ಯದ ಹೊರಗಿರುವ ಆಸಕ್ತಿಗುಂಪುಗಳ ಮಧ್ಯೆ ಇರುವ ಬಿಕ್ಕಟ್ಟನ್ನು ಪರಿಹರಿಸಲು ಜಿಲ್ಲಾ ಮಟ್ಟದಲ್ಲಿ ಒಂದು ಅಧಿಕೃತ, ಕಾನೂನುಬದ್ಧ, ವಿವಿಧ ಅನೇಕ ಆಸಕ್ತಿ ಗುಂಪುಗಳಿರುವ ಸಮಿತಿಗೆ ಅಧಿಕಾರವಿರಬೇಕು.
- ಅರಣ್ಯ ಅಭಿವೃದ್ಧಿ ಏಜೆನ್ಸಿಯ ರಚನೆಯ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಬೇಕು. ಒಂದು ನಿಜವಾದ ಜನಸಹಭಾಗಿತ್ವ ನಿರ್ವಹಣೆಯ ವ್ಯವಸ್ಥೆ ಜಾರಿಗೆ ಬರುವವರೆಗೆ ಮತ್ತು ಅರಣ್ಯ ಅಭಿವೃದ್ಧಿ ಏಜೆನ್ಸಿಯ ರಚನೆಯನ್ನು ಸಾರ್ವಜನಿಕವಾಗಿ ಚರ್ಚೆ ಮಾಡಿ ಅದನ್ನು ಸರಿಯಾಗಿ ಬದಲಾಯಿಸುವವರೆಗೆ ಈ ಏಜೆನ್ಸಿ ಜಾರಿಗೆ ಬರಬಾರದು.

## ಜನಸಹಭಾಗಿತ್ವದ ಅರಣ್ಯ ನಿರ್ವಹಣೆಯ ಪರಿಕಲ್ಪನೆ, ಕರ್ನಾಟಕದ ಮೇಲೆ ಅದರ ವಿಚಾರಗಳು ಮತ್ತು ಪರಿಣಾಮ:

### ಹಿನ್ನೆಲೆ: ಜೆ.ಎಫ್.ಪಿ.ಎಂ.ನ ಅನುಭವ

*ಅರಣ್ಯಗಳನ್ನು ಹೇಗೆ ನಿರ್ವಹಿಸಬೇಕೆಂಬ ಪ್ರಶ್ನೆ ಗ್ರಾಮೀಣ ಜೀವನದ ಅವಶ್ಯಕತೆ ಮತ್ತು ಪರಿಸರಕ್ಕೆ ಸಂಬಂಧಿಸಿದ ಒಂದು ಅತಿ ಮುಖ್ಯ ವಿಚಾರವಾಗಿದೆ. ಸುಮಾರು ಹತ್ತು ವರ್ಷಗಳ ಹಿಂದೆ, ಅರಣ್ಯ ನಿರ್ವಹಣೆಯಲ್ಲಿ ಗ್ರಾಮೀಣ ಸಮುದಾಯಗಳ ಭಾಗವಹಿಸುವಿಕೆಯನ್ನು ಸರಕಾರ ಅಂಗೀಕರಿಸಿತು. ಅನೇಕ ಕಾರ್ಯಕರ್ತರು, ವಿದ್ವಾಂಸರು ಮತ್ತು ಗ್ರಾಮೀಣ ಸಮುದಾಯಗಳ ಒಗ್ಗೂಡುವಿಕೆ ಮತ್ತು ಸತತ ಪ್ರಯತ್ನದಿಂದಾಗಿ ಇದು ಸಾಧ್ಯವಾಯಿತು. ನಂತರ, ಈ ಪರಿಕಲ್ಪನೆಯನ್ನು ವಿವಿಧ ಜಂಟಿ ಅರಣ್ಯ ನಿರ್ವಹಣಾ ಯೋಜನೆಗಳ ಅಡಿಯಲ್ಲಿ ಅಳವಡಿಸಿಕೊಳ್ಳಲಾಯಿತು. ಕರ್ನಾಟಕದಲ್ಲಿ,* ***1993****ರಲ್ಲಿ, ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆಯ (ಜೆ.ಎಫ್.ಪಿ.ಎಂ.) ಆರಂಭವು ಬ್ರಿಟಿಷ್ ಸರಕಾರದ ಧನ ಸಹಾಯದಿಂದ ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯೊಂದಿಗೆ ಪ್ರಾರಂಭವಾಯಿತು. ಇಲ್ಲಿಯೂ ಕೂಡ, ಫೆವಾರ್ಡ್–ಕ* ***(FEVORD-K)*** *ಯ ಮುಂದಾಳತ್ವದಲ್ಲಿ, ಕಾರ್ಯಕರ್ತರು ಮತ್ತು ತಜ್ಞರ ಗುಂಪು ಜನರ ಭಾಗವಹಿಸುವಿಕೆಯು ಯೋಜನೆಯಲ್ಲಿ ಅಳವಡಿಕೆಯಾಗುವಂತೆ ನೋಡಿಕೊಂಡಿತು. ನಂತರ, ಅಂತರಾಷ್ಟ್ರೀಯ ಸಹಕಾರಕ್ಕಿರುವ ಜಪಾನೀಯ ಬ್ಯಾಂಕ್‌ನ* ***(Japanese Bank for International Co-operation)*** *ಸಾಲದ ಸಹಾಯದಿಂದ ನಡೆಯುತ್ತಿರುವ ಪೂರ್ವ ಬಯಲು ಸೀಮೆಯ ಅರಣ್ಯ ಯೋಜನೆಯಲ್ಲಿ* ***(Eastern Plains Forestry Project)*** *ಜೆ.ಎಫ್.ಪಿ.ಎಂ.ಅನ್ನು ಕೂಡ ಅಳವಡಿಸಿಕೊಳ್ಳಲಾಯಿತು.*

ಕರ್ನಾಟಕ ಅರಣ್ಯ ಇಲಾಖೆ ಜಾರಿಗೊಳಿಸಿರುವ ಜೆ.ಎಫ್.ಪಿ.ಎಂ.ನ ಕಳೆದ ಎಂಟು ವರ್ಷಗಳ ಅನುಭವ ಬಹಳ ಅತೃಪ್ತಿಕರವಾಗಿದೆ. ಜೆ.ಎಫ್.ಪಿ.ಎಂ. ಯೋಜನೆಯು ಜಾರಿಗೊಳ್ಳುತ್ತಿರುವ ಪ್ರದೇಶಗಳ ಗ್ರಾಮೀಣ ಸಮುದಾಯಗಳಲ್ಲಿ ಅರಣ್ಯ ನಿರ್ವಹಣೆಯ ಮಹತ್ವದ ಬಗ್ಗೆ ಆಸಕ್ತಿ ಮತ್ತು ಸಾಮಾನ್ಯ ಅರಿವನ್ನು ಮೂಡಿಸಿದ್ದರೂ ಕೂಡ ಅದು ಅರಣ್ಯದ ಅವನತಿ ಅಥವಾ ಅರಣ್ಯ ನಶಿಸುವುದರಲ್ಲಿ ಗಮನೀಯವಾದ ಯಾವುದೇ ಬದಲಾವಣೆ ತರಲಿಲ್ಲ. ಅಂತೆಯೇ, ಸ್ಥಳೀಯ ಸಮುದಾಯಗಳು ಆದಾಯದಲ್ಲಿ ಗಣನೀಯವಾಗಿ ಲಾಭವನ್ನು ಪಡೆದುಕೊಳ್ಳಲಿಲ್ಲ. ಅನೇಕ ಚರ್ಚೆಗಳು, ಅಧ್ಯಯನಗಳು, ಗ್ರಾಮಾರಣ್ಯ ಸಮಿತಿಗಳಿಂದ ಸಲಹೆಗಳು, ಸಮಾಲೋಚನೆಗಳು ಮತ್ತು ಸ್ವತಂತ್ರ ವಿಮರ್ಶೆಗಳಿಂದ ಕಂಡು ಬಂದಂತೆ, ಮೇಲಿನ ಸಮಸ್ಯೆಗಳಿಗೆ ಕಾರಣಗಳು ಈ ಕೆಳಗಿನಂತಿವೆ:

ಅ) ಜನರಿಗೆ ಅರಣ್ಯ ಉತ್ಪನ್ನಗಳ ಮೇಲೆ ಸ್ಪಷ್ಟ ಮತ್ತು ಸಾಕಷ್ಟು ಹಕ್ಕುಗಳ ಕೊರತೆ;

ಅ) ದಿನ ನಿತ್ಯದ ನಿರ್ವಹಣೆಯಲ್ಲಿ ಸ್ವಾತಂತ್ರ್ಯದ ಕೊರತೆ ಮತ್ತು ಪರಿಸರದ ಸುಸ್ಥಿರತೆಗೆ ಪಾರದರ್ಶಕ ಮಾರ್ಗದರ್ಶನದ ಕೊರತೆ;

ಇ) ಅಸ್ತಿತ್ವದಲ್ಲಿರುವ ಹಕ್ಕು ಮತ್ತು ಸೌಕರ್ಯಗಳ ಮೇಲೆ ಗಮನದ ಕೊರತೆಯಿಂದ ಹಳ್ಳಿ ಹಳ್ಳಿಗಳ ಮಧ್ಯೆ ಅರಣ್ಯದ ಅಸಮಾನ ಬಳಕೆಯ ಬಗ್ಗೆ ಗೊಂದಲಕ್ಕೆ ಎಡೆ ಮಾಡಿ ಕೊಡುತ್ತದೆ.

ಈ) ಜೆ.ಎಫ್.ಪಿ.ಎಂ.ನ ಅಳವಡಿಕೆಯು ಯೋಜನೆ ಮತ್ತು ಫಂಡ್ ಆಧಾರಿತವಾದ್ದರಿಂದ ಸಂಸ್ಥೆಗಳ ಸುಸ್ಥಿರತೆ ಮತ್ತು ಭದ್ರವಾದ ಅಧಿಕಾರದ ಅವಧಿಯ ಕೊರತೆ;

ಉ) ಯೋಜನೆಯಡಿಯಲ್ಲಿ ಅವನತಿಗೊಂಡ ಅರಣ್ಯ ಇಲಾಖೆಯ ಜಮೀನಿನ ಮೇಲೆ ಮಾತ್ರ ಕೇಂದ್ರೀಕರಣ. ಇದರಿಂದಾಗಿ, ಗ್ರಾಮಸ್ಥರು ಉಪಯೋಗಿಸುವ ಸಾರ್ವಜನಿಕ ಜಮೀನಿನ ಒಂದು ಸಣ್ಣ ಭಾಗ ಮಾತ್ರ ಯೋಜನೆಯಡಿಯಲ್ಲಿ ಬರುತ್ತದೆ.

ಇದಲ್ಲದೆ, ಜೆ.ಎಫ್.ಪಿ.ಎಂ.ಅನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿ ಅಳವಡಿಸಿಲ್ಲ ಹಾಗೂ ಸ್ಥಳೀಯ ಸಮುದಾಯಗಳು ಅದನ್ನು ಜಾರಿಗೊಳಿಸುವಂತೆ ಉತ್ತೇಜನ ನೀಡುವ ಪರಿಸ್ಥಿತಿಯಲ್ಲಿಲ್ಲ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ದೋಷಪೂರಿತವಾಗಿರುವುದು ಜೆ.ಎಫ್.ಪಿ.ಎಂ.ನ ಅನುಷ್ಠಾನ ಮಾತ್ರವೇ ಅಲ್ಲ. ಜೆ.ಎಫ್.ಪಿ.ಎಂ.ಅನ್ನು ನಿರ್ಮಿಸಿರುವ <u>ಪರಿಕಲ್ಪನೆ ಮತ್ತು ನೀತಿ ಚೌಕಟ್ಟುಗಳನ್ನೇ</u> ಸಂಪೂರ್ಣವಾಗಿ ಪುನರ್ ಪರೀಕ್ಷಿಸಬೇಕಾಗಿದೆ. ಹೀಗಾಗಿ, ಸಧ್ಯದ ಸ್ಥಿತಿಯಲ್ಲಿರುವಂತೆಯೇ, ಜೆ.ಎಫ್.ಪಿ.ಎಂ. ಮತ್ತು ಗ್ರಾಮೀಣ ಅರಣ್ಯ ಸಮಿತಿಯನ್ನು ಮುಂದುವರೆಸಲು ಬೆಂಬಲ ಕೊಡಲು ಸರಕಾರದ ಬದ್ಧತೆಯನ್ನು ಹಕ್ಕಿನಿಂದ ಕೇಳಬೇಕು; ಇದರೊಂದಿಗೆ, <u>ಜನಸಹಭಾಗಿತ್ವದ, ಸುಸ್ಥಿರವಾಗಿರುವ, ಮತ್ತು ಆರ್ಥಿಕವಾಗಿ ಸಬಲವಾಗಿರುವ ಅರಣ್ಯ ನಿರ್ವಹಣೆಯ ಆಂದೋಲನವನ್ನುಯನ್ನು ಪುನಶ್ಚೇತನಗೊಳಿಸುವ ಸಮಯವೂ ಬಂದಿದೆ.</u> ಆದ ಕಾರಣ, ಕರ್ನಾಟಕದ ಸನ್ನಿವೇಶದಲ್ಲಿ ಜನಸಹಭಾಗಿತ್ವ ಅರಣ್ಯ ನಿರ್ವಹಣೆಯ ಮೂಲಭೂತ ತಳಪಾಯವನ್ನು ಪುನರ್ ನಿರೂಪಿಸುವುದರೊಂದಿಗೆ ಈ ಆಂದೋಲನವನ್ನು ಪ್ರಾರಂಭ ಮಾಡಬೇಕಾಗುತ್ತದೆ. ಅಂತೆಯೇ, ಅಗತ್ಯವಿರುವ ನೀತಿ ಬದಲಾವಣೆಗಳನ್ನು ಕೂಡ ತೋರಿಸಿಕೊಡಬೇಕಾಗುತ್ತದೆ. ಈ ವಿಚಾರ ಪತ್ರವು ಇದನ್ನೇ ಮಾಡಲು ಪ್ರಯತ್ನಿಸುತ್ತದೆ.

## *ಸುಸ್ಥಿರ, ಸಮಾನ ಮತ್ತು ಜನಸಹಭಾಗಿತ್ವ ಅರಣ್ಯ ನಿರ್ವಹಣೆಯ ಮೂಲಭೂತ ತಳಹದಿ:*

*ಜನಸಹಭಾಗಿತ್ವ ಅರಣ್ಯ ನಿರ್ವಹಣೆ ಯಾಕೆ ಬೇಕು, ಅದರ ಮೂಲಭೂತ ತತ್ವಗಳು ಮತ್ತು ಕರ್ನಾಟಕದ ಸನ್ನಿವೇಶದಲ್ಲಿ ಅದರ ಸಾಧ್ಯತೆಗಳೇನು ಎಂಬುದನ್ನು ಕೆಳಗೆ ಸಂಕ್ಷಿಪ್ತವಾಗಿ ಕೊಡಲಾಗಿದೆ.*

ಅ) ಅರಣ್ಯವು ಸಮುದಾಯಗಳಿಗೆ ಅನೇಕ ಸೌಲಭ್ಯ, ಸವಲತ್ತುಗಳನ್ನು ನೀಡುತ್ತದೆ. ಇವುಗಳಲ್ಲಿ ಕಟ್ಟಿಗೆ, ಮರಮುಟ್ಟು, ಮೇವು, ಗೊಬ್ಬರ ಮತ್ತು ಇತರ ಅರಣ್ಯ ಉತ್ಪನ್ನಗಳೂ ಸೇರಿವೆ. ಕಣ್ಣಿಗೆ ಕಾಣಿಸದ ಸವಲತ್ತುಗಳಾದ ಅಂತರ್ಜಲ, ಮಣ್ಣಿನ ರಕ್ಷಣೆ, ಹವಾಗುಣ ಬದಲಾವಣೆ

ಮತ್ತು ಕಾಡು ಮೃಗಗಳಿಗೆ ವಾಸಕ್ಕೆ ಸ್ಥಳ ಮತ್ತು ಇತರ ಅಳತೆಗೆ ಸಿಗದ ಮಾನಸಿಕ ಸ್ಫೂರ್ತಿ ಮತ್ತು ಸೌಂದರ್ಯ ಸಂಬಂಧಿತ ಮೌಲ್ಯಗಳೂ ಇವುಗಳಲ್ಲಿ ಸೇರಿವೆ. ಈ ಸವಲತ್ತುಗಳು ವಿವಿಧ ಫಲಾನುಭವಿ ಗುಂಪುಗಳಿಗೆ ಹರಿದು ಹೋಗುತ್ತವೆ. ಈ ಫಲಾನುಭವಿಗಳಲ್ಲಿ ಕೆಲವರು ಮಾತ್ರ ಅರಣ್ಯದ ಸಮೀಪ ವಾಸಿಸುವರು. ಇತರರು ಜಲಾನಯನ ಪ್ರದೇಶದ ಕೆಳಗಿನ ದಂಡೆಯಲ್ಲಿ, ಅಥವಾ ಇಡೀ ಪ್ರದೇಶದಲ್ಲಿ ಅಥವಾ ದೇಶದಲ್ಲಿ ಅಥವಾ ಇಡೀ ಜಗತ್ತಿನಲ್ಲಿ ಕೂಡ ವಾಸಿಸುವವರು.

b) ಅರಣ್ಯ ನೀತಿ ಮತ್ತು ನಿರ್ವಹಣೆಯ ಮೂಲ ಸಮಸ್ಯೆ ಏನೆಂದರೆ, ಎಲ್ಲ ಒಳಿತುಗಳನ್ನೂ ಎಲ್ಲ ಫಲಾನುಭವಿಗಳಿಗೆ ಒಂದೇ ಸಮಯಕ್ಕೆ ಸಿಗುವ ಹಾಗೆ ಮಾಡಲು ಅಸಾಧ್ಯವಾಗುತ್ತದೆ. ಉದಾಹರಣೆಗೆ, ಒಂದು ಅರಣ್ಯವನ್ನು ಮರಮುಟ್ಟಿನ ಉತ್ಪಾದನೆಗೆ ನಿರ್ವಹಿಸುತ್ತಿದ್ದರೆ, ಅದು, ಕಟ್ಟಿಗೆ, ಮೇವು ಮತ್ತು ಗೊಬ್ಬರವನ್ನು ಅಧಿಕ ಪ್ರಮಾಣದಲ್ಲಿ ಕೊಡುವುದಿಲ್ಲ. ಅದಲ್ಲದೆ, ಆ ಅರಣ್ಯವು ಕಾಡು ಮೃಗಗಳಿಗೆ ಒಳ್ಳೆಯ ವಾಸ ಸ್ಥಳವಾಗುವುದಿಲ್ಲ. ಆದ್ದರಿಂದ, ಅರಣ್ಯವನ್ನು ಹೇಗೆ ನಿರ್ವಹಿಸಬೇಕೆನ್ನುವುದರಲ್ಲಿ ವಿವಿಧ ಫಲಾನುಭವಿಗಳ ಮಧ್ಯೆ ಘರ್ಷಣೆ ಉಂಟಾಗುತ್ತದೆ.

c) ಈ ಸಂದರ್ಭದಲ್ಲಿ, ದಿನನಿತ್ಯದ ಜೀವನದಲ್ಲಿ ಅರಣ್ಯವನ್ನು ಉಪಯೋಗಿಸುವ ಜನರನ್ನು ಪ್ರಾಥಮಿಕ ಆಸಕ್ತಿ ಗುಂಪುಗಳೆಂದು ಪರಿಗಣಿಸಬೇಕು. ಅಂತೆಯೆ, ಅರಣ್ಯದಿಂದ ದೂರ ವಾಸಿಸಿ ಅದರ ಪರಿಸರದಿಂದ ಪರೋಕ್ಷವಾಗಿ ಉಪಯೋಗ (ಮಣ್ಣು, ನೀರಿನ ರಕ್ಷಣೆ, ಹವಾಮಾನ ಬದಲಾವಣೆ ಅಥವಾ ಕಾಡು ಮೃಗಗಳಿಗೆ ರಕ್ಷಣೆ) ಪಡೆದುಕೊಳ್ಳುವ ಜನರನ್ನು ಎರಡನೆಯ ಆಸಕ್ತಿ ಗುಂಪುಗಳೆಂದು ಪರಿಗಣಿಸಬಹುದು.

d) ಎಲ್ಲಾ ಅರಣ್ಯ ಉತ್ಪನ್ನಗಳ ಮೇಲೆ ಪ್ರಾಥಮಿಕ ಆಸಕ್ತಿ ಗುಂಪುಗಳಿಗೆ ಮೊದಲ ಅಧಿಕಾರವಿರಬೇಕು. ಅವರು ಉಪಯೋಗಿಸುವ ಅರಣ್ಯದ ನಿರ್ವಹಣೆಯಲ್ಲಿಯೂ ಭಾಗವಹಿಸುವ ಮೂಲಭೂತ ಹಕ್ಕು ಅವರಿಗಿದೆ. ಆದರೆ, ಈ ಹಕ್ಕುಗಳ ಜೊತೆಗೆ, ಕೆಲವು ಜವಾಬ್ದಾರಿಗಳೂ ಸೇರಿಕೊಂಡಿವೆ. ಅವು ಯಾವುವೆಂದರೆ:

- ಅರಣ್ಯದಿಂದ ದೊರೆಯುವ ಸಂಪನ್ಮೂಲಗಳನ್ನು ಅಥವಾ ಉತ್ಪನ್ನಗಳನ್ನು ಎಲ್ಲರೂ ಹಂಚಿಕೊಂಡಿದ್ದಾರೆಯೇ ಎಂದು ನೋಡಿಕೊಳ್ಳುವುದು.
- ಅರಣ್ಯದ ದೀರ್ಘಕಾಲದ ಸುಸ್ಥಿರತೆಯನ್ನು ನೋಡಿಕೊಳ್ಳುವುದು.
- ಅರಣ್ಯದ ಹೊರಗೆ ವಾಸಿಸುವ ಆಸಕ್ತಿ ಗುಂಪುಗಳಿಗೂ ಅರಣ್ಯದ ಸೌಲಭ್ಯಗಳು ನಿರಂತರವಾಗಿ ಸಿಗುತ್ತಿರುವಂತೆ ನೋಡಿಕೊಳ್ಳುವುದು.

e) ಆದ್ದರಿಂದ, ಅರಣ್ಯ ನಿರ್ವಹಣೆಯ ಒಂದು ವಿಸ್ತಾರವಾದ ಮಾದರಿ ಹಾಗೂ ಅದರ ಪರಿವೀಕ್ಷಣೆ ಮತ್ತು ಜಾರಿಗೊಳಿಸುವ ಕ್ರಿಯೆಯನ್ನು ಗುರುತಿಸಿ ಅಳವಡಿಸುವುದು ಸರಕಾರದ ಮುಖ್ಯ ಪಾತ್ರ. ಇದರಿಂದ, ಸ್ಥಳೀಯವಾಗಿ ನ್ಯಾಯಬದ್ಧತೆ, ದೀರ್ಘಕಾಲದ ಸುಸ್ಥಿರತೆ ಮತ್ತು ಅರಣ್ಯದ ಹೊರಗಿರುವ ಕನಿಷ್ಠ ಫಲಾನುಭವದ ರಕ್ಷಣೆ ಸಾಧ್ಯವಾಗುತ್ತದೆ. ವಿವಿಧ ಸಾಂಸ್ಥಿಕ ಮಾದರಿಗಳ ಮೂಲಕ ಇದನ್ನು ಸಾಧಿಸಬಹುದು. ಎಲ್ಲ ಆಸಕ್ತಿ ಗುಂಪುಗಳ (ಪ್ರಾಥಮಿಕ ಮತ್ತು ಎರಡನೆಯ) ಪರವಾಗಿ ರಾಜ್ಯ ಅರಣ್ಯ ಇಲಾಖೆಯೇ ಸಂಪೂರ್ಣವಾಗಿ ನಿರ್ವಹಣೆಯನ್ನು ಮಾಡುವುದು ಸಾಂಪ್ರದಾಯಿಕ ಮಾದರಿ. ಆದರೆ ಈ ಮಾದರಿಯು ಅಸಮರ್ಥತೆ, ಅನ್ಯಾಯ ಮತ್ತು ಸುಸ್ಥಿರವಲ್ಲದ ಸ್ಥಿತಿಗೆ ಎಡೆಮಾಡಿಕೊಟ್ಟಿದೆ. ಇದೇ ಕಾರಣಗಳಿಂದಾಗಿ ಇನ್ನೂ ಉತ್ತಮವಾದ ಮಾದರಿಗಳಿಗಾಗಿ ಹುಡುಕಾಟ ಮತ್ತು ಜನಸಹಭಾಗಿತ್ವ ಅಥವಾ ಜಂಟಿ ಅರಣ್ಯ ನಿರ್ವಹಣಾ ಮಾದರಿಗಳು ಬೆಳೆದು ಬಂದಿವೆ.

f) ಪ್ರಸ್ತುತ ಸನ್ನಿವೇಶದಲ್ಲಿ, "ಜಂಟಿ ಅರಣ್ಯ ನಿರ್ವಹಣೆ" ಎಂದರೆ, ಗ್ರಾಮ ಮಟ್ಟದ ಅರಣ್ಯ ನಿರ್ವಹಣೆಯ ದಿನ ನಿತ್ಯದ ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಸರಕಾರದ ಅಧಿಕಾರಿ ವರ್ಗ ಪಾತ್ರ ವಹಿಸುತ್ತದೆ. ಆದರೆ ಇದರ ಅಗತ್ಯವಿಲ್ಲ. ಜಂಟಿ ನಿರ್ವಹಣೆಗೆ ಬೇಕಾಗಿರುವ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಸಾಮರ್ಥ್ಯವಿರುವ ಮತ್ತು ಸಿದ್ಧವಾಗಿರುವ ಜನರು ಸಾಕಷ್ಟು ಇರುವ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯು ನಿರ್ವಹಣಾ ಅಧಿಕಾರವನ್ನು ಜನರಿಗೇ ಬಿಟ್ಟುಕೊಡಬೇಕು. ಸರಕಾರವು ಮೊದಲಿಗೆ ಅರಣ್ಯದ ಬೇರೆ ಬೇರೆ ಪ್ರದೇಶ, ಸ್ಥಳಗಳನ್ನು ತೀರ್ಮಾನಿಸಿ, ಈ ಪ್ರದೇಶಗಳಿಗೆ ಸಂಬಂಧಿಸಿದ ವ್ಯಾಪ್ತಿಯೊಳಗೆ ಕೆಲಸ ಮಾಡುವ ಸಂಘ ಸಂಸ್ಥೆಗಳಿಗೆ ಕಾನೂನುಬದ್ಧತೆ ಕೊಡಬೇಕು. ಸರಕಾರದ ಎರಡನೆಯ ಮುಖ್ಯ ಜವಾಬ್ದಾರಿ, ಸಮಾಲೋಚನೆಗಳನ್ನು ಏರ್ಪಡಿಸಿ, ಅಲ್ಲಿ ಸಿಕ್ಕಿದ ಸಲಹೆಗಳಿಗನುಸಾರವಾಗಿ ನಿರ್ವಹಣೆಯ ಮಾದರಿಗಳನ್ನು ಹಾಕಿ, ಅವುಗಳನ್ನು ಜಾರಿಗೊಳಿಸುವುದು. ಹಾಗೆಯೆ, ಅರಣ್ಯ ರಕ್ಷಣೆಗೆ ಬೆಂಬಲಿತ ಸಹಕಾರವನ್ನು ನೀಡುವುದು, ಸಸಿಗಳನ್ನು ಬೆಳೆಸುವುದು (ಸಿಲ್ವಿಕಲ್ಚರ್), ಸಾಲ ಮತ್ತು ಮಾರುಕಟ್ಟೆಯ ಬಗ್ಗೆ ಸ್ಥಳೀಯ ಸಮುದಾಯಕ್ಕೆ ಅಗತ್ಯವಿದ್ದಾಗ ಮಾಹಿತಿಗಳನ್ನು ನೀಡುವುದು, ಮತ್ತು ಸಂಘರ್ಷ ಪರಿಹರಿಸುವುದು, ಇವೆಲ್ಲವೂ ಸರಕಾರದ ಜವಾಬ್ದಾರಿಯಾಗುತ್ತವೆ.

g) ಅಂತೆಯೆ, "ಜನಸಹಭಾಗಿತ್ವ ನಿರ್ವಹಣೆ" ಎಂದರೆ ಸರಕಾರ ಸಂಘ ಸಂಸ್ಥೆಗಳೊಂದಿಗೆ ಕೂಡಿ ಸಮುದಾಯ ಸಂಸ್ಥೆಗಳಿಂದ ಮಾತ್ರ ನಿರ್ವಹಣೆ ಎನ್ನುವ ಅರ್ಥವಲ್ಲ. ಪರಿವೀಕ್ಷಣೆ ಮತ್ತು ಜಾರಿಗೊಳಿಸುವುದನ್ನು ರಾಜ್ಯ ಸರಕಾರ ಮಾಡುವಾಗ, ಮತ್ತು ದಿನ ನಿತ್ಯದ ನಿರ್ವಹಣೆಯು ಒಬ್ಬೊಬ್ಬ ವ್ಯಕ್ತಿಯ ಕೈಯಲ್ಲಿ ಇರುವಾಗ, ಪರಿಸರ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳು ಹೊಸ ಮಾದರಿಗಳನ್ನು ರೂಪಿಸಲು ಅನುವು ಮಾಡಿಕೊಡಬಲ್ಲವು. ಹೀಗಾಗಿ, ಈಗ ಆಚರಣೆಯಲ್ಲಿರುವ ಏಕವ್ಯಕ್ತಿಪರವಾದ ಅರಣ್ಯ-ಹಕ್ಕುಗಳು (ಸೊಪ್ಪಿನಬೆಟ್ಟ,

ಕುಮ್ಕಿ, ಬಾಣೆ, ಮುಂತಾದವುಗಳು) ಜಂಟಿ ನಿರ್ವಹಣೆಗೆ ಉದಾಹರಣೆಗಳಾಗಬಲ್ಲವು. ಆದರೆ ಪ್ರಸ್ತುತದಲ್ಲಿ, ಈ ಅಧಿಕಾರಗಳು ಸಾಮಾನ್ಯವಾಗಿ ಹಳ್ಳಿಗಳ ಒಳಗೆ ಅತಿಯಾದ ಅಸಮಾನತೆಗಳನ್ನು ಹುಟ್ಟುಹಾಕಿವೆ. ಉದಾಹರಣೆಗೆ, ದೊಡ್ಡ ಸೊಪ್ಪಿನಬೆಟ್ಟಗಳನ್ನು ಹಿಂದಿನಿಂದಲೂ ಅಡಿಕೆ ಬೆಳೆಸಿಕೊಂಡು ಬರುತ್ತಿರುವವರಿಗೆ ಕೊಡಲಾಗುತ್ತದೆ. ಅವರಿಗೆ ಜಂಟಿ ಅರಣ್ಯ ಕಾರ್ಯಕ್ರಮದ ಲಾಭವು ದೊರೆಯುತ್ತದೆ. ಈ ಅಸಮಾನತೆಗಳನ್ನು ತೆಗೆದುಹಾಕಿ ಈ ಪರಿವೀಕ್ಷಣೆಯನ್ನು ಬಲಗೊಳಿಸಿದರೆ, ಅವುಗಳು ಸಹ ಸಮುದಾಯದ ಅಧೀನದಲ್ಲಿರುವ ಅರಣ್ಯ ನಿರ್ವಹಣೆಯ ಜೊತೆಯಾಗಿ ಇರಬಹುದು.

h) ಜನರಿಂದ ಉಪಯೋಗಿಸಲ್ಪಡುವ ಅರಣ್ಯಗಳಲ್ಲಿ, "ಅರಣ್ಯ" ಎಂದರೆ ವಿವಿಧ ಉತ್ಪನ್ನಗಳನ್ನು ಕೊಡುವ ಎಲ್ಲಾ ರೀತಿಯ ಸಸ್ಯರಾಶಿ. ಇವು ಜನರು ನೆಟ್ಟು ಬೆಳೆಸಿದ ಮರಗಳಲ್ಲ. ಮುಕ್ತ ಅರಣ್ಯ, ಮಾಧ್ಯಮಿಕ ಅರಣ್ಯ, ಟ್ರೀ ಸವನ್ನಗಳು, ಹುಲ್ಲುಗಾಡುಗಳು ಮತ್ತು ಪೊದೆಗಳು ಕೂಡ ಸೇರಿದ ಸಸ್ಯ ವರ್ಗದ ರೀತಿಗಳು, ಗ್ರಾಮೀಣ ವರ್ಗ, ಅದರಲ್ಲೂ ಬಡವರಿಗೆ ಕಟ್ಟಿಗೆ, ಎಲೆ ಗೊಬ್ಬರ ಮತ್ತು ಮರಮುಟ್ಟುಗಳಂತಹ ಇತರ ಅರಣ್ಯ ಉತ್ಪಾದನೆಗಳನ್ನು ಒದಗಿಸುವ ಮುಖ್ಯ ಮೂಲವಾಗಿವೆ. ಇದಲ್ಲದೆ, ಈ ರೀತಿಯ ಸಸ್ಯ ವರ್ಗಗಳು ಜೈವಿಕ ವೈವಿಧ್ಯತೆ ಮತ್ತು ಜಲಾನಯನ ಸೌಲಭ್ಯಗಳ ಸಂರಕ್ಷಣೆ ಬಹು ಮಟ್ಟಿಗೆ ಹೊಂದಿಕೆಯಾಗುತ್ತವೆ. ಆದರೆ ಅದು ಸಾಧ್ಯವಾಗುವುದು ಈ ಸಸ್ಯ ವರ್ಗಗಳು ಇತರ ದಟ್ಟವಾದ ಸಸ್ಯ ವರ್ಗಗಳೊಂದಿಗೆ ಸೇರಿಕೊಂಡಾಗ ಮಾತ್ರ. ಹೀಗಾಗಿ, *ಸಮುದಾಯವು ತಾನು ಉಪಯೋಗಿಸುತ್ತಿರುವ ಅರಣ್ಯವನ್ನು ಸುಸ್ಥಿರವಾಗಿ ನಿರ್ವಹಿಸುತ್ತಿರುವ ತನಕ ಸವನ್ನಗಳು, ಮುಕ್ತ ಅರಣ್ಯಗಳು ಅಥವಾ ಹುಲ್ಲುಗಾಡುಗಳಿಗೆ ಸ್ವಲ್ಪವಾದರೂ ಎಡೆ ಮಾಡಿ ಕೊಡುವುದಕ್ಕೆ ಅನುವು ಮಾಡಿ ಕೊಡಬೇಕು.*

i) ಅಂತೆಯೆ, ಗ್ರಾಮಸ್ಥರು ಅರಣ್ಯ ಇಲಾಖೆಯ ಭೂಮಿ ಮಾತ್ರವಲ್ಲದೆ, ಎಲ್ಲ ಸಾರ್ವಜನಿಕ ಭೂಮಿಯಿಂದ ಸಂಪನ್ಮೂಲಗಳನ್ನು ಸಂಗ್ರಹಿಸಿ ಉಪಯೋಗಿಸುತ್ತಾರೆ. ಹೀಗಾಗಿ, ಒಂದು ಅರ್ಥಪೂರ್ಣವಾದ ನಿರ್ವಹಣಾ ಸಂಸ್ಥೆಯು ಎಲ್ಲ ಸಾರ್ವಜನಿಕ ಭೂಮಿಯನ್ನು ನಿರ್ವಹಿಸಬೇಕು. ಕರ್ನಾಟಕದ ದೃಷ್ಟಿಯಲ್ಲಿ ಇದು ಅತಿ ಮುಖ್ಯ, ಏಕೆಂದರೆ ಬಹುತೇಕ ವ್ಯವಸಾಯ ಮಾಡದೆ ಇರುವ ಭೂಮಿ ಅಥವಾ ಅರಣ್ಯಗಳು ರೆವೆನ್ಯೂ ಇಲಾಖೆಯ ಅಧೀನದಲ್ಲಿದೆ.

j) ಸ್ಥಳೀಯ ಸಮುದಾಯಗಳಿಗೆ ಸಂಗ್ರಹಣೆ ಮತ್ತು ನಿರ್ವಹಣೆ ಮಾಡಲು ಸ್ಪಷ್ಟವಾಗಿರುವ ಹಕ್ಕುಗಳನ್ನು ಸಾಕಷ್ಟು ಕೊಟ್ಟರೆ, ಅರಣ್ಯದ ಸುಸ್ಥಿರತೆಯನ್ನು ನೋಡಿಕೊಳ್ಳುವುದರೊಂದಿಗೆ, ಅರಣ್ಯದಿಂದ ಬಹು ದೊಡ್ಡ ರೀತಿಯ ಪ್ರಯೋಜನಗಳನ್ನು ಪಡೆದುಕೊಳ್ಳಲು ಸಾಧ್ಯವಾಗಬಹುದು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಪೂರಕವಾದ ಸಂಸ್ಥೆಗಳು

ಮತ್ತು ಕೃಷಿ ವಿಧಾನಗಳು ಸೂಕ್ತ ರೀತಿಯಲ್ಲಿ ಕೆಲಸ ಮಾಡುತ್ತಿದ್ದರೆ, ಪರಿಸರದ ಆರೋಗ್ಯ ಮತ್ತು ಆರ್ಥಿಕ ಪ್ರಯೋಜಕತೆ ಒಂದಕ್ಕೊಂದು ಹೊಂದಿಕೆಯಾಗುತ್ತದೆ.

k) ಸರಕಾರದ ಅಧೀನದಲ್ಲಿರುವ ಸಾಂಪ್ರದಾಯಿಕ ಅರಣ್ಯ ನಿರ್ವಹಣೆಯಿಂದ ಸಂಪೂರ್ಣ ಜನಸಹಭಾಗಿತ್ವ ಅರಣ್ಯ ನಿರ್ವಹಣೆಗೆ ಬದಲಾಯಿಸಬೇಕಾದರೆ, ಸ್ಥಳೀಯ ಸಮುದಾಯಗಳು, ಸಮಾಜ, ಮತ್ತು ಸರಕಾರಿ ಇಲಾಖೆಗಳ ಮಧ್ಯೆ ಅರಣ್ಯದ ನಿರ್ವಹಣೆಯ ಪಾತ್ರ ಮತ್ತು ಜವಾಬ್ದಾರಿಗಳ ಪುನರ್‌ಹಂಚಿಕೆಯಾಗಬೇಕು. ಒಂದು ಉತ್ತಮ ಸಾಂಸ್ಥಿಕ ವ್ಯವಸ್ಥೆಯ ರಚನೆ, ಅರಣ್ಯಕ್ಕೆ ಹಣಕಾಸು ಯೋಜನೆಯನ್ನು (ಬಜೆಟ್) ಮರುನಿರ್ದೇಶಿಸುವುದು, ಹಾಗೂ ಸರಕಾರದ ಆಡಳಿತ ವರ್ಗಕ್ಕೆ ಪ್ರೇರಣೆ, ಇವೆಲ್ಲದರ ಅಗತ್ಯವಿದೆ. ಈ ಯಾವುದೇ ಕೆಲಸವನ್ನು ಮಾಡಲೂ, ದೊಡ್ಡ ಮೊತ್ತದ ಹಣದ ಅವಶ್ಯಕತೆ ಇಲ್ಲ. ಅರಣ್ಯ ಪುನರುತ್ಥಾನದ ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಹಣಕಾಸಿನ ಬೆಂಬಲ ಬೇಕಾಗಬಹುದು. ಆದರೆ, ಸಾಂಸ್ಥಿಕ ಬದಲಾವಣೆಗಳನ್ನು ಮಾಡಿದ ನಂತರವೇ ಇದರ ಬಗ್ಗೆ ಯೋಚಿಸಬೇಕು.

## ಕರ್ನಾಟಕದ ಸಂದರ್ಭದಲ್ಲಿ ವಿಶಾಲ ಧೋರಣೆಯ ಪರಿಣಾಮಗಳು:

ಮೇಲೆ ಕೊಟ್ಟಿರುವ ಮುಖ್ಯ ಅಂಶಗಳಂತೆ ಜಂಟಿ ಅರಣ್ಯ ನಿರ್ವಹಣೆಯನ್ನು ಅಳವಡಿಸಿಕೊಳ್ಳಬೇಕಾದರೆ, ಮೂಲಭೂತ ನೀತಿಯಲ್ಲಿ ಬದಲಾವಣೆಗಳು ಬೇಕಾಗುತ್ತವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಇವುಗಳಲ್ಲಿ ಈ ಕೆಳಗಿನವು ಸೇರುತ್ತವೆ:

1. ಜನಸಹಭಾಗಿತ್ವ ಅರಣ್ಯ ನಿರ್ವಹಣೆ ಜನರ ಒಂದು ಮೂಲಭೂತ ಹಕ್ಕಾದರೆ, ಅದು ತನ್ನ ಅಳವಡಿಕೆಗೆ ಒಂದು ಯೋಜನೆ ಅಥವಾ ಕಾರ್ಯಕ್ರಮದ ಮೇಲೆ ಅವಲಂಬಿತವಾಗಿರುವುದು ಸಾಧ್ಯವಿಲ್ಲ. ಅಂತೆಯೆ, ಅದನ್ನು ಬರೀ ಯೋಜನೆ-ಬೆಂಬಲಿತ ಪ್ರದೇಶಗಳಿಗೆ ಸೀಮಿತವಾಗಿಡಲು ಸಾಧ್ಯವಿಲ್ಲ. ಆಡಳಿತ ವ್ಯವಸ್ಥೆಯನ್ನು ಪಂಚಾಯತ್ ರಾಜ್ ವ್ಯವಸ್ಥೆಗೆ ಬದಲಾಯಿಸಿದಂತೆ, ಜನಸಹಭಾಗಿತ್ವ ಅರಣ್ಯ ನಿರ್ವಹಣೆಯೂ ಕೂಡ ಬದಲಾವಣೆ ಆಗಬೇಕು. ಅರ್ಥವತ್ತಾದ ನೀತಿ ಬದಲಾವಣೆಗಳಿಂದ ಪ್ರಾರಂಭವಾಗಿ, ಅದು ಆಡಳಿತ ವ್ಯವಸ್ಥೆಯಲ್ಲಿನ ಬದಲಾವಣೆ ಆಗಬೇಕು. ಅಗತ್ಯವಿರುವ ಕಾನೂನಾತ್ಮಕ, ಆಡಳಿತಾತ್ಮಕ ಮತ್ತು ಹಣಕಾಸಿನ ಬದಲಾವಣೆ ಕೂಡ ಇದರೊಟ್ಟಿಗೆ ಆಗಬೇಕು.

2. ಜನಸಹಭಾಗಿತ್ವ ಅರಣ್ಯ ನಿರ್ವಹಣೆಯ ಹಕ್ಕು ಕಾನೂನು ಬದ್ಧವಾಗಿರಬೇಕು. ಆದ್ದರಿಂದ, ಜನಸಹಭಾಗಿತ್ವ ನಿರ್ವಹಣೆಯನ್ನು ಒಂದು ಹೊಸ ಕಾಯ್ದೆಯ ಮೂಲಕ ಅಳವಡಿಸಬೇಕು, ಸರಕಾರಿ ಆದೇಶದ ಮೂಲಕ ಅಲ್ಲ. ಎಲ್ಲಾ ಕಡೆಗಳಲ್ಲಿಯೂ ಜನಸಹಭಾಗಿತ್ವ

ವ್ಯವಸ್ಥೆಯನ್ನು ತರುವಂತೆ ಈ ಕಾಯ್ದೆಯು ಸರಕಾರವನ್ನು ಬದ್ಧಗೊಳಿಸಬೇಕು.

3. ಮೇಲಾಗಿ, ಜನಸಹಭಾಗಿತ್ವ ಅರಣ್ಯ ನಿರ್ವಹಣೆಗೆ ಪರಿವರ್ತಿಸಲು ದೊಡ್ಡ ಮೊತ್ತದ ಹಣಕಾಸು ಬೆಂಬಲ ಬೇಕಾಗಿಲ್ಲದ್ದರಿಂದ, ಹಾಗೂ ಅರಣ್ಯ ನೀತಿಯ ಮುಖ್ಯ ಉದ್ದೇಶ ಪರಿಸರ ಮತ್ತು ಜೀವನಾಧಾರಕ್ಕೆ ಸಿಗುವ ಸವಲತ್ತುಗಳನ್ನು ಇನ್ನೂ ಉತ್ತಮ ಪಡಿಸುವುದಾದ್ದರಿಂದ, ರಾಜ್ಯ ಸರಕಾರವು ಜೆ.ಎಫ್.ಪಿ.ಎಂ.ನ ಅಳವಡಿಕೆಗೆ ಅಥವಾ ಅರಣ್ಯ ಅಭಿವೃದ್ಧಿಗೆ ಸಾಲ ತೆಗೆದುಕೊಳ್ಳುವುದನ್ನು (ವಿದೇಶಿ ಅಥವಾ ಭಾರತದಿಂದಲೇ) ಸಂಪೂರ್ಣವಾಗಿ ನಿಲ್ಲಿಸಬೇಕು.

4. ಜನಸಹಭಾಗಿತ್ವ ನಿರ್ವಹಣಾ ವ್ಯವಸ್ಥೆಯಲ್ಲಿ, ಹಳ್ಳಿ ಮಟ್ಟದ ಸಂಸ್ಥೆಗಳು ಬಯೊಮಾಸ್ ಸಂಪನ್ಮೂಲಗಳನ್ನು ಹೊರ ತೆಗೆಯಲು ಹಳ್ಳಿಯ ಸಮುದಾಯ ಉಪಯೋಗಿಸುವ ಎಲ್ಲ ಸಾರ್ವಜನಿಕ ಭೂಮಿಯನ್ನೂ ಆಡಳಿತ ನಡೆಸಬೇಕು. ಇದನ್ನು ಗ್ರಾಮಸ್ಥರು ನಿರ್ವಹಿಸಲು ಸಿದ್ಧವಾಗಿರಬೇಕು ಹಾಗೂ ಆ ಭೂಮಿ ಯಾವ ಸ್ಥಿತಿಯಲ್ಲಿದೆ, ಅಥವಾ ಕಾನೂನಿನಡಿಯಲ್ಲಿ ಅದರ ಸ್ಥಾನ ಏನು ಎಂಬುದು ಗಣನೆಗೆ ತೆಗೆದುಕೊಳ್ಳಬಾರದು. ಈ ಭೂಮಿಗಳಲ್ಲಿ ಅವನತಿಗೊಂಡಿರುವ ಮತ್ತು ಅವನತಿಗೊಳ್ಳದಿರುವ ಅರಣ್ಯ ಇಲಾಖೆಯ ಭೂಮಿ, ಗೋಮಾಳ, ಅಳತೆ ಮಾಡಿದ ಬಂಜರು ಭೂಮಿ, ಪೈಸಾರಿಗಳು, ಇತರ ರೆವೆನ್ಯೂ ಇಲಾಖೆ, ಪಂಚಾಯತ್ ಮತ್ತು ಇತರ ಸಾಮಾನ್ಯ ಭೂಮಿಗಳು ಸೇರುತ್ತವೆ. ಉಪಯೋಗಿಸುತ್ತಿರುವ ಪ್ರದೇಶ ಮತ್ತು ಅವುಗಳನ್ನು ಉಪಯೋಗಿಸುತ್ತಿರುವವರು ಯಾರು ಎಂಬುದನ್ನು ಸ್ಪಷ್ಟಪಡಿಸಲು ಸಾರ್ವಜನಿಕ ಭೂಮಿಗಳ ಸರ್ವೆ ಮತ್ತು ಪುನರ್‌ಸರ್ವೆ ಮತ್ತು ಪುನರ್‌ನೆಲೆಸುವಿಕೆಯನ್ನು ಅಗತ್ಯವಿರುವಲ್ಲೆಲ್ಲ ಆದಷ್ಟು ಬೇಗ ನಡೆಸಬೇಕು.

5. ಜನಸಹಭಾಗಿತ್ವ ಅರಣ್ಯ ನಿರ್ವಹಣೆಯು ರಕ್ಷಿತ ಪ್ರದೇಶಗಳಿಗೂ ವ್ಯಾಪಿಸಬೇಕು (ರಾಷ್ಟ್ರೀಯ ಉದ್ಯಾನಗಳು ಮತ್ತು ರಕ್ಷಿತಾರಣ್ಯಗಳು). ಆದರೆ ಇಲ್ಲಿ, ಜೈವಿಕ ವೈವಿಧ್ಯತೆ ಮತ್ತು ಕಾಡುಪ್ರಾಣಿಗಳನ್ನು ರಕ್ಷಿಸಲು ವಿಶೇಷ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅಂತೆಯೆ, ಸ್ಥಳೀಯ ಸಮುದಾಯಗಳಿಗೆ ಅಂದರೆ ಆದಿವಾಸಿ ಮತ್ತು ಅರಣ್ಯ ಅವಲಂಬಿತರು ತರಿಗೆ ಇತರ ಸಂಪನ್ಮೂಲಗಳಲ್ಲಿ ಪಾಲು ಕೊಡಬೇಕಾಗುತ್ತದೆ.

6. ಪ್ರಾರಂಭದಲ್ಲಿ, ರೆವೆನ್ಯೂ ಗ್ರಾಮವನ್ನು ನಿರ್ವಹಣೆಯ ಒಂದು ಘಟಕವಾಗಿ ತೆಗೆದುಕೊಳ್ಳಬಹುದು. ಆದರೆ, ರೆವೆನ್ಯೂ ಗ್ರಾಮದೊಳಗಿರುವ ಸಣ್ಣ ಹಳ್ಳಿಗಳಿಗೆ ಅವರಿಗೆ ಇಚ್ಛೆಯಿದ್ದರೆ ಪ್ರತ್ಯೇಕ ನಿರ್ವಹಣಾ ವ್ಯವಸ್ಥೆ ಮಾಡಿಕೊಳ್ಳಲು ಅನುಮತಿ ನೀಡಬೇಕು. ಪುನರ್ವಸತಿ ಪ್ರಕ್ರಿಯೆಯ ಮೂಲಕ ರೆವೆನ್ಯೂ ಗ್ರಾಮದ ಹೊರಗೆ ಮತ್ತು ಒಳಗಿನ ಗಡಿಯನ್ನು ನಿರ್ಣಯಿಸಬೇಕು.

7. ಗ್ರಾಮಸ್ಥರಿಗೆ ನಿರ್ವಹಿಸಲು ಕೊಟ್ಟಿರುವ ಪ್ರದೇಶದಲ್ಲಿ, ಅವರಿಗೆ ಎಲ್ಲಾ ಅರಣ್ಯ ಉತ್ಪನ್ನಗಳ ಮೇಲೆ ಸಂಪೂರ್ಣ ಹಕ್ಕು (100% ಪಾಲು) ಕೊಟ್ಟಿರಬೇಕು. ಅಂತೆಯೆ, ಆ ಭೂಮಿಯಲ್ಲಿ ಗ್ರಾಮಸ್ಥರಿಗೆ ಅರಣ್ಯ ಉತ್ಪನ್ನಗಳನ್ನು ಪಡೆದುಕೊಂಡು ಬಳಸಿಕೊಳ್ಳುವ ಹಾಗೂ ಹೆಚ್ಚಿನ ಉತ್ಪನ್ನಗಳನ್ನು ಅರಣ್ಯದ ಸುಸ್ಥಿರತೆಗೆ ಹಾನಿಯಾಗದಂತೆ ಮಾರಾಟ ಮಾಡುವ ಹಕ್ಕು ಇರಬೇಕು. ಸರ್ಕಾರಕ್ಕೆ ಅವರು ಕೊಟ್ಟಿರುವ ಬೆಂಬಲಿತ ಸೇವೆಗೆ ಮಾತ್ರ ಶುಲ್ಕ ಕೊಡುವಂತಿರಬೇಕು. ಉದಾಹರಣೆಗೆ, ರಕ್ಷಣೆ, ಸಾಲ, ಮಾರುಕಟ್ಟೆ, ವ್ಯವಸ್ಥೆ, ಇತ್ಯಾದಿಗಳಲ್ಲಿ ಸರ್ಕಾರ ಕೊಟ್ಟಿರುವ ಬೆಂಬಲಿತ ಸೇವೆ. ಎನ್.ಟಿ.ಎಫ್.ಪಿ. (ಮರಮುಟ್ಟು ಹೊರತುಪಡಿಸಿ ಇತರ ಅರಣ್ಯ ಉತ್ಪನ್ನಗಳು) ಅಥವಾ ಬಿದ್ದಿರುವ/ಒಣಗಿರುವ ಮರಗಳ ಸಂಗ್ರಹಣೆ ಮಾಡಲು ಗುತ್ತಿಗೆದಾರರಿಗೆ ಕೊಟ್ಟಿರುವ ಗುತ್ತಿಗೆಯನ್ನು ರದ್ದು ಪಡಿಸಬೇಕು. ಗ್ರಾಮದ ಒಳಗೆಯೆ, ಜೀವನಾಧಾರದ ಅವಶ್ಯಕತೆಗಳನ್ನು ಪೂರೈಸಿಕೊಂಡು, ಉಳಿದದ್ದನ್ನು ಮಾತ್ರ ಮಾರಾಟ ಮಾಡಬೇಕು. ಜನರ ಶ್ರಮಕ್ಕೆ ಅನುಸಾರವಾಗಿ ಸವಲತ್ತುಗಳನ್ನು ಹಂಚಬೇಕು.

8. ಈಗ ಅಸ್ತಿತ್ವದಲ್ಲಿರುವ ಸೊಪ್ಪಿನಬೆಟ್ಟಗಳು, ಕುಮ್ಕಿಗಳು ಮತ್ತು ಬಾಣೆಗಳಂತಹ ಅರಣ್ಯ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಜಂಟಿ ಅರಣ್ಯ ನಿರ್ವಹಣೆಯ ಕ್ಷೇತ್ರದೊಳಗೆ ತರಬೇಕು. ಆದರೆ, ಗ್ರಾಮದೊಳಗೆ ಈ ಹಕ್ಕುಗಳು ಮತ್ತು ಸೌಲಭ್ಯಗಳು ಸೃಷ್ಟಿಸಿರುವ ಅಸಮಾನತೆಗಳನ್ನು ತೆಗೆದುಹಾಕಲು ಸ್ಪಷ್ಟ ನೀತಿಗಳನ್ನು ಸಂದರ್ಭಕ್ಕೆ ಅನುಸಾರವಾಗಿ ರೂಪಿಸಬೇಕು.

9. ಸಾರ್ವಜನಿಕ ಭೂಮಿಯಲ್ಲಿ ಮುಂದೆ ನಡೆಯಬಹುದಾದ ಎಲ್ಲಾ ಅತಿಕ್ರಮಣಗಳನ್ನು ನಿಲ್ಲಿಸುವ ಜವಾಬ್ದಾರಿ ಗ್ರಾಮ–ಮಟ್ಟದ ಸಂಸ್ಥೆಯದ್ದಾಗಬೇಕು. ಈಗಾಗಲೇ ಆಗಿರುವ ಅತಿಕ್ರಮಣಗಳಲ್ಲಿ, ಭೂಮಿ ಇಲ್ಲದ ಅತಿ ಬಡವರನ್ನು ಮಾತ್ರ ಇರಲು ಬಿಡಬೇಕು. ಉಳಿದವರನ್ನು, ಪುನರ್‌ಸರ್ವೆಯ ನಂತರ ಅಲ್ಲಿಂದ ಎಬ್ಬಿಸಬೇಕು. ಈ ಸಂಸ್ಥೆಯ ವ್ಯಾಪ್ತಿಯೊಳಗೆ ಮತ್ತು ಆಚೆಗೆ ಸಂಪನ್ಮೂಲದ ಬಳಕೆಗೆ ನಿಬಂಧನೆಗಳನ್ನು ಹಾಕಲು ಮತ್ತು ಈ ನಿಬಂಧನೆಗಳನ್ನು ಉಲ್ಲಂಘಿಸಿದವರ ಮೇಲೆ ಕ್ರಮ ಕೈಗೊಳ್ಳಲು ಕಾನೂನಿನಡಿಯಲ್ಲಿ ಅಧಿಕಾರವಿರಬೇಕು.

10. ಗ್ರಾಮ ಅಥವಾ ಹಳ್ಳಿ ಮಟ್ಟದ ಸಂಸ್ಥೆಗಳಿಗೆ ಅರಣ್ಯ ಮತ್ತು ಸಾರ್ವಜನಿಕ ಭೂಮಿಯ ದಿನನಿತ್ಯದ ನಿರ್ವಹಣೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಈ ನಿರ್ವಹಣಾ ಸಮಿತಿಯಲ್ಲಿ ಯಾವುದೇ ಅರಣ್ಯ ಅಧಿಕಾರಿ ಇರಬಾರದು. ಚುನಾವಣಾ ಹಕ್ಕಿಲ್ಲದೆ ಬರಿ ಆಹ್ವಾನಿತರಾಗಿ ಇರಬಹುದು. ಈ ಸಮಿತಿಯ ವ್ಯಾಪ್ತಿಯಲ್ಲಿರುವ ಎಲ್ಲಾ ವಯಸ್ಕರು ಸಂಸ್ಥೆಯ ಸಾಮಾನ್ಯ ಸಮಿತಿಯಲ್ಲಿ ಸದಸ್ಯರಾಗಿರಬೇಕು, ಹಾಗೂ ನಿರ್ವಹಣಾ ಸಮಿತಿಯು

ಇವರಿಗೆ ಜವಾಬ್ದಾರಿಯುತವಾಗಿರಬೇಕು.

11. ಗ್ರಾಮ ಮಟ್ಟದ ಸಂಸ್ಥೆಯು ಎಲ್ಲಾ ಗ್ರಾಮಸ್ಥರು ಭಾಗವಹಿಸುವಂತೆ ನೋಡಿಕೊಳ್ಳಬೇಕು. ಅದರಲ್ಲೂ, ಅರಣ್ಯ ಮತ್ತು ಸಾರ್ವಜನಿಕ ಭೂಮಿಯ ಮೇಲೆ ತಮ್ಮ ಬದುಕಿಗಾಗಿ ಎಲ್ಲರಿಗಿಂತ ಹೆಚ್ಚು ಅವಲಂಬಿತರಾಗಿರುವವರು ಭಾಗವಹಿಸಬೇಕು. ಉದಾಹರಣೆಗೆ, ಮಹಿಳೆಯರು, ಬುಡಕಟ್ಟು ಜನಾಂಗದವರು, ಇತ್ಯಾದಿ. ಅರಣ್ಯದ ಮೇಲೆ ಲಂಬಾಣಿಗಳು, ಮುಂತಾದ ಅಲೆಮಾರಿಗಳ ಹಕ್ಕನ್ನೂ ಕೂಡ ಈ ಸಂಸ್ಥೆಯು ಕಾಪಾಡಬೇಕು.

12. ಅರಣ್ಯದ ಹೊರಗಿರುವವರಿಗೆ ಸಿಗುವ ಸವಲತ್ತುಗಳನ್ನು ಕಾಪಾಡುವ ಸುಸ್ಥಿರತಾ ಮಾದರಿಯನ್ನು ದೃಢಪಡಿಸಲು ಸಹಭಾಗಿತ್ವ ರೀತಿಯಲ್ಲಿ ಮೊದಲೇ ನಿಶ್ಚಯಿಸಬೇಕು. ನಂತರ ಅವುಗಳನ್ನು ಪಾರದರ್ಶಕವಾದ ರೀತಿಯಲ್ಲಿ ಅಳವಡಿಸಿ ಪರಿವೀಕ್ಷಿಸುತ್ತಿರಬೇಕು.

13. ಭಾಗವಹಿಸುವ ಎಲ್ಲರ (ಗ್ರಾಮಸ್ಥರು, ಸರಕಾರಿ ಇಲಾಖೆಗಳು, ಇತ್ಯಾದಿ) ಜವಾಬ್ದಾರಿಗಳು ಮತ್ತು ಚಟುವಟಿಕೆಗಳನ್ನು ಸಮನ್ವಯ ಗೊಳಿಸಲು ಮತ್ತು ಅವರ ವಾಗ್ವಾದಗಳನ್ನು ಬಗೆಹರಿಸಲು ಸ್ವತಂತ್ರವಾದ ವಿವಿಧ ಆಸಕ್ತಿ ಗುಂಪುಗಳನ್ನೊಳಗೊಂಡಿರುವ ಬೇರೆ ಬೇರೆ ಮಟ್ಟದ ಸಮಿತಿ ಅಥವಾ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸಬೇಕು. ಮೂಲಕ ಬಗೆಹರಿಸಬೇಕು. ಈ ಸಂಸ್ಥೆಗಳಲ್ಲಿ ಗ್ರಾಮ-ಮಟ್ಟದ ಸಂಸ್ಥೆಯ ಪ್ರತಿನಿಧಿಗಳು, ಗ್ರಾಮಾರಣ್ಯ ಸಮಿತಿಗಳು ಮತ್ತವರಒಕ್ಕೂಟಗಳ ಪ್ರತಿನಿಧಿಗಳು, ಸರಕಾರೀ ಏಜೆನ್ಸಿಗಳು, ಅರಣ್ಯದ ಹೊರಗಿರುವ ಆಸಕ್ತಿ ಗುಂಪುಗಳು, ಮತ್ತು ಸಮಾಜದ ವಿವಿಧ ಸದಸ್ಯರನ್ನು ಒಳಗೊಂಡಿರಬೇಕು. ಸರಿಯಾಗಿ ನಿರ್ಹಹಣೆ ಆಗುತ್ತಿಲ್ಲವಾದರೆ, ಜಿಲ್ಲಾ ಮಟ್ಟದ ಸಂಸ್ಥೆಗೆ ಮಾತ್ರ ಗ್ರಾಮ ಮಟ್ಟದ ಸಂಸ್ಥೆಯನ್ನು ರದ್ದು ಮಾಡುವ ಹಕ್ಕಿರುತ್ತದೆ. ರಾಜ್ಯ ಮಟ್ಟದಲ್ಲಿಯೂ ಕೂಡ ಈ ರೀತಿಯ ಒಂದು ವಿವಿಧ ಆಸಕ್ತಿ ಗುಂಪುಗಳ ಸಂಸ್ಥೆಯನ್ನು ರಚಿಸಬೇಕು. ಈ ಸಂಸ್ಥೆಯು ಸಾಮಾನ್ಯ ನೀತಿಯ ರಚನೆ, ಅಳವಡಿಕೆಯ ನಿರೀಕ್ಷಣೆ ಮತ್ತು ಕಾನೂನಾತ್ಮಕ, ಆಡಳಿತಾತ್ಮಕ ಮತ್ತು ಹಣಕಾಸಿನ ವಿಚಾರಗಳ ಪರೀಕ್ಷೆ, ಇವುಗಳನ್ನು ಮಾಡಬೇಕು. ಮಾದರಿಯನ್ನು ಉತ್ತಮ ಪಡಿಸಲು ಪರಿಷ್ಕರಣೆಯನ್ನು ಕೂಡ ಈ ರಾಜ್ಯ ಮಟ್ಟದ ಸಂಸ್ಥೆ ಮಾಡಬಹುದು.

14. ಸರಕಾರವು ಈಗಾಗಲೆ ಪ್ರಾರಂಭಿಸಿರುವ ಅರಣ್ಯ ಅಭಿವೃದ್ಧಿ ಏಜೆನ್ಸಿಯ (ಎಫ್.ಡಿ.ಎ) ರಚನೆಯ ಪ್ರಕ್ರಿಯೆಯನ್ನು ಕೂಡಲೇ ಅಮಾನಿತಿನಲ್ಲಿರಬೇಕು. ಒಂದು ನಿಜವಾದ ಜನಸಹಭಾಗಿತ್ವ ನಿರ್ವಹಣೆಯ ವ್ಯವಸ್ಥೆ ಜಾರಿಗೆ ಬರುವವರೆಗೆ ಮತ್ತು ಅರಣ್ಯ ಅಭಿವೃದ್ಧಿ ಏಜೆನ್ಸಿಯ ರಚನೆಯನ್ನು ಸಾರ್ವಜನಿಕವಾಗಿ ಚರ್ಚೆ ಮಾಡಿ ಅದರಲ್ಲಿ ಸರಿಯಾದ ಬದಲಾವಣೆತರುವ ಈ ಏಜೆನ್ಸಿ ಜಾರಿಗೆ ಬರಬಾರದು.

ಕಾನೂನಾತ್ಮಕವಾಗಿ, ಆಡಳಿತಾತ್ಮಕ ಮತ್ತು ಹಣಕಾಸು ವ್ಯವಸ್ಥೆಯ ಮೂಲಕ ಈ ನೀತಿ ಬದಲಾವಣೆಗಳು ಮತ್ತು ಅದರ ಜಾರಿಗೊಳಿಸುವಿಕೆಯನ್ನು ಜಾಗರೂಕತೆಯಿಂದ ರೂಪಿಸಬೇಕಾಗುತ್ತದೆ. ಆದರೆ, ಕರ್ನಾಟಕ ಸರಕಾರವು ಅರಣ್ಯದ ರಕ್ಷಣೆ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಜನರ ಭಾಗವಹಿಸುವಿಕೆಯನ್ನು ಗಂಭೀರವಾಗಿ ಪರಿಗಣಿಸುತ್ತದೆಯಾದರೆ, ಮೇಲೆ ಕೊಟ್ಟಿರುವ ಸಲಹೆಗಳನ್ನು ಅರ್ಥ ಮಾಡಿಕೊಂಡು, ಸ್ವೀಕರಿಸಿ, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

ದಾಖಲೆಯನ್ನು ಸಿದ್ಧಪಡಿಸಿ ಪ್ರಕಟಿಸಿದವರು:

*ಜನ ಅರಣ್ಯ ವೇದಿಕೆ*
ಕಾರ್ಯಾಲಯ: ಡೆವೆಲಪ್‌ಮೆಂಟ್ ಸಪೋರ್ಟ್ ಇನಿಶಿಯೇಟಿವ್ (ಡಿ.ಎಸ್.ಐ.)
680, 15 ನೇ ಮುಖ್ಯ ರಸ್ತೆ, 38 ನೇ ಅಡ್ಡ ರಸ್ತೆ, 4ನೇ 'ಟಿ' ಬ್ಲಾಕ್,
ಜಯನಗರ, ಬೆಂಗಳೂರು - 560041, ಕರ್ನಾಟಕ
ಫೋನ್: 080 - 6635622 / 6633538 / 6645542
ಟೆಲಿಫ್ಯಾಕ್ಸ್: 080 – 6320021
ಈಮೈಲ್: dsiblr@bgl.vsnl.net.in / mkdsi@vsnl.in

ಮಾನ್ಯ ಮುಖ್ಯ ಮಂತ್ರಿಯವರೆ,

ಕರ್ನಾಟಕದಲ್ಲಿ ಪ್ರಸ್ತುತ ಜಾರಿಯಿರುವ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆಯು ಅದರ ಪರಿಕಲ್ಪನೆ ಮತ್ತು ಅಳವಡಿಕೆಯಲ್ಲಿರುವ ಹಲವಾರು ಕುಂದು ಕೊರತೆಗಳ ಕಾರಣ, ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಒಂದು ನಿಜವಾದ ಜನಸಹಭಾಗಿತ್ವ ಅರಣ್ಯ ನಿರ್ವಹಣಾ ವ್ಯವಸ್ಥೆಯೆಡೆಗೆ ಮುನ್ನಡೆಯಬೇಕಾದರೆ, ಹಲವಾರು ಮೂಲಭೂತ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ೧೯೮೮ ರ ರಾಷ್ಟ್ರೀಯ ಅರಣ್ಯ ನೀತಿಯನ್ನು ನಿಜವಾದ ಸಹಭಾಗಿತ್ವ ವಿಧಾನದೆಡೆಗೆ ಸಾಗುವಂತೆ ರೂಪಿಸುವ ತುರ್ತು ಅವಶ್ಯಕತೆ ಇದೆ. ಈ ಕುರಿತು ನಮ್ಮ ಬೇಡಿಕೆಗಳು ಹೀಗಿವೆ:

- ಜನಸಹಭಾಗಿತ್ವ ಅರಣ್ಯ ನಿರ್ವಹಣೆಯ ಹಕ್ಕು ಶಾಸನ ಬದ್ಧವಾಗಿರಬೇಕು. ಅದು ರಾಜ್ಯದ ಎಲ್ಲೆಡೆಯೂ ಲಭ್ಯವಾಗಬೇಕು. ಅದು ಸರಕಾರಿ ಆದೇಶ ಅಥವಾ ಯೋಜನೆಯ ನಿಧಿಯ ಮೇಲೆ ಅವಲಂಬಿತವಾಗಿರಬಾರದು.
- ಸ್ಥಳೀಯ ಸಂಸ್ಥೆಗಳು, ಅರಣ್ಯದ ಹೊರಗಿರುವ ಆಸಕ್ತ ಗುಂಪುಗಳು ಮತ್ತು ಸರಕಾರಿ ಸಂಸ್ಥೆಗಳ ಮಧ್ಯೆ ಹಕ್ಕು ಮತ್ತು ಜವಾಬ್ದಾರಿಗಳ ಪುನರ್‌ಹಂಚಿಕೆಯಾಗಬೇಕು.
- ಅರಣ್ಯ ಅಭಿವೃದ್ಧಿ ಅಥವಾ ಜೆ.ಎಫ್.ಪಿ.ಎಂ.ನ ಹೆಸರಿನಲ್ಲಿ ಯೋಜನೆಗಳನ್ನು ಜಾರಿಗೊಳಿಸಲು ಸರಕಾರವು ಯಾವುದೇ ಸಾಲ ತೆಗೆದುಕೊಳ್ಳಬಾರದು. ಈಗಾಗಲೇ ತೆಗೆದುಕೊಂಡಿರುವ ಸಾಲಗಳಲ್ಲಿ ಉಳಿದಿರುವ ಮೊತ್ತವನ್ನು ಕೂಡಲೇ ಹಿಂದಿರುಗಿಸಬೇಕು.
- ಜನಸಹಭಾಗಿತ್ವ ನಿರ್ವಹಣೆಯು ಗ್ರಾಮಸ್ಥರು ಉಪಯೋಗಿಸುವ ಮತ್ತು ನಿರ್ವಹಿಸಲು ತಯಾರಿರುವ ಎಲ್ಲಾ ಸಾರ್ವಜನಿಕ ಭೂಮಿಗಳನ್ನು ಒಳಗೊಂಡಿರಬೇಕು.
- ಈ ಭೂಮಿಯೊಳಗೆ, ಗ್ರಾಮಸ್ಥರಿಗೆ ಅರಣ್ಯ ಉತ್ಪನ್ನಗಳನ್ನು ಪಡೆದುಕೊಂಡು ಬಳಸಿಕೊಳ್ಳುವ ಹಾಗೂ ಹೆಚ್ಚಿನ ಉತ್ಪನ್ನಗಳನ್ನು ಅರಣ್ಯದ ಸುಸ್ಥಿರತೆಗೆ ಹಾನಿಯಾಗದಂತೆ ಮಾರಾಟ ಮಾಡುವ ಹಕ್ಕು ಇರಬೇಕು. ಎನ್.ಟಿ.ಎಫ್.ಪಿ. (ಮರಮುಟ್ಟು ಹೊರತುಪಡಿಸಿ ಇತರ ಅರಣ್ಯ ಉತ್ಪನ್ನಗಳು) ಅಥವಾ ಬಿದ್ದಿರುವ/ಒಣಗಿರುವ ಮರಗಳ ಸಂಗ್ರಹಣೆ ಮಾಡಲು ಗುತ್ತಿಗೆದಾರರಿಗೆ ಕೊಟ್ಟಿರುವ ಗುತ್ತಿಗೆಯನ್ನು ರದ್ದು ಪಡಿಸಬೇಕು. ಬೆಂಬಲಿತ ಸೇವೆ ಒದಗಿಸಿದ್ದಕ್ಕೆ ಮಾತ್ರ ಸರಕಾರಕ್ಕೆ ಶುಲ್ಕ ಕೊಡುವಂತಾಗಬೇಕು.
- ಗ್ರಾಮ/ಹಳ್ಳಿ ಮಟ್ಟದ ನಿರ್ವಹಣಾ ಸಮಿತಿಯು ಅದರ ವ್ಯಾಪ್ತಿಯಲ್ಲಿರುವ ಎಲ್ಲಾ ವಯಸ್ಕರಿಗೆ ಜವಾಬ್ದಾರಿಯುತವಾಗಿರಬೇಕು. ಈ ಸಮಿತಿಗೆ ಅರಣ್ಯ ಮತ್ತು ಸಾರ್ವಜನಿಕ ಭೂಮಿಯ ದಿನನಿತ್ಯದ ನಿರ್ವಹಣೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಆದ್ದರಿಂದ, ಈ ನಿರ್ವಹಣಾ ಸಮಿತಿಯಲ್ಲಿ ಯಾವುದೇ ಅರಣ್ಯ ಅಧಿಕಾರಿ ಇರಬಾರದು. ಬೇಕಿದ್ದರೆ, ಸ್ಪರ್ಧಿಸುವ, ಚುನಾಯಿಸುವ ಹಕ್ಕಿಲ್ಲದೆ ಬರಿ ವೀಕ್ಷಕರಾಗಿ, ಆಹ್ವಾನಿತರಾಗಿ ಇರಬಹುದು.
- ಅರಣ್ಯ ಅಭಿವೃದ್ಧಿ ಏಜೆನ್ಸಿಯ (ಎಫ್.ಡಿ.ಎ) ರಚನೆಯ ಪ್ರಕ್ರಿಯೆಯನ್ನು ಕೂಡಲೇ ಅಮಾನತಿನಲ್ಲಿರಿಸಬೇಕು. ಒಂದು ನಿಜವಾದ ಜನಸಹಭಾಗಿತ್ವ ನಿರ್ವಹಣೆಯ ವ್ಯವಸ್ಥೆ ಜಾರಿಗೆ ಬರುವವರೆಗೆ ಮತ್ತು ಅರಣ್ಯ ಅಭಿವೃದ್ಧಿ ಏಜೆನ್ಸಿಯ ರಚನೆಯನ್ನು ಸಾರ್ವಜನಿಕವಾಗಿ ಚರ್ಚೆ ಮಾಡಿ ಸರಿಯಾದ ರೂಪುರೇಷೆಗಳು ಬರುವವರೆಗೆ ಈ ಏಜೆನ್ಸಿ ಜಾರಿಗೆ ಬರಬಾರದು.

ದಿನಾಂಕ

ತಮ್ಮ ವಿಶ್ವಾಸಿ,

ಸ್ಥಳ:

ಇಲ್ಲಿ ಮಡಚಿ

ತೆರೆದ-ಅಂಚೆ

ಇವರಿಗೆ:

ಸಂಚಾಲಕರು
ಜನ ಅರಣ್ಯ ವೇದಿಕೆ,
೬೮೦, ೧೫ನೇ ಮುಖ್ಯ ರಸ್ತೆ, ೩೮ನೇ ಅಡ್ಡ ರಸ್ತೆ, ೪ನೇ ಟಿ ಬ್ಲಾಕ್,
ಜಯನಗರ, ಬೆಂಗಳೂರು - ೫೬೦ ೦೪೧ ಕರ್ನಾಟಕ.
ಫೋನ್- ೦೮೦- ೬೬೩೫೬೨೨/೬೬೩೩೫೩೮/೬೬೪೫೫೪೨
ಟೆಲಿಫ್ಯಾಕ್ಸ್- ೦೮೦ ೬೩೨೦೦೨೧
ಈ ಮೈಲ್: dsiblr@bgl.vsnl.net.in / mkdsi@vsnl.in

ಇಲ್ಲಿ ಮಡಚಿ

ಇಂದ:

ಮಾನ್ಯ ಮುಖ್ಯ ಮಂತ್ರಿಯವರೆ,

ಕರ್ನಾಟಕದಲ್ಲಿ ಪ್ರಸ್ತುತ ಜಾರಿಯಿರುವ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆಯು ಅದರ ಪರಿಕಲ್ಪನೆ ಮತ್ತು ಅಳವಡಿಕೆಯಲ್ಲಿರುವ ಹಲವಾರು ಕುಂದು ಕೊರತೆಗಳ ಕಾರಣ, ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಒಂದು ನಿಜವಾದ ಜನಸಹಭಾಗಿತ್ವ ಅರಣ್ಯ ನಿರ್ವಹಣಾ ವ್ಯವಸ್ಥೆಯೆಡೆಗೆ ಮುನ್ನಡೆಯಬೇಕಾದರೆ, ಹಲವಾರು ಮೂಲಭೂತ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ೧೯೮೮ ರ ರಾಷ್ಟ್ರೀಯ ಅರಣ್ಯ ನೀತಿಯನ್ನು ನಿಜವಾದ ಸಹಭಾಗಿತ್ವ ವಿಧಾನದೆಡೆಗೆ ಸಾಗುವಂತೆ ರೂಪಿಸುವ ತುರ್ತು ಅವಶ್ಯಕತೆ ಇದೆ. ಈ ಕುರಿತು ನಮ್ಮ ಬೇಡಿಕೆಗಳು ಹೀಗಿವೆ:

- ಜನಸಹಭಾಗಿತ್ವ ಅರಣ್ಯ ನಿರ್ವಹಣೆಯ ಹಕ್ಕು ಶಾಸನ ಬದ್ಧವಾಗಿರಬೇಕು. ಅದು ರಾಜ್ಯದ ಎಲ್ಲೆಡೆಯೂ ಲಭ್ಯವಾಗಬೇಕು. ಅದು ಸರಕಾರಿ ಆದೇಶ ಅಥವಾ ಯೋಜನೆಯ ನಿಧಿಯ ಮೇಲೆ ಅವಲಂಬಿತವಾಗಿರಬಾರದು.
- ಸ್ಥಳೀಯ ಸಂಸ್ಥೆಗಳು, ಅರಣ್ಯದ ಹೊರಗಿರುವ ಆಸಕ್ತಿ ಗುಂಪುಗಳು ಮತ್ತು ಸರಕಾರಿ ಸಂಸ್ಥೆಗಳ ಮಧ್ಯೆ ಹಕ್ಕು ಮತ್ತು ಜವಾಬ್ದಾರಿಗಳ ಪುನರ್‌ಹಂಚಿಕೆಯಾಗಬೇಕು.
- ಅರಣ್ಯ ಅಭಿವೃದ್ಧಿ ಅಥವಾ ಜೆ.ಎಫ್.ಪಿ.ಎಂ.ನ ಹೆಸರಿನಲ್ಲಿ ಯೋಜನೆಗಳನ್ನು ಜಾರಿಗೊಳಿಸಲು ಸರಕಾರವು ಯಾವುದೇ ಸಾಲ ತೆಗೆದುಕೊಳ್ಳಬಾರದು. ಈಗಾಗಲೇ ತೆಗೆದುಕೊಂಡಿರುವ ಸಾಲಗಳಲ್ಲಿ ಉಳಿದಿರುವ ಮೊತ್ತವನ್ನು ಕೂಡಲೇ ಹಿಂದಿರುಗಿಸಬೇಕು.
- ಜನಸಹಭಾಗಿತ್ವ ನಿರ್ವಹಣೆಯು ಗ್ರಾಮಸ್ಥರು ಉಪಯೋಗಿಸುವ ಮತ್ತು ನಿರ್ವಹಿಸಲು ತಯಾರಿರುವ ಎಲ್ಲಾ ಸಾರ್ವಜನಿಕ ಭೂಮಿಗಳನ್ನು ಒಳಗೊಂಡಿರಬೇಕು.
- ಈ ಭೂಮಿಯೊಳಗೆ, ಗ್ರಾಮಸ್ಥರಿಗೆ ಅರಣ್ಯ ಉತ್ಪನ್ನಗಳನ್ನು ಪಡೆದುಕೊಂಡು ಬಳಸಿಕೊಳ್ಳುವ ಹಾಗೂ ಹೆಚ್ಚಿನ ಉತ್ಪನ್ನಗಳನ್ನು ಅರಣ್ಯದ ಸುಸ್ಥಿರತೆಗೆ ಹಾನಿಯಾಗದಂತೆ ಮಾರಾಟ ಮಾಡುವ ಹಕ್ಕು ಇರಬೇಕು. ಎನ್.ಟಿ.ಎಫ್.ಪಿ. (ಮರಮುಟ್ಟು ಹೊರತುಪಡಿಸಿ ಇತರ ಅರಣ್ಯ ಉತ್ಪನ್ನಗಳು) ಅಥವಾ ಬಿದ್ದಿರುವ/ಒಣಗಿರುವ ಮರಗಳ ಸಂಗ್ರಹಣೆ ಮಾಡಲು ಗುತ್ತಿಗೆದಾರರಿಗೆ ಕೊಟ್ಟಿರುವ ಗುತ್ತಿಗೆಯನ್ನು ರದ್ದು ಪಡಿಸಬೇಕು. ಬೆಂಬಲಿತ ಸೇವೆ ಒದಗಿಸಿದ್ದಕ್ಕೆ ಮಾತ್ರ ಸರಕಾರಕ್ಕೆ ಶುಲ್ಕ ಕೊಡುವಂತಾಗಬೇಕು.
- ಗ್ರಾಮ/ಹಳ್ಳಿ ಮಟ್ಟದ ನಿರ್ವಹಣಾ ಸಮಿತಿಯು ಅದರ ವ್ಯಾಪ್ತಿಯಲ್ಲಿರುವ ಎಲ್ಲಾ ವಯಸ್ಕರಿಗೆ ಜವಾಬ್ದಾರಿಯುತವಾಗಿರಬೇಕು. ಈ ಸಮಿತಿಗೆ ಅರಣ್ಯ ಮತ್ತು ಸಾರ್ವಜನಿಕ ಭೂಮಿಯ ದಿನನಿತ್ಯದ ನಿರ್ವಹಣೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಆದ್ದರಿಂದ, ಈ ನಿರ್ವಹಣಾ ಸಮಿತಿಯಲ್ಲಿ ಯಾವುದೇ ಅರಣ್ಯ ಅಧಿಕಾರಿ ಇರಬಾರದು. ಬೇಕಿದ್ದರೆ, ಸ್ಪರ್ಧಿಸುವ, ಚುನಾಯಿಸುವ ಹಕ್ಕಿಲ್ಲದೆ ಬರಿ ವೀಕ್ಷಕರಾಗಿ, ಆಹ್ವಾನಿತರಾಗಿ ಇರಬಹುದು.
- ಅರಣ್ಯ ಅಭಿವೃದ್ಧಿ ಏಜೆನ್ಸಿಯ (ಎಫ್.ಡಿ.ಎ) ರಚನೆಯ ಪ್ರಕ್ರಿಯೆಯನ್ನು ಕೂಡಲೇ ಅಮಾನಿತಿನಲ್ಲಿರಿಸಬೇಕು. ಒಂದು ನಿಜವಾದ ಜನಸಹಭಾಗಿತ್ವ ನಿರ್ವಹಣೆಯ ವ್ಯವಸ್ಥೆ ಜಾರಿಗೆ ಬರುವವರೆಗೆ ಮತ್ತು ಅರಣ್ಯ ಅಭಿವೃದ್ಧಿ ಏಜೆನ್ಸಿಯ ರಚನೆಯನ್ನು ಸಾರ್ವಜನಿಕವಾಗಿ ಚರ್ಚೆ ಮಾಡಿ ಸರಿಯಾದ ರೂಪುರೇಷೆಗಳು ಬರುವವರೆಗೆ ಈ ಏಜೆನ್ಸಿ ಜಾರಿಗೆ ಬರಬಾರದು.

ದಿನಾಂಕ

ತಮ್ಮ ವಿಶ್ವಾಸಿ,

ಸ್ಥಳ:

ಇಲ್ಲಿ ಮಡಚಿ

ತೆರೆದ-ಅಂಚೆ

ಇವರಿಗೆ:

ಮಾನ್ಯಮುಖ್ಯ ಮಂತ್ರಿಗಳು,
ಕರ್ನಾಟಕ ರಾಜ್ಯ ಸರ್ಕಾರ,
ವಿಧಾನ ಸೌಧ,
ಬೆಂಗಳೂರು - **560 001.**

PSIC
F8

ಇಲ್ಲಿ ಮಡಚಿ

ಇಂದ:

# ಸಹ್ಯಾದ್ರಿ

ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ತ್ರೈಮಾಸಿಕ ಪತ್ರಿಕೆ

ಕರ್ನಾಟಕ ಅರಣ್ಯ ಇಲಾಖೆ

ಸಂಪುಟ 1 ಸಂಚಿಕೆ 1 ಜನವರಿ 1999


PSK F8

## ಎರಡು ಮಾತು



ಪಶ್ಚಿಮ ಘಟ್ಟದ ಇನ್ನೊಂದು ಹೆಸರು ಸಹ್ಯಾದ್ರಿ ಪರ್ವತ ಮಾಲೆ ಎಂದೂ ಹೇಳಬಹುದು. ನಮ್ಮ ದಕ್ಷಿಣ ಭಾರತದ ಹೆಚ್ಚಿನ ನದಿಗಳೆಲ್ಲಾ ಪಶ್ಚಿಮ ಘಟ್ಟದಲ್ಲೇ ಉದ್ಭವವಾಗುತ್ತದೆ. ನಮ್ಮೆಲ್ಲರಿಗೂ ಜೀವನ ಆಧಾರವಾದ 'ನೀರು' ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ಇರುವ ಅರಣ್ಯ ಪ್ರದೇಶದಿಂದ ಬರುವುದು.

ಮಳೆಗಾಲದಲ್ಲಿ ಬಹಳ ಹೆಚ್ಚು ಮಳೆ ಬಂದರೂ ಸಹ ಕಾಡು ಇಲ್ಲದೆ ಇದ್ದರೆ ಎಲ್ಲಾ ನೀರು ಸಮುದ್ರಕ್ಕೆ ಹೋಗುವ ಸಂದರ್ಭ ಬರುತ್ತದೆ. ಅರಣ್ಯ ಪ್ರದೇಶದಿಂದ ಒಂದು ರೀತಿ ನೀರು ಸಂಚಯನ ಆಗಿ ಮತ್ತೆ ಇಡೀ ವರ್ಷ ನದಿಗಳಲ್ಲಿ ಇದೇ ನೀರು ಹರಿಯುತ್ತಾ ಇರುತ್ತದೆ. ನಮ್ಮೆಲ್ಲರ ಜೀವನದಲ್ಲಿ ನೀರಿನ ಮಹತ್ವ ಎಷ್ಟಿದೆ ಎಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಇದರ ಜೊತೆಗೆ ಕಾಡು ಪ್ರದೇಶದಿಂದ ಅನೇಕ ರೀತಿಯಲ್ಲಿ ನಮಗೆ ಸಹಾಯ ಸಿಗುತ್ತದೆ.

ಕರ್ನಾಟಕ ರಾಜ್ಯದಲ್ಲಿ ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಅಡಿಯಲ್ಲಿ ನಾವು ತಮ್ಮೆಲ್ಲರ ಸಹಭಾಗಿತ್ವದಿಂದ ಇನ್ನೂ ಹೆಚ್ಚಾಗಿ ಅರಣ್ಯೀಕರಣ ಮಾಡಲಿಕ್ಕೆ ಮತ್ತು ಕೃಷಿ ಅರಣ್ಯಕ್ಕೆ ಸಾಕಷ್ಟು ಪ್ರೋತ್ಸಾಹ ಕೊಡಲಿಕ್ಕೆ ನಿಶ್ಚಯ ಮಾಡಿಕೊಂಡಿದ್ದೇವೆ. ನಾವೆಲ್ಲರೂ ಸೇರಿಕೊಂಡು ಗಿಡ ನೆಡುವ ಹಾಗೂ ಕಾಡು ರಕ್ಷಣೆ ಮಾಡುವ ಪುಣ್ಯ ಕಾರ್ಯದಲ್ಲಿ ಭಾಗವಹಿಸಿ ಭೂಮಿ ತಾಯಿಯ ಸೇವೆ ಮಾಡೋಣ ಅಂತ ನಮ್ಮ ವಿನಂತಿ.

**ಡಾ. ಶೋಭನಾಥ ರಾಯ್**
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

## ಬಿದಿರು ವನಗಳ ಸಹಭಾಗಿತ್ವ ನಿರ್ವಹಣೆ

### ಭದ್ರಾವತಿ ವಿಭಾಗದಲ್ಲಿ ಒಂದು ಪ್ರಯೋಗ



ಕಾಡಿನ 'ಕಳೆ'ಎಂದು ಪರಿಗಣಿಸಲ್ಪಡುತ್ತಿದ್ದ 'ಬಿದಿರು' ಇಂದು ಕಾಡಿನ ಮುಖ್ಯ ಉತ್ಪನ್ನ. ಇದು ಮರಮಟ್ಟು ಮಾತ್ರವಾಗದೆ ಬಡವರ ಜೀವನೋಪಾಯವಾಗಿದೆ. ಸಾವಿರಾರು ಮೇದಾರರು (ಸಾಂಪ್ರದಾಯಿಕ ಬುಟ್ಟಿ ಹೆಣೆಯುವವರು) ಮತ್ತು ಕಸಬುದಾರರು ಬಿದಿರಿನಿಂದ ಮಾಡಿದ ವಸ್ತುಗಳನ್ನು ಮಾರಾಟ ಮಾಡಿ ಬಂದ ಆದಾಯದಲ್ಲಿ ಬದುಕುತ್ತಿದ್ದಾರೆ. ಕರ್ನಾಟಕದಲ್ಲೆ ಅತಿ ಹೆಚ್ಚು ಬಿದಿರು ಉತ್ಪಾದನೆ ಶಿವಮೊಗ್ಗ ಅರಣ್ಯ ವೃತ್ತದಲ್ಲಿ ಆಗುತ್ತದೆ. ಈ ಕಾಡುಗಳಲ್ಲಿ ಬೆಳೆದ ಬಿದಿರು, ರಾಜ್ಯದ ಹೆಚ್ಚಿನ ಮೇದಾರ ಬಿದಿರಿನ ಬೇಡಿಕೆಯನ್ನು ಪೂರೈಸುತ್ತಿದೆ. ಮಾತ್ರವಲ್ಲದೆ, ಕರ್ನಾಟಕ ರಾಜ್ಯದ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುವ ಮೈಸೂರು ಕಾಗದ ಕಾರ್ಖಾನೆಯ ಬೇಡಿಕೆಯನ್ನೂ ಪೂರೈಸುತ್ತಿದೆ.



### ಬಿದಿರು ಅರಣ್ಯಗಳು ಮತ್ತು ಮೇದಾರರು

ಭದ್ರಾವತಿ ವಿಭಾಗದ ಸುಮಾರು 16,000 ಹೆಕ್ಟೇರ್‌ವರೆಗೂ ಹರಡಿಕೊಂಡಿರುವ ಕುಕವಾಡ, ಉಬ್ರಾಣಿ, ರಂಗಯ್ಯನಗಿರಿ ಮತ್ತು ಭದ್ರಾಪುರ ಅರಣ್ಯಗಳೇ ಬಿದಿರಿನ ಮನೆಯಾಗಿವೆ. ಐದು ಜಾತಿಯ ಬಿದಿರು ಇಲ್ಲಿ ಲಭ್ಯವಿದ್ದರೂ ಹೆಚ್ಚಾಗಿ ಸಿಗುವುದು ಮೇದಾರರ ಬಿದಿರಾದ, 'ಡೆಂಡ್ರೋಕಾಲಮಸ್ ಸ್ಟ್ರಿಕ್‌ಟಸ್' (ಕಿರು ಬಿದಿರು) ಎಂಬ ಜಾತಿಯ ಬಿದಿರು. 981 ಸದಸ್ಯರಿರುವ 240 ಮೇದಾರ ಕುಟುಂಬಗಳು ಈ ಕಾಡುಗಳನ್ನೆ ಅವಲಂಬಿಸಿ ಬದುಕುತ್ತಿದ್ದಾರೆ. ಇವರು ಹಿಂದುಳಿದ ಜಾತಿಗೆ ಸೇರಿದವರಾಗಿದ್ದು, ಕಾಡುಗಳ ಅಂಚಿನಲ್ಲಿ ವಾಸ ಮಾಡುತ್ತಿದ್ದಾರೆ.

### ಬಿದಿರಿನ ಅರಣ್ಯ –ಅಂದಿನ ನಿರ್ವಹಣೆ

ಈ ಮೊದಲು ಬಿದಿರಿನ ಕಾಡುಗಳ ಕೆಲಸವನ್ನು ಅರಣ್ಯ ಇಲಾಖೆ ಟೆಂಡರ್ ಮುಖಾಂತರ ಮಾಡಿಸುತ್ತಿತ್ತು. ಹಸಿರು ಬಿದಿರುಗಳನ್ನು ನವಂಬರ್ ತಿಂಗಳಿಂದ ಮೇ ತಿಂಗಳ ಕೊನೆಯವರೆಗೆ ಕಡಿದು ಇಲಾಖೆಯ ಡಿಪೋಗಳಾದ ಜೋಲ್‌ಧಾಳ್ ಮತ್ತು ಉಂಬ್ರಾಣಿಗೆ ಸಾಗಿಸಲಾಗುತ್ತಿತ್ತು. ಡಿಪೋಗಳಿಂದ ಪ್ರತಿ ತಿಂಗಳು, ಪ್ರತಿ ಮೇದಾರ ಕುಟುಂಬಗಳಿಗೆ ತಲಾ 50 ಬಿದಿರಿನಂತೆ ನಿರ್ಧಾರಿತ ದರದಲ್ಲಿ ಮಾರಾಟ ಮಾಡಲಾಗುತ್ತಿತ್ತು. ಮೇದಾರರು ಕಾಡಿನ ಅಂಚಿನಲ್ಲೇ ವಾಸಿಸುತ್ತಿದ್ದರೂ, ಅವರು ಕಾಡನ್ನು ಪ್ರವೇಶಿಸಿ ಅವರು ಇಚ್ಛಿಸುವ ಬಿದಿರನ್ನು ಕೊಯ್ದು ತರಲು ಅನುಮತಿ ಇರಲಿಲ್ಲ. ಅವರೆಲ್ಲರೂ ಡಿಪೋದಿಂದ ಸರಬರಾಜು ಆಗುತ್ತಿದ್ದ ಬಿದಿರನ್ನೇ ಆಶ್ರಯಿಸ ಬೇಕಾಗಿತ್ತು.

### ಪರಿಣಾಮ

ಸರ್ಕಾರದ ನಿಯಮಿತ ಬಿದಿರು ಸರಬರಾಜಿನಿಂದಾಗಿ ಮೇದಾರರಿಗೆ ನಿರಂತರ ಉದ್ಯೋಗ ದೊರಕದಂತಾಯಿತು. ಹೀಗಾಗಿ ಅವರು ಕಾಡಿಗೆ ಗುಟ್ಟಾಗಿ ಬಂದು ಬಿದಿರು ಕಡಿಯುವುದು ಅನಿವಾರ್ಯವಾಯಿತು. ಇಂತಹ ಕ್ರಿಯೆಗಳು ಸಹಜವಾಗಿಯೇ ಅರಣ್ಯ ಇಲಾಖೆಯ ಗಮನಕ್ಕೆ ಬಂದು, ಅವರು ಕಾನೂನುಕ್ರಮ ಕೈಗೊಳ್ಳುವ ಪರಿಸ್ಥಿತಿ ಬರುತ್ತಿತ್ತು. ಕಾನೂನಿನ ಹೆದರಿಕೆಯಿಂದಾಗಿ ಮೇದಾರರು ಉತ್ಪಾದಿಸಿದ ಉತ್ಪನ್ನಗಳನ್ನು ಬಹಳ ಕಡಿಮೆ ಬೆಲೆಗೆ ಮಾರಿ ಬದುಕುವಂತಾಗಿತ್ತು. ಹೀಗೆ ಮೇದಾರರ ಬದುಕು ಶೋಚನೀಯವಾಗಿತ್ತು.

## ಸಹಭಾಗಿತ್ವ ನಿರ್ವಹಣೆಯ ಪರಿಕಲ್ಪನೆ

ಜಂಟಿ ಅರಣ್ಯ ಯೋಜನೆಯ ವಿಶೇಷ ಕಾಯಿದೆಯನ್ನು ಕರ್ನಾಟಕದಲ್ಲಿ 12-4-1993ರಲ್ಲಿ ಜಾರಿ ಗೊಳಿಸಲಾಯಿತು. ವಿನಾಶಕ್ಕೊಳಗಾಗಿರುವ ಅರಣ್ಯಗಳಲ್ಲಿ, ಕಾಡಿನ ಸಾಂದ್ರತೆ ಶೇಕಡ 25 ಕ್ಕಿಂತ ಕಡಿಮೆ ಇದ್ದಂತಹ ಕಾಡುಗಳನ್ನು ಜಂಟಿ ಅರಣ್ಯ ಯೋಜನೆಯಡಿಯಲ್ಲಿ ಸೇರಿಸಿಕೊಳ್ಳಲಾಯಿತು. ನಶಿಸುತ್ತಿರುವ ಕಾಡುಗಳ ರಕ್ಷಣೆ, ಅಭಿವೃದ್ಧಿ ಮತ್ತು ಯೋಜನೆಯ ಜವಾಬ್ದಾರಿ ಹಾಗೂ ಕಾಡಿನ ಫಲಗಳನ್ನು ಹಂಚಿಕೊಳ್ಳಲು, ಗ್ರಾಮೀಣ ಅರಣ್ಯ ಸಮಿತಿಗಳ ಸ್ಥಾಪನೆಗೆ ಜಂಟಿ ಅರಣ್ಯ ಯೋಜನೆಯು ಅನುವು ಮಾಡಿಕೊಟ್ಟಿದೆ.*

ಬಿದಿರು ಕಾಡುಗಳ ಸಾಂದ್ರತೆ ಶೇಕಡ 50 ಕ್ಕಿಂತ ಹೆಚ್ಚಿರುವುದರಿಂದ ಇಂತಹ ಕಾಡನ್ನು ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿ ತರಲಾಗಲಿಲ್ಲ. ಆದುದರಿಂದ ಮತ್ತೊಂದು ರೀತಿಯ ಸ್ಥಳೀಯ ಸಂಸ್ಥೆಯಾದ ''ಬಿದಿರು ಬಳಕೆದಾರರ ಸಂಘ'' (ಮೇದಾರರ ಸಂಘ) ವನ್ನು ಸ್ಥಾಪಿಸುವ ತೀರ್ಮಾನ ಮಾಡಲಾಯಿತು. ಇಲ್ಲಿ ಉತ್ಪನ್ನಗಳ ಹಂಚಿಕೆ ಇಲ್ಲದಿದ್ದರೂ ಸಂಘದ ಸದಸ್ಯರ ಹಿತರಕ್ಷಣೆಯನ್ನು ಮಾಡುವುದು ಹಾಗೂ ಕಾಡಿನ ರಕ್ಷಣೆ ಮತ್ತು ನಿರ್ವಹಣೆಯಲ್ಲಿ ಸಂಘದ ಸದಸ್ಯರ ಸಹಭಾಗಿತ್ವ ಇರುವಂತೆ ನಿರ್ಧರಿಸಲಾಯಿತು.

ಹಲವು ಸಭೆ ಮತ್ತು ಅನೌಪಚಾರಿಕ ಚರ್ಚೆಗಳನಂತರ ಮೇದಾರರ ಬಿದಿರು ಬಳಕೆದಾರರ ಸಂಘವನ್ನು 1995ರಲ್ಲಿ ಸ್ಥಾಪಿಸಲಾಯಿತು. ಈ ಸಭೆಗಳಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಸ್ಥಳೀಯ ಸಿಬ್ಬಂದಿ ವರ್ಗದವರನ್ನು ಪ್ರೇರೇಪಿಸಲು ತರಬೇತಿಗಳನ್ನು ಹಮ್ಮಿಕೊಳ್ಳಲಾಯಿತು. ಮೇದಾರರು ಮತ್ತು ಕರ್ನಾಟಕ ಅರಣ್ಯ ಇಲಾಖೆಯ ಅಧಿಕಾರಿಗಳ ನಿರಂತರ ಚರ್ಚೆಗಳ ನಂತರ ನಿರ್ದಿಷ್ಟ ಕಾರ್ಯಯೋಜನೆಯನ್ನು ಹಾಕಿಕೊಳ್ಳಲಾಯಿತು. ಇದರ ರೂಪರೇಷೆ ಕೆಳಕಂಡಂತಿದೆ.

### ಹೊಸ ಅಧ್ಯಾಯದ ಆರಂಭ

★ ಪ್ರತಿ ಮೇದಾರರ ಗುಂಪುಗಳ ಬೇಡಿಕೆಯನ್ನು ಸರ್ವೆ ಮುಖಾಂತರ ಕಂಡುಕೊಳ್ಳಲಾಯಿತು.

★ ಬಿದಿರಿನ ಲಭ್ಯತೆ ಮತ್ತು ಕಾಡಿನ ಸಾಮಿಪ್ಯತೆ ಗಮನದಲ್ಲಿಟ್ಟುಕೊಂಡು ಬಿದಿರು ಅರಣ್ಯಗಳನ್ನು ಸಣ್ಣ ಘಟಕಗಳಾಗಿ ವಿಂಗಡಿಸ ಲಾಯಿತು.

★ ಬೇರೆ ಬೇರೆ ಮೇದಾರರ ಗುಂಪುಗಳಿಗೆ ಈ ಘಟಕಗಳನ್ನು ನಿಯೋಜಿಸಲಾಯಿತು.

★ ವಾರದಲ್ಲಿ ಎರಡು ದಿನಗಳು ಬಿದಿರನ್ನು ಪಡೆಯಲು, ಮೇದಾರರು ಅವರಿಗೆ ನಿಯೋಜಿಸಿದ ಕಾಡಿಗೆ ಭೇಟಿ ಕೊಡಬಹುದು.

★ ಮೇದಾರರಿಗೆ ಅಗತ್ಯ ವಾದ ಬಿದಿರನ್ನು, ಅರಣ್ಯ ರಕ್ಷಕರ ಮೇಲ್ವಿಚಾರಣೆಯಲ್ಲಿ ಅರಣ್ಯ ತತ್ವಗಳನ್ನಾಧರಿಸಿ ತೆಗೆಯಬೇಕು.

★ ಆಯಾ ದಿನದ ಕೆಲಸದ ಅಂತ್ಯದಲ್ಲಿ ಪ್ರತಿಯೊಬ್ಬರು ಅವರವರು ಸಂಗ್ರಹಿಸಿದ ಬಿದಿರನ್ನು ವರದಿ ಮಾಡಬೇಕು.

★ ಸಂಘದ ಮುಖ್ಯಸ್ಥ ಪ್ರತಿ ಬಿದಿರಿಗೆ ರೂಪಾಯಿ 3 ರಂತೆ ಹಣ ಸಂಗ್ರಹಿಸಿ ಇಲಾಖೆಗೆ ಪಾವತಿ ಮಾಡಬೇಕು.

★ ಮೇದಾರರು ಅವರಿಗೆ ಇಷ್ಟವಿರುವ ವಸ್ತುಗಳನ್ನು ತಯಾರಿಸಬಹುದು ಮತ್ತು ಮಾರಾಟ ಮಾಡಬಹುದು.

★ ಬಿದಿರನ್ನು ಅಥವಾ ಬಿದಿರಿನಿಂದ ಮಾಡಿದ ವಸ್ತುಗಳನ್ನು ಕೊಂಡು ಹೋಗುವುದು ಅಪರಾಧವಾಗಿ ಪರಿಗಣಿಸಲಾಗುವುದಿಲ್ಲ.

ಈ ವ್ಯವಸ್ಥೆಯಿಂದ ಮೇದಾರರ ಆರ್ಥಿಕ ಪರಿಸ್ಥಿತಿ ಬಹಳಷ್ಟು ಸುಧಾರಿಸಿದೆ ಹಾಗೂ ಕಾಡುಗಳ ರಕ್ಷಣೆಯೂ ಸಮರ್ಪಕವಾಗಿ ನಡೆಯುತ್ತಿದೆ.

ಚೆನ್ನಗಿರಿ ವಲಯದ ಕುಕ್ವಾಡೇಶ್ವರಿ ಬಿದಿರು ಬಳಕೆದಾರರ ಗುಂಪಿನಲ್ಲಿ ಜೋಳ್‌ದಾಳ್ ಮತ್ತು ಕೆ. ಗಾಣದಕಟ್ಟೆ ಹಳ್ಳಿಗಳಲ್ಲಿ 38 ಮೇದಾರ ಕುಟುಂಬಗಳಿವೆ. ಬಳಕೆದಾರರ ಗುಂಪಿನಿಂದ ಜನರ ಮತ್ತು ಅರಣ್ಯ ಸಂಪನ್ಮೂಲಗಳ ಮೇಲೆ ಆಗಿರುವ ಪರಿಣಾಮದ ಬಗ್ಗೆ ಕೆಲವು ಸೂಚಕಗಳು ಈ ಕೆಳಗಿನಂತಿವೆ :

| ವಿಷಯ | ಬಳಕೆದಾರರ ಗುಂಪಿನ ನಿರ್ಮಾಣದ ಮುಂಚೆ | 1995-96 | 1996-97 | 1997-98 |
|---|---|---|---|---|
| ಕುಟುಂಬದ ಸರಾಸರಿ ವಾರ್ಷಿಕ ಆದಾಯ | ರೂ. 2,000 | ರೂ. 3,000 | ರೂ. 6,000 | ರೂ. 9,000 |
| ಅಪರಾಧಗಳ ಸಂಖ್ಯೆ | 9 (1994-95) | 6 | 5 | 4 |

ಮಾಹಿತಿ : ಜಗ್‌ಮೋಹನ್ ಶರ್ಮ ಡಿ.ಸಿ.ಎಫ್, ಭದ್ರಾವತಿ.
ವಿ.ಗೋಪಾಲ್, ಎ.ಸಿ.ಎಫ್, ಚನ್ನಗಿರಿ

'ನಾಳೆ ಹೇಗೆಂಬ ಅನಿಶ್ಚಿತತೆ' ಹಾಗೂ ಜೀವಿಸಲು ಬೇಕಾಗುವ ಸಂಪನ್ಮೂಲಗಳಿಗೆ ಅವಕಾಶ ಸಿಗುವುದೋ ಇಲ್ಲವೋ ಎಂಬ ಭಯದಿಂದ ಜನರು ಅವರಿಗೆ ಜೀವನೋಪಾಯವಾಗಿರುವ ಕಾಡನ್ನು ಅವರೇ ನಾಶ ಮಾಡುವಂತಾ ಗಿದೆ. ಆದರೆ ಜನರ ಮೇಲೆ ವಿಶ್ವಾಸವಿಟ್ಟು, ಅರಣ್ಯ ತಮ್ಮದೆಂಬ ಭಾವನೆ ಬೆಳೆಸಿದರೆ ಅವರನ್ನು ಅರಣ್ಯ ಸಂರಕ್ಷಣೆಯಲ್ಲಿ ಭಾಗವಹಿಸಲು ಪ್ರೇರೇಪಿಸಬಹುದು. ಅವಕಾಶ ಸಿಕ್ಕಿದಲ್ಲಿ ಆರ್ಥಿಕವಾಗಿ ಹಿಂದುಳಿದ ಜನರು ಕೂಡ ಗೌರವಾನ್ವಿತ ಬದುಕನ್ನು ಸಾಗಿಸಲು ಸಾಧ್ಯ. ■

*ಎಂ. ಹೆಚ್. ಎ. ಶೇಖ್*
*ಅರಣ್ಯ ಸಂರಕ್ಷಣಾಧಿಕಾರಿ*



ಬಿದಿರಿನ ಮೆಳೆಯ ಸಿಕ್ಕುಬಿಡಿಸಿ ಉತ್ತಮಗೊಳಿಸಲು ಮೇದಾರರ ಮತ್ತು ಅರಣ್ಯ ಇಲಾಖೆಯ ಜಂಟಿ ಪ್ರಯತ್ನ

* ಗಿರಿ ಜನರು ಜೀವನೋಪಾಯ ಅಥವಾ ಸಾಂಪ್ರದಾಯಕ ಚಟುವಟಿಕೆಗಳಿಗಾಗಿ ಅರಣ್ಯವನ್ನೇ ಅವಲಂಬಿಸಿರುವ ಸಂದರ್ಭಗಳಲ್ಲಿ 0.25 ಕ್ಕೂ ಅಧಿಕವಾಗಿರುವ ಸಾಂದ್ರತೆಯ ಅರಣ್ಯ ಪ್ರದೇಶದಲ್ಲೂ ಜಂಟಿ ಅರಣ್ಯ ಯೋಜನೆ ಯಡಿಯಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಇಇ ಎಫ್‌ಎಪಿ 93 ದಿನಾಂಕ 16-12-1996ರಲ್ಲಿ ಸೌಲಭ್ಯವನ್ನು ಬಳಸಿಕೊಳ್ಳುವಂತೆ ಅನುವು ಮಾಡಲಾಗಿದೆ.

*ಸಂಪಾದಕರು*





ಅರಳಿಕಟ್ಟೆ

# ಜಂಟಿ ಅರಣ್ಯ ಯೋಜನೆಯಲ್ಲಿ ತರಬೇತಿಯ ಪರಿಣಾಮ

ಜಂಟಿ ಅರಣ್ಯ ಯೋಜನೆಯಲ್ಲಿ '' ತರಬೇತಿ''ಬಹಳ ಮುಖ್ಯವಾದ ಅಂಗ. ತರಬೇತಿಯಲ್ಲಿ ಭಾಗವಹಿಸುವ ಜನರಿಗೆ ''ತರಬೇತಿ'' ಉಪಯುಕ್ತವಾಗಿರಲು ಮತ್ತು ಆಕರ್ಷಣೀಯವಾಗಿರಲು ಪ್ರಯತ್ನಗಳನ್ನು ಮಾಡಲಾಗಿದೆ. ಇದಕ್ಕಾಗಿ ತರಬೇತಿಯಲ್ಲಿ ಅಳವಡಿಸುವ ವಿಧಾನಗಳು, ಕೊಡುವ ಮಾಹಿತಿಗಳು ಜನರಿಗೆ ಅರ್ಥವಾಗುವಂತಿದ್ದು, ವಿವರವಾದ ಉದಾಹರಣೆಯೊಂದಿಗೆ ಕೊಡಲಾಗುತ್ತಿದೆ. ತರಬೇತಿಯ ಗುರಿ, ಸಾಧನೆ ಹಾಗೂ ಫಲವನ್ನು ತರಬೇತಿಯ ಅಂತ್ಯದಲ್ಲಿ ಮಾಡುವ ಮೌಲ್ಯಮಾಪನದಿಂದ ಮತ್ತು ಕಾರ್ಯಕ್ಷೇತ್ರದಲ್ಲಿ ಕಂಡುಬರುವ ಫಲಿತಾಂಶದಿಂದ ತಿಳಿಯಬಹುದಾಗಿದೆ.

### ಶಿಬಿರಾರ್ಥಿಗಳು ತರಬೇತಿಯಲ್ಲಿ ಹಂಚಿಕೊಂಡ ಕೆಲವು ಅನುಭವಗಳು ಈ ಕೆಳಗಿನಂತಿವೆ

★ ಭದ್ರಾವತಿ ವಿಭಾಗದ ಸಿದ್ದೇಶ್ವರ ಗ್ರಾಮ ಅರಣ್ಯ ಸಮಿತಿಯಲ್ಲಿ ಕರ್ನಾಟಕ ಅರಣ್ಯ ಇಲಾಖೆ ಮತ್ತು ಮೈರಾಡಾ ಸಂಸ್ಥೆ ಒಂದುದಿನದ ಮುಖಾಮುಖಿ ಚರ್ಚೆಯನ್ನು ಏರ್ಪಡಿಸಿತ್ತು. ಈ ಚರ್ಚೆಯಲ್ಲಿ ಜೆ.ಎಫ್.ಪಿ.ಎಂ. ತತ್ವ, ಹಿನ್ನೆಲೆ, ಉದ್ದೇಶಗಳು, ಜನರ ಪಾತ್ರ, ಸೂಕ್ಷ್ಮ ಯೋಜನೆ ತಯಾರಿಸುವ ವಿಧಾನ, ಸ್ವಸಹಾಯ ಸಂಘದ ಪರಿಚಯ ಇತ್ಯಾದಿಗಳನ್ನು ಚರ್ಚಿಸಲಾಯಿತು. ತರಬೇತಿಯ ಕೊನೆಗೆ ತರಬೇತಿ ಹೇಗೆ ಇತ್ತೆಂಬುದರ ಬಗ್ಗೆ ಪ್ರಶ್ನಿಸಿದಾಗ ಕೂಲಿ ಮಾಡುತ್ತಿರುವ ಮಹಿಳೆಯೊಬ್ಬರು '' ಈ ತರಬೇತಿ ಕತ್ತಲಲ್ಲಿ ಬೆಳಕು ಚೆಲ್ಲಿದಂತಿತ್ತು'' ಎಂದರು. ಆಗ ಕರ್ನಾಟಕ ಅರಣ್ಯ ಇಲಾಖೆಯ ಸಿಬ್ಬಂದಿಯೊಬ್ಬರು ''ಕೂಲಿಗೆ ಹೋಗಿದ್ದರೆ ಸ್ವಲ್ಪ ಹಣ ಸಿಗುತ್ತಿತ್ತು ಅಲ್ಲವೇ? ಇವತ್ತು ಈ ತರಬೇತಿಗೆ ಬಂದಿದ್ದರಿಂದ ಕೂಲಿ ಇಲ್ಲದಂತೆ ಆಯಿತಲ್ಲ ನಿಮಗೆ'' ಎಂದರು. ಆ ಮಹಿಳೆ ತಟ್ಟನೆ ಉತ್ತರಿಸಿದರು. '' ಕೂಲಿ ಪ್ರತಿದಿನ ಸಂಪಾದಿಸಬಹುದು. ಆದರೆ ಈ ದಿನ ಕಲಿತ ವಿಷಯ ಪ್ರತಿದಿನ ಸಿಗಲಾರದು. ಈ ದಿನ ಪಡೆದ ಜ್ಞಾನ, ಮಾಹಿತಿ, ಅರಿವು, ಜೀವನವನ್ನು ಉತ್ತಮ ಪಡಿಸಲು ಸಾಧ್ಯ. ಮುಂದೆನೂ ಯಾವುದೇ ತರಬೇತಿ ಇದ್ದರೂ ಬರುತ್ತೇನೆ. ಇತರ ಮಹಿಳೆಯರನ್ನೂ ಕರೆದುಕೊಂಡು ಬರುತ್ತೇನೆ. ತರಬೇತಿಯ ಅನುಭವ ಹಣದಲ್ಲಿ ಅಳೆಯಬಾರದು''.

## ತರಬೇತಿಯ ಅನುಭವ ಹಣದಲ್ಲಿ ಅಳೆಯಬಾರದು

### ಒತ್ತುವರಿ ಜಾಗ ಬಿಡ್ತೀವಿ...

★ ಶಿವಮೊಗ್ಗ ವಿಭಾಗದ ಕ್ಯಾದಿಗೇರಿ ಗ್ರಾಮ ಅರಣ್ಯ ಸಮಿತಿಯಲ್ಲಿ ನಡೆದ ಇನ್ನೊಂದು ಮುಖಾಮುಖಿ ಚರ್ಚೆಯ ಮುನ್ನ ಪ್ರಾರಂಭದಲ್ಲಿ ಊರಿನ ಮುಖಂಡರು ಮತ್ತು ಗ್ರಾಮ ಅರಣ್ಯ ಸಮಿತಿಯ ಸದಸ್ಯರು ''ಒತ್ತುವರಿ ಜಾಗವನ್ನು ಬಿಡುವುದಿಲ್ಲ. ಬಡವರಾದ ನಾವು ಕೃಷಿಗೆ ಉತ್ತಮವಾಗಿರುವ ಭೂಮಿಯನ್ನು ಒತ್ತುವರಿ ಮಾಡಿರುವುದು ಸರಿಯಾಗಿದೆ.'' ಎನ್ನುವ ವಾದವನ್ನು ಮಾಡಿ ಒತ್ತುವರಿ ಜಾಗವನ್ನು ಸಕ್ರಮ ಮಾಡಲು ಸಹಕರಿಸುವಂತೆ ಕರ್ನಾಟಕ ಅರಣ್ಯ ಇಲಾಖೆಯನ್ನು ಒತ್ತಾಯಿಸಿದರು. ನಂತರ ಕರ್ನಾಟಕ ಅರಣ್ಯ ಇಲಾಖೆ ಮತ್ತು ಮೈರಾಡಾ ಸಂಸ್ಥೆ ಜೆ.ಎಫ್.ಪಿ.ಎಂ. ತತ್ವ, ಹಿನ್ನೆಲೆ, ಗ್ರಾಮ ಅರಣ್ಯ ಸಮಿತಿಯ ಪಾತ್ರ, ಜವಾಬ್ದಾರಿ ಅಲ್ಲದೆ ಜಂಟಿ ಅರಣ್ಯ ಯೋಜನೆಯಲ್ಲಿ ಜನರೇ ಅರಣ್ಯ ಮತ್ತು ಅರಣ್ಯ ಭೂಮಿಯ ರಕ್ಷಣೆ, ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಉತ್ತಮ ಪಡಿಸುವುದರಿಂದ ಗ್ರಾಮ ಅರಣ್ಯ ಸಮಿತಿಯ ಪ್ರತಿ ಕುಟುಂಬಕ್ಕೆ ದೊರೆಯುವ ಅನುಕೂಲ, ಹಂಚಿಕೆಯ ಬಗ್ಗೆ ವಿವರಿಸಿತು. ಆಗ ಗ್ರಾಮದ ಅರಣ್ಯ ಸಮಿತಿಯವರು, ಮುಖಂಡರು, ಪರಿಸರದ ಬಗ್ಗೆ ಕಾಳಜಿ ಇರುವ ಸ್ವಾಮೀಜಿ ಎಲ್ಲರೂ ಸೇರಿ ಮುಕ್ತವಾಗಿ ಚರ್ಚೆಮಾಡಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಂಡರು.

➜ ಜೆ. ಎಫ್. ಪಿ. ಎಂ. ತತ್ವ ಉತ್ತಮವಾಗಿದೆ. ಗ್ರಾಮ ಅರಣ್ಯ ಸಮಿತಿ ಇರುವುದು ಒಳ್ಳೆಯದು.

➜ ಒತ್ತುವರಿ ಜಾಗವನ್ನು ಬಿಡುತ್ತೇವೆ. ಅಂತೆಯೇ ಅಡಿಕೆ ತೋಟ ಮಾಡಿದ ದೊಡ್ಡ ರೈತರಿಂದಲೂ ಒತ್ತುವರಿ ಬಿಡಿಸಲು ಕರ್ನಾಟಕ ಅರಣ್ಯ ಇಲಾಖೆಗೆ ನಾವು ಸಹಾಯ ಮಾಡುತ್ತೇವೆ.

➜ ಶ್ರೀಗಂಧ ಕಳ್ಳತನ ಆಗುವ ಸ್ಥಳಗಳಲ್ಲಿ ತನಿಖಾ ಗೇಟು (ಚೆಕ್‌ಪೋಸ್ಟ್) ತೆರೆಯುವ ಮೂಲಕ ಪ್ರತಿನಿತ್ಯವಾಗುವ ಕಳ್ಳತನ ನಿಲ್ಲಿಸಲು ಗ್ರಾಮ ಅರಣ್ಯ ಸಮಿತಿಗೆ ಸಹಕರಿಸುತ್ತೇವೆ.

ಈ ಸಭೆಗೆ ಬಂದಿದ್ದ ಶ್ರೀಗಂಧ ಕಳ್ಳತನ ಮಾಡುತ್ತಿದ್ದ ಒಬ್ಬ ವ್ಯಕ್ತಿ ಮುಂದೆ ಬಂದು ''ತಾನು ಇದುವರೆಗೆ ಮಾಡಿದ ಕೆಲಸ ತಪ್ಪು. ಇನ್ನುಮುಂದೆ ಬದುಕಲು ಬೇರೆ ವ್ಯವಸ್ಥೆ ಮಾಡಿಕೊಳ್ಳುತ್ತೇನೆ. ಮರಕಡಿದು ಕಳ್ಳತನ ಮಾಡುವುದಿಲ್ಲ'' ಎಂದರು. ನಂತರ ಅವರ ತಪ್ಪೊಪ್ಪಿಗೆಗೆ ಸಭೆ ಚಪ್ಪಾಳೆ ತಟ್ಟಿ ಹಣ್ಣುಗಳನ್ನು ಕೊಟ್ಟು ಗೌರವಿಸಿತು.

### ಕಳ್ಳತನ ತಡೆದ ಯುವಕರು

★ ಕ್ಯಾದಿಗೇರಿ ಗ್ರಾಮ ಅರಣ್ಯ ಸಮಿತಿಯು 11 ಜನ ಯುವಕರನ್ನು ಆಯ್ಕೆಮಾಡಿ-ಅರಣ್ಯ ರಕ್ಷಣಾ ಸಹಾಯಕದಳವನ್ನು ರಚಿಸಿದೆ. ಕರ್ನಾಟಕ ಅರಣ್ಯ ಇಲಾಖೆಯ ತಾಂತ್ರಿಕ ಸಲಹೆ ಪಡೆಯುತ್ತಿರುವ ಈ ಗುಂಪು ಸುಮಾರು 50 ರಿಂದ 60 ಶೇಕಡಾ ಮರ ಕಳ್ಳತನವನ್ನು ತಡೆದಿದೆ. ಈ ರಕ್ಷಣಾದಳದಲ್ಲಿ ಈ ಹಿಂದೆ ಮರಕಳ್ಳತನ ಮಾಡುತ್ತಿದ್ದು, ಮನ ಪರಿವರ್ತನೆಯಾದ ಯುವಕನು ಕೂಡ ಒಬ್ಬ ಸದಸ್ಯನಾಗಿದ್ದಾನೆ.

ಈ ಎಲ್ಲಾ ಅನುಭವಗಳನ್ನು ಗಮನಿಸಿದಾಗ ನಮಗೆ ಕಂಡು ಬರುವ ಅಂಶವೆಂದರೆ.

- ಸೂಕ್ತ ವಿಷಯಗಳಲ್ಲಿ ಆಯಾಕಾಲದಲ್ಲಿ ತರಬೇತಿಗಳನ್ನು ಆಸಕ್ತಿಯುತವಾಗಿ ಮಾಡಿದರೆ,
- ಸ್ಥಳೀಯ ಮಹಿಳೆಯರ ಮತ್ತು ಪುರುಷರ ಸಹಭಾಗಿತ್ವವಿದ್ದರೆ,
- ತರಬೇತಿಯ ವಿಷಯ, ವಿಧಾನ, ಸಂಪನ್ಮೂಲ ವ್ಯಕ್ತಿಗಳಿಗೆ ಸಂಬಂಧ ಪಟ್ಟಂತೆ ಕಾಲ ಕಾಲಕ್ಕೆ ಮೌಲ್ಯ ಮಾಪನ ಮಾಡುವುದಾದರೆ,
- ಸೂಕ್ತ ಸುಧಾರಣೆಗಳನ್ನು ಮಾಡಿದರೆ,

ಜೆ.ಎಫ್.ಪಿ.ಎಂ. ಹಾಗೂ ಗ್ರಾಮ ಅರಣ್ಯ ಸಮಿತಿಯು ತಮ್ಮ ಉದ್ದೇಶವನ್ನು ಈಡೇರಿಸುವುದರಲ್ಲಿ ಯಾವುದೇ ಸಂದೇಹವಿಲ್ಲ. ■

**ಮೈರಾಡಾ, ಶಿವಮೊಗ್ಗ**





## ತಾಂತ್ರಿಕ ಟಿಪ್ಪಣಿ

ಈ ಅಂಕಣದ ಮೂಲಕ ನಾವು, ನಿಮ್ಮೊಂದಿಗೆ ಅರಣ್ಯ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸಹಾಯವಾಗುವ ಹೊಸ ತಂತ್ರಜ್ಞಾನ ಹಾಗೂ ಮಾಹಿತಿ ಹಂಚಿಕೊಳ್ಳುತ್ತೇವೆ. ಅಲ್ಲದೆ ಜನರಿಗೆ ಆದಾಯ ತರುವಂತಹ ಸರಳ ವಿಧಾನಗಳ ಬಗ್ಗೆಯೂ ಮಾಹಿತಿ ಹಂಚಿಕೊಳ್ಳಲು ಉದ್ದೇಶಿಸಿದ್ದೇವೆ. ಈ ಅಂಕಣದಲ್ಲಿ ನಿಮ್ಮ ಅನುಭವ ಹಾಗೂ ಪ್ರಯೋಗಗಳನ್ನು ಕೂಡ ಪ್ರಕಟಿಸಲು ಆಶಿಸುತ್ತೇವೆ.

# ಕಸಿ ಮಾಡಿದ ಸಸಿಗಳು

ಕಸಿ ವಿಧಾನ ಬಹಳ ಕಾಲದಿಂದಲೂ ಭಾರತದಲ್ಲಿದೆ. ಕೃಷಿಮಾಡುವ ವಿಧಾನದಿಂದ ಹೆಚ್ಚು ಇಳುವರಿ ಕೊಡುವ ಮರಗಳ ಬಗ್ಗೆ ನೀವು ಕೇಳಿರಬಹುದು. ಇತ್ತೀಚಿನ ದಿನಗಳಲ್ಲಿ ಈ ವಿಧಾನವನ್ನು ಅರಣ್ಯ ವೃಕ್ಷಗಳ ಉತ್ತಮ ಸಸಿಯನ್ನು ಬೆಳೆಸಲು ಉಪಯೋಗಿಸಲಾಗುತ್ತಿದೆ.

### ಕಸಿ ಮಾಡಿದ ಸಸಿ ಎಂದರೇನು ?

ಇದು ಎರಡು ಬೇರೆ ಬೇರೆ ಸಸ್ಯಗಳ ಮಿಳಿತಗೊಳಿಸಿ ಇಳುವರಿ ಹೆಚ್ಚಿಸುವ ಲಾಭದಾಯಕ ವಿಧಾನ. ಸ್ಥಳೀಯವಾಗಿ ಬೀಜಗಳಿಂದ ಬೆಳೆಸಿದ ಬೇರು ಸಸಿಗೆ ಉತ್ತಮ ತಳಿಯ ಕೊಂಬೆಯನ್ನು ಜೋಡಿಸಿ, ಅಭಿವೃದ್ಧಿಗೊಳಿಸುವ ವಿಧಾನಕ್ಕೆ 'ಕಸಿ' ಎನ್ನುತ್ತಾರೆ.

### ಕಸಿ ಮಾಡಿದ ಸಸಿಯಿಂದ ಏನು ಪ್ರಯೋಜನ ?

ಬೀಜದಿಂದ ಬೆಳೆಸಿದ ಗಿಡಕ್ಕಿಂತ ಕಸಿ ಮಾಡಿದ ಗಿಡ ಬಹಳ ಬೇಗ ಇಳುವರಿ ನೀಡುತ್ತವೆ. ಉತ್ತಮ ತಾಯಿ ಮರದಿಂದ ಮಾಡಿದ ಸಸಿ ಮರವು ಹೆಚ್ಚು ಇಳುವರಿಯನ್ನು ನೀಡುತ್ತದೆ. ಇಂತಹ ಸಸಿಗಳನ್ನು ಬೆಳೆಸುವುದರಿಂದ ಹೆಚ್ಚಿನ ಆದಾಯವನ್ನು ಪಡೆಯಬಹುದು.

### ಇವುಗಳನ್ನು ಎಲ್ಲಿ ಬೆಳೆಸಬಹುದು ?

ಕಸಿ ಸಸಿಗಳನ್ನು ಹೊಲದಲ್ಲಷ್ಟೇ ಅಲ್ಲದೆ ಕೈತೋಟ, ಹಿತ್ತಲುಗಳಲ್ಲಿಯೂ ಬೆಳೆಸಬಹುದು.

### ಅರಣ್ಯ ಇಲಾಖೆಯಿಂದ ಯಾವ ಜಾತಿಯ ಸಸಿಗಳನ್ನು ಕಸಿ ಮಾಡಲಾಗುತ್ತಿದೆ ?

ಹಲವು ಕಾಡು ಜಾತಿಯ ಮರಗಳ ಬೀಜ, ಹಣ್ಣು, ಎಲೆ, ತೊಗಟೆ ಇತ್ಯಾದಿಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಇದೆ. ಇವುಗಳನ್ನು ಅವಲಂಬಿಸಿ ಬಹಳಷ್ಟು ಜನ ಜೀವನ ಸಾಗಿಸುತ್ತಿದ್ದಾರೆ. ಆದರೆ, ಇಂತಹ ಮರಗಳು ಕಣ್ಮರೆಯಾಗುತ್ತಿವೆ. ಈ ಆದಾಯ ತರುವಂತಹ ಜಾತಿಗಳ ಮರಗಳ ಕಸಿ ಸಸಿಗಳನ್ನು ಅರಣ್ಯ ಇಲಾಖೆ ಗ್ರಾಮೀಣ ಜನರಿಗೆ ವಿತರಿಸಲು ಬೆಳೆಸುತ್ತಿದೆ. ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ 1999ನೇ ಮಳೆಗಾಲದಲ್ಲಿ ವಿತರಿಸಲು ಈ ಕೆಳಕಂಡ ಕಸಿ ಸಸಿಗಳನ್ನು ಬೆಳೆಸಲಾಗುತ್ತಿದೆ.

| | | | | | |
|---|---|---|---|---|---|
| **ಹಲಸು** | - | 3,000 | **ಹುಣಸೆ** | - | 9,000 |
| **ಉಪ್ಪಗೆ** | - | 5,000 | **ಅಂಟುವಾಳ** | - | 4,000 |
| **ವಾಟೆ** | - | 1,000 | **ಗೇರು** | - | 10,000 |
| **ಮಾವು** | - | 14,000 | **ನೆಲ್ಲಿ** | - | 2,000 |

### ಕಸಿ ಮಾಡಿದ ಸಸಿಗಳು ಎಲ್ಲಿ ಸಿಗುತ್ತವೆ?

ಕಸಿ ಮಾಡಿದ ಸಸಿಗಳನ್ನು ಬೆಳೆಸುತ್ತಿರುವ ಸ್ಥಳ ಹಾಗೂ ಸಂಪರ್ಕಿಸಬೇಕಾದ ವ್ಯಕ್ತಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ. ಕಸಿ ಮಾಡುವ ವಿಧಾನಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ನಮಗೆ ಬರೆಯಿರಿ. ■

*ಮಾಹಿತಿ : ವಿನಯಕುಮಾರ್, ಉಪ ಅರಣ್ಯ ಸಂರಕ್ಷಣಾಧಿಕಾರಿ*

# ಓದುಗರಿಗಿ ಆಹ್ವಾನ


ಸಹ್ಯಾದ್ರಿ - ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರಯೋಜನೆಯ ತ್ರೈಮಾಸಿಕ ಪತ್ರಿಕೆ.

ನಿಮ್ಮ ಅನುಭವ, ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳುವುದು ಈ ಪತ್ರಿಕೆಯ ಉದ್ದೇಶ.

ಈ ಪ್ರಯತ್ನಕ್ಕೆ ನಿಮ್ಮ ಸಹಕಾರ, ಸಲಹೆಗಳು ತುಂಬಾ ಮುಖ್ಯ.

ಆರಣ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ, ವೈಶಿಷ್ಟ್ಯಗಳು, ಅನುಭವಗಳು, ಪ್ರಶ್ನೆಗಳು, ಅನುಮಾನಗಳು, ಉತ್ತರಗಳು ಇದ್ದರೆ ನೀವು 'ಸಹ್ಯಾದ್ರಿ' ಗೆ ಬರೆಯಿರಿ.

ಸಹ್ಯಾದ್ರಿ
ವಾಯ್ಸಸ್
ನಂ. 59, ಮಿಲ್ಲರ್ ರಸ್ತೆ, ಬೆನ್ಸನ್ ಟೌನ್
ಬೆಂಗಳೂರು- 560 046. ದೂರವಾಣಿ : 5546564/5363017



# ಪಾಲಿಸಿದ್ದಕ್ಕೆ ಪಾಲು



ಪಾಲಿಸಿದರೆ ಪಾಲು

ಕಾರವಾರ ವಿಭಾಗದ ಅಂಕೋಲ ವಲಯದಲ್ಲಿರುವ ಹಾಲಕ್ಕಿ ಒಕ್ಕಲಿಗ ಕುಟುಂಬಗಳೇ ಹೆಚ್ಚಾಗಿರುವ ಹೊನ್ನೆಬೈಲು ಗ್ರಾಮ ಅರಣ್ಯ ಸಮಿತಿ ಸರ್ಕಾರಿ ಆದೇಶದ ಪ್ರಕಾರ ರಾಜ್ಯದಲ್ಲೇ ಪ್ರಪ್ರಥಮವಾಗಿ ''ಪಾಲನ್ನು ಪಡೆದ ಗ್ರಾಮ ಅರಣ್ಯ ಸಮಿತಿ'' ಎಂಬ ಹೆಗ್ಗಳಿಕೆಯನ್ನು ಪಡೆದಿದೆ.

ಇದರಿಂದ ಗ್ರಾಮಸ್ಥರಿಗೆ ಬಂದ ಆದಾಯ ಈ ಕೆಳಕಂಡಂತಿದೆ.

| | |
|---|---|
| ನೆಡು ತೋಪುಗಳ ಕಟಾವಿನಿಂದ ಬಂದ ಆದಾಯ | ರೂ. 2,10,726 |
| ಸರ್ಕಾರದ ಪಾಲು (50 ಶೇಕಡ) | ರೂ. 1,05,363 |
| ಗ್ರಾಮ ಅರಣ್ಯ ಸಮಿತಿಗೆ ಬಂದ ಆದಾಯ (50 ಶೇಕಡ) | ರೂ. 1,05,363 |
| ಗ್ರಾಮ ಸಮಿತಿಗೆ ಬಂದ ಹಣದಲ್ಲಿ | |
| ★ ಗ್ರಾಮ ಅರಣ್ಯ ಅಭಿವೃದ್ಧಿ ನಿಧಿಯಲ್ಲಿ ತೊಡಗಿಸಿದ ಹಣ | ರೂ. 52,681.50 |
| ★ 97 ಜನ ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಪಾಲು | ತಲಾ ರೂ. 543 |

ಈ ನಗದು ಹಣವನ್ನು ''ಸ್ವಸಹಾಯ ಸಂಘ'' ಗಳನ್ನು ರಚಿಸಿಕೊಂಡು ಅವುಗಳಲ್ಲಿ ಠೇವಣಿಯಾಗಿ ಜಮಾ ಮಾಡಿದ್ದಾರೆ. ■

*ಮಾಹಿತಿ : ಪ್ರಕಾಶ್ ನಟಲ್‌ಕರ್, ಮತ್ತು ಶಿವಾನಂದ ಮೂರ್ತಿ*
*ಉಪ ಅರಣ್ಯಸಂರಕ್ಷಣಾಧಿಕಾರಿಗಳು, ಕಾರವಾರ*

# ಗ್ರಾಮಸ್ಥರಿಂದ ಅರಣ್ಯ ರಕ್ಷಣೆ



ಶ್ರೀ ಶಿರಗುಂಜೇಶ್ವರ ಗ್ರಾಮ ಸಮಿತಿಯ ಸದಸ್ಯರು ಜಪ್ತುಮಾಡಿದ ಅರಣ್ಯ ಉತ್ಪನ್ನಗಳೊಂದಿಗೆ

ಜಂಟಿ ಅರಣ್ಯ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅತೀಹೆಚ್ಚಿನ ಆಸಕ್ತಿಯಿಂದ ಹೊನ್ನಾವರ ವಿಭಾಗದ ಶ್ರೀ ಶಿರಗುಂಜೇಶ್ವರ ಗ್ರಾಮ ಅರಣ್ಯಸಮಿತಿಯ ಸದಸ್ಯರು ಭಾಗವಹಿಸುತ್ತಿದ್ದಾರೆ. ಗ್ರಾಮಗಳ ಅರಣ್ಯದಿಂದ ಆಗುತ್ತಿರುವ ಅರಣ್ಯ ಮರಮಟ್ಟು ಕಳ್ಳತನವನ್ನು ತಡೆಗಟ್ಟುವಲ್ಲಿ ಅರಣ್ಯ ಇಲಾಖೆಯೊಂದಿಗೆ ಸಹಕರಿಸಿ ಮರಗಳನ್ನು ವಶಪಡಿಸಿಕೊಂಡು ಈ ಗ್ರಾಮಸ್ಥರು ಅರಣ್ಯ ಸಂಪತ್ತಿನ ರಕ್ಷಣೆಯನ್ನು ಮಾಡಿದ್ದಾರೆ. ಗ್ರಾಮಸ್ಥರು ಅರಣ್ಯ ಇಲಾಖೆಯೊಡನೆ ಸಹಕರಿಸಿ ಪತ್ತೆ ಹಚ್ಚಿದ ಹಲವು ಪ್ರಕರಣಗಳ ವಿವರ ಹೀಗಿದೆ.

| ಎಫ್.ಐ.ಆರ್.ನಂ. | ಹಿಡಿದ ಮಾಲಿನ ವಿವರ | ಮೌಲ್ಯ | ಮಾಲನ್ನು ವಶಪಡಿಸಿಕೊಂಡ ಸದಸ್ಯರು |
|---|---|---|---|
| ★ 6:97-98, 11/2/98 | ಸಾಗವಾನಿ ದಿಮ್ಮಿ - 3 | | ಅಶೋಕ ಕೃಷ್ಣ ಪಿಕಳೆ |
| | 0.699 ಘ.ಮೀ. | ರೂ. 20,000 | ಈಶ್ವರ ನಾರಾಯಣ ಹೆಗಡೆ ಮತ್ತು ಇತರರು |
| ★ 7: 97-98, 2/3/98 | ನೇರಲ ಕೊರೆದ ನಗಗಳು-4 | | ಈಶ್ವರ ನಾರಾಯಣ ಹೆಗಡೆ (ಅಧ್ಯಕ್ಷರು) |
| | 0.33 ಘ.ಮೀ. | ರೂ. 2,000 | ವಿಮಲಾನಂದ ಗಜಾನನ ದೇಸಾಯಿ ಹಾಗೂ ಇತರರು. |
| ★ 8:97-98, 20/3/98 | ಮತ್ತಿ ಎಳೆ - 2 | ರೂ. 200 | ಈಶ್ವರ ನಾರಾಯಣ ಹೆಗಡೆ (ಅಧ್ಯಕ್ಷರು) |
| | ದೋಣಿ - 1 | ರೂ. 10,000 | ವಿಮಲಾನಂದ ಗಜಾನನ ದೇಸಾಯಿ ಹಾಗೂ ಇತರರು. |
| ★ 9: 97-98, 22/3/98 | ನಂದಿ ರೀಪು 300 ಅಡಿ | ರೂ. 600 | ಈಶ್ವರ ನಾರಾಯಣ ಹೆಗಡೆ (ಅಧ್ಯಕ್ಷರು) ವಿಮಲಾನಂದ ಗಜಾನನ ದೇಸಾಯಿ, ನರಸಿಂಹ ವೆಂಕಟರಮಣ ಭಟ್ಟ ಮಾಬ್ಲು ಹುಲಿಯಾ ಗೌಡ, ಶಂಕರ ತುಳಸು ಗೌಡ, ಶಿವು ಹಮ್ಮು ಗೌಡ ಕುಪ್ಪು ಮಾಣ ಗೌಡ, ಗಣಪತಿ ನಾಗು ಗೌಡ, ನಾಗೇಶ ನಾರಾಯಣ ಅಂಬಿಗ, ತುಳಸು ಬೈರು ಗೌಡ, ಅಶೋಕ ಕೃಷ್ಣ ಪಿಕಳೆ |

ಈ ಗ್ರಾಮ ಅರಣ್ಯ ಸಮಿತಿಯ ಸಹಕಾರದಿಂದ ಸಂಬಂಧಿಸಿದ ಅರಣ್ಯ ಸಿಬ್ಬಂದಿಗಳಿಗೆ ಆಭಾಗದ ಅರಣ್ಯ ರಕ್ಷಣೆಯ ಭಾರ ಕಡಿಮೆ ಆಗಿರುವುದು ಕಂಡು ಬಂದಿರುತ್ತದೆ. ಅಲ್ಲದೆ ಶ್ರೀ ಶಿರಗುಂಜೇಶ್ವರ ಗ್ರಾಮ ಅರಣ್ಯ ಸಮಿತಿಯವರು 1998ನೇ ಇಸವಿಯ ಮಳೆಗಾಲದಲ್ಲಿ ಅರಣ್ಯಪ್ರದೇಶದಲ್ಲಿರುವ ತೆರೆದ ಜಾಗಗಳಲ್ಲಿ ಗಿಡಗಳನ್ನು ಶ್ರಮದಾನದ ಮೂಲಕ ನೆಟ್ಟು ಅದಕ್ಕೆ ಮುಳ್ಳು ಸಂರಕ್ಷಣೆಯನ್ನು ಕೂಡಾ ಒದಗಿಸಿದ್ದಾರೆ. ■

*ಮಾಹಿತಿ : ಗಾಂವಕರ್, ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ*




**ಏನ್ಸಮಾಚಾರ ?**

## ಮೈರಾಡಾ, ಪಶ್ಚಿಮ ಘಟ್ಟ ಪರಿಸರ ಯೋಜನೆ, ಕಾರವಾರ ತರಬೇತಿ ಕಾರ್ಯಕ್ರಮಗಳು

ಮೈರಾಡಾ ಸಂಸ್ಥೆ ಗ್ರಾಮಅರಣ್ಯ ಸಮಿತಿಯ ಸದಸ್ಯರಿಗೆ, ಕರ್ನಾಟಕ ಅರಣ್ಯ ಇಲಾಖೆಯ ಸಿಬ್ಬಂದಿಗಳಿಗೆ, ಪದನಿಮಿತ್ತ ಅಧಿಕಾರಿಗಳಿಗೆ, ಗ್ರಾಮ ಪಂಚಾಯತ್ ಸದಸ್ಯರಿಗೆ ಈ ಕೆಳಗಿನ ತರಬೇತಿ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿದೆ.

1. ಸ್ವ-ಸಹಾಯ ಗುಂಪು, ಉಳಿತಾಯ/ಸಾಲ ನಿರ್ವಹಣಾಗುಂಪು
2. ಸಂಘರ್ಷ ನಿವಾರಣೆ
3. ಸಾಮಾನ್ಯ ಸಂಪನ್ಮೂಲ ನಿರ್ವಹಣೆ
4. ಸರ್ಕಾರಿ ಕಾರ್ಯಕ್ರಮಗಳು
5. ಸಂವಹನ ಕೌಶಲ್ಯ
6. ದಾಖಲಾತಿ/ ಲೆಕ್ಕಪುಸ್ತಕ ನಿರ್ವಹಣೆ
7. ಮುಂದಾಳತ್ವ/ ಮುಖಂಡತ್ವ ಕೌಶಲ್ಯ ಅಭಿವೃದ್ಧಿ
8. ಜೆ.ಎಫ್.ಪಿ.ಎಂ. ಸಿದ್ಧಾಂತ / ಆಚರಣೆ

ಈ ಮೇಲಿನ ತರಬೇತಿಗಳಲ್ಲಿ ಭಾಗವಹಿಸಲು ಇಚ್ಛಿಸುವ ವ್ಯಕ್ತಿಗಳು ಆಯಾ ವಿಭಾಗದ ಜಂಟಿ ಅರಣ್ಯ ಯೋಜನೆಯ ವಲಯ ಅರಣ್ಯಾಧಿಕಾರಿಗಳಿಂದ ಹೆಚ್ಚಿನ ವಿವರಗಳನ್ನು ಪಡೆದು ಕೊಳ್ಳಬಹುದು.

## ಉತ್ತರ ಕನ್ನಡ ಜಿಲ್ಲೆಯ ಗ್ರಾಮ ಅರಣ್ಯ ಸಮಿತಿಗಳ ವಿಕಸನ ಪ್ರವಾಸ

ಪಶ್ಚಿಮ ಘಟ್ಟಗಳ ಅರಣ್ಯೀಕರಣ ಮತ್ತು ಪರಿಸರ ಯೋಜನೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ರಚನೆಗೊಂಡ ವಿವಿಧ ಗ್ರಾಮ ಅರಣ್ಯ ಸಮಿತಿಗಳ ಪ್ರಗತಿ ಅರಿಯುವ ಸಲುವಾಗಿ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ವಿಕಸನ ಪ್ರವಾಸ ಏರ್ಪಡಿಸಲಾಗಿದೆ. ಸದರಿ ಪ್ರವಾಸದಲ್ಲಿ ಭಾಗವಹಿಸಲು ಇಚ್ಛಿಸುವ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಸ್ಥಳೀಯ ಜಂಟಿ ಅರಣ್ಯ ಯೋಜನೆಯ ವಲಯ ಅರಣ್ಯಾಧಿಕಾರಿಯವರನ್ನು ಸಂಪರ್ಕಿಸಬೇಕಾಗಿ ಭಿನ್ನಹ.

### ಕಾರ್ಯಕ್ರಮ ಹೀಗಿದೆ

| ವಿಭಾಗ | ವಲಯ | ದಿನಾಂಕ | ಗ್ರಾ.ಅ. ಸದಸ್ಯರ ಸಂಖ್ಯೆ. | ಭೇಟಿ ನೀಡಬೇಕಾದ ಸ್ಥಳ |
|---|---|---|---|---|
| 1. ಹೊನ್ನಾವರ | ಭಟ್ಕಳ | 18.2.99 ರಿಂದ 20.2.99 | 15 ಮಂದಿ | ಹೊನ್ನೆಬೈಲ, ಅಂಕೋಲ, ಕಾರವಾರ, ಸಾತಗೇರಿ, ಉಳವಿ |
| 2. ಕಾರವಾರ | ಗೋಪಶಿಟ್ಟಾ | 23.2.99 ರಿಂದ 25.2.99 | 15 ಮಂದಿ | ಹೊನ್ನೆಬೈಲ, ಅಂಕೋಲ, ಕಾರವಾರ, ಸಾತಗೇರಿ, ಉಳವಿ |


ಲೇಖಕರ ಅಭಿಪ್ರಾಯಗಳು ವೈಯಕ್ತಿಕವಾಗಿದ್ದು, ಇವುಗಳು ಕರ್ನಾಟಕ ಅರಣ್ಯ ಇಲಾಖೆಯ ನೀತಿ ನಿಯಮಗಳನ್ನು ಅವಶ್ಯಕವಾಗಿ ಪ್ರತಿಬಿಂಬಿಸುವುದಿಲ್ಲ.
ಪಶ್ಚಿಮಘಟ್ಟಗಳ ಅರಣ್ಯೀಕರಣ ಮತ್ತು ಪರಿಸರ ಯೋಜನೆಯ ಸಂಪಾದಕೀಯ ಮಂಡಳಿಯಿಂದ ಸಂಪಾದಿಸಲ್ಪಟ್ಟಿದೆ.
ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ, ಕರ್ನಾಟಕ ಅರಣ್ಯ ಇಲಾಖೆ ಇವರಿಗಾಗಿ ಪ್ರಕಾಶಿಸಿ, ಮುದ್ರಿಸಿದವರು: ವಾಯ್ಸಸ್, ನಂ. 59, ಮಿಲ್ಲರ್ ರಸ್ತೆ, ಬೆನ್ಸನ್ ಟೌನ್, ಬೆಂಗಳೂರು-560 046.


ತೆರೆದ - ಅಂಚೆ


**ಸಹ್ಯಾದ್ರಿ**

ತ್ರೈಮಾಸಿಕ ಪತ್ರಿಕೆ
ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ

ಜನವರಿ 1999

ವಾಯ್ಸಸ್
ನಂ. 59, ಮಿಲ್ಲರ್ ರಸ್ತೆ, ಬೆನ್ಸನ್ ಟೌನ್
ಬೆಂಗಳೂರು - 560 046
ದೂರವಾಣಿ : 5546564/5363017


Sri. Pandurang Hegde
Pridada Sanmakrashana Kendra
C/o. Hulemaligi Brothers,
Chowkinath
Sirsi-581 401
U. Kannada - 75139
75139

## ವಿದ್ಯುತ್ ತೊಂದರೆಯಿಂದ ಬಳಲುತ್ತಿರುವಿರಾ?

**ನಿಮ್ಮ ಸಮಸ್ಯೆಯ ಪರಿಹಾರಕ್ಕೆ ಇದೀಗ ಬಂದಿದೆ!**

# ಟಾ ಟಾ ಬಿ. ಪಿ. ಸೋಲಾರ್

(ಬ್ರಿಟೀಷ್ ಪೆಟ್ರೋಲಿಯಂ ಅವರ ಸಹಯೋಗದೊಂದಿಗೆ)

1) **ಸೋಲಾರ್ ಪಾನೆಲ್‌ಗಳು :** ಸೂರ್ಯನ ಬೆಳಕನ್ನು ನೇರವಾಗಿ ವಿದ್ಯುತ್‌ಚ್ಛಕ್ತಿಯನ್ನಾಗಿ ಪರಿವರ್ತಿಸಿ ಈ ಶಕ್ತಿಯ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

2) **ಸೋಲಾರ್ ಬ್ಯಾಟರಿಗಳು :** ಸೂರ್ಯನ ಶಕ್ತಿಯನ್ನು ಶೇಖರಿಸಿಡಬಹುದು ಮತ್ತು ಶೇಖರಿಸಿದ ಶಕ್ತಿಯನ್ನು ವಿದ್ಯುತ್ ರೂಪದಲ್ಲಿ ಬಳಸಬಹುದು.

3) **ಸೋಲಾರ್ ಇನ್‌ವರ್ಟರಗಳು :** ಮನೆಗಳಿಗೆ ನಿರಂತರ ವಿದ್ಯುತ್ ಪೂರೈಸುತ್ತದೆ.

4) **ಸೋಲಾರ್ ವಾಟರ್ ಹೀಟರ್ :** ನರ್ಸಿಂಗ್ ಹೋಮ್, ಹೊಟೇಲ್, ಹಾಸ್ಟೇಲ್‌ಗಳಲ್ಲಿ ಹಾಗೂ ಮನೆಗಳಲ್ಲಿ ನೀರು ಕಾಯಿಸಲು ಬಳಸಬಹುದು.

5) **ಸೋಲಾರ್ ಬೀದಿ ದೀಪ :** ಗಾರ್ಡನ್ ದೀಪಗಳು, ಲಾಟೀನುಗಳು ಇನ್ನೂ ಮುಂತಾದ ಉಪಕರಣಗಳು ದೊರೆಯುತ್ತದೆ.

**ಸೋಲಾರ್ ಉಪಕರಣಗಳನ್ನು ಬಳಸಿ.**

**ಇಂಧನ ಮತ್ತು ವಿದ್ಯುತ್ ಉಳಿಸಿ.**

PRK F9

SAHANA AGENCIES
Hulgol Chawl, Hospet Road
SIRSI-581 401

# ಐಬೆಕ್ಸ್ ಘಲೆಗಾರ್

(ಘಲೆಗಾರ್ ಗ್ರೂಪ್, ನ್ಯೂಜಿಲೆಂಡ ಮತ್ತು ಭಾರತದ ಸಹಯೋಗದೊಂದಿಗೆ)

1) **ದೂರ ಪ್ರದೇಶದಲ್ಲಿ ಪ್ರಾಣಿಗಳ ಪರಿಣಾಮಕಾರಿ ನಿಯಂತ್ರಣ :**
ವಿದ್ಯುತ್ ಸಂಪರ್ಕ ಇಲ್ಲದ ಸ್ಥಳದಲ್ಲಿ, ವಿದ್ಯುತ್ ಅಭಾವವಿರುವಲ್ಲಿ ಐಬೆಕ್ಸ್ ಗ್ಯಾಲಹರ್ ಸೌರ ಶಕ್ತಿ ಚಾಲಿತ ಬ್ಯಾಟರಿ ಎನರ್ಜೈಸರ್‌ಗಳು ಪ್ರಾಣಿಗಳನ್ನು ನಿಯಂತ್ರಿಸಲು ಉಪಯೋಗಿಯಾಗುತ್ತದೆ. ಅಲ್ಲದೆ ವಿದ್ಯುತ್ ಸಂಪರ್ಕವಿದ್ದಲ್ಲೂ ಉಪಯೋಗಿಸಬಹುದು.

2) **ಐಬೆಕ್ಸ್ ಬ್ಯಾಟರಿ :** ಐಬೆಕ್ಸ್ ಬೇಲಿಗಳಿಗಾಗಿ ತಯಾರಿಸಲ್ಪಟ್ಟ ವಿಶೇಷ ಬ್ಯಾಟರಿಗಳು.

3) **ಗ್ಯಾಲಹರ್ ವಾಯರ್ :** ತುಕ್ಕು ರಹಿತ ತಂತಿಗಳಾಗಿರುತ್ತವೆ ಮತ್ತು ಸಾದಾ ಉಪಕರಣಗಳಿಂದ ತುಂಡು ಮಾಡಲು ಸಾಧ್ಯವಿಲ್ಲ.

4) **~~ಐಬೆಕ್ಸ್ ಗ್ಯಾಲಹರ್~~ :** ಎಲ್ಲಾ ಶ್ರೇಣಿಯ ಬ್ಯಾಟರಿ ಎನರ್ಜೈಸರ್‌ಗಳಿಗೂ ಸೋಲಾರ್ ಪಾನೆಲ್‌ಗಳನ್ನು ಅಳವಡಿಸಲು ಸಾಧ್ಯ.

ಸಹನಾ ಏಜನ್ಸೀಸ್

ಸ್ಥಳೀಯ ಮಾರಾಟಗಾರರು
**~~ಸ್ಪಂದನ ಏಜನ್ಸೀಸ್~~,**
ಹುಳಗೋಳ ಚಾಳ, ಹೊಸಪೇಟೆ ರೋಡ,
**ಶಿರಸಿ**-581 401
( ದಿ : 5-10-95 ರಂದು ಗುರುವಾರ ಪ್ರಾರಂಭ )

ಸೌರ ಶಕ್ತಿಯನ್ನು ಬಳಸಿ.
ಪರಿಸರ ಉಳಿಸಿ.

ಬೇಲಿಯ ರಿಂದ ಶಿಗ್ಲುತ್ತದೆ

PSK F9

॥ ವೃಕ್ಷೋಃ ರಕ್ಷತಿ ರಕ್ಷಿತಃ ॥

ಜಿಲ್ಲಾ ಗ್ರಾಮ ಅರಣ್ಯ ಸಮಿತಿಗಳ ಒಕ್ಕೂಟ

ಮತ್ತು

ಅರಣ್ಯ ಇಲಾಖೆ, ಕೆನರಾ ವೃತ್ತ

ಇವರ ಸಹಯೋಗದೊಂದಿಗೆ

## ಜಿಲ್ಲಾ ಗ್ರಾಮ ಅರಣ್ಯ ಸಮಿತಿಗಳ ಸಮಾವೇಶ-2001

# ಆಮಂತ್ರಣ

ದಿನಾಂಕ : 24-9-2001, ಸೋಮವಾರ

ವೇಳೆ : ಬೆಳಿಗ್ಗೆ ಘಂಟೆ 10-00 ರಿಂದ

ಸ್ಥಳ : ಶ್ರೀ ರಾಘವೇಂದ್ರ, ಕಲ್ಯಾಣ ಮಂಟಪ , ಶಿರಸಿ

## ಉದ್ಘಾಟನಾ ಸಮಾರಂಭ

ದಿನಾಂಕ : 24-9-2001, ಸೋಮವಾರ

ವೇಳೆ : ಬೆಳಿಗ್ಗೆ ಘಂಟೆ 10-00ರಿಂದ

ಸ್ಥಳ : ಶ್ರೀ ರಾಘವೇಂದ್ರ ಕಲ್ಯಾಣ ಮಂಟಪ, ಶಿರಸಿ

ಅಧ್ಯಕ್ಷತೆ :

**ಶ್ರೀ ಎಂ.ಕೆ. ಭಟ್ಟ, ಬೆಂಗಳೂರು**

ಉದ್ಘಾಟಕರು :

**ಶ್ರೀ ಆರ್.ಎಸ್. ರಾಯ್ಕರ್**

ಅಧ್ಯಕ್ಷರು, ಜಿಲ್ಲಾ ಪಂಚಾಯತ ಉ.ಕ.

ಮುಖ್ಯ ಅತಿಥಿಗಳು :

**ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ**

ಶಾಸಕರು, ಅಂಕೋಲಾ ಕ್ಷೇತ್ರ

**ಶ್ರೀ ವಿನಯ್ ಲೂತ್ರಾ**

ಅರಣ್ಯ ಸಂರಕ್ಷಣಾಧಿಕಾರಿಗಳು, ಕೆನರಾ ವೃತ್ತ

**ಶ್ರೀ ಶಾಂತಾರಾಮ ಹೆಗಡೆ, ಶೀಗೇಹಳ್ಳಿ**

ಅಧ್ಯಕ್ಷರು, ಕೆ.ಡಿ.ಸಿ.ಸಿ. ಬ್ಯಾಂಕ್, ಶಿರಸಿ

**ತಮಗೆ ಆದರದ ಸ್ವಾಗತ**

## ಸಮಾರೋಪ ಸಮಾರಂಭ

ವೇಳೆ : ಮಧ್ಯಾಹ್ನ ಘಂಟೆ 3-30ರಿಂದ

ಸ್ಥಳ : ಶ್ರೀ ರಾಘವೇಂದ್ರ, ಕಲ್ಯಾಣ ಮಂಟಪ, ಶಿರಸಿ

ಅಧ್ಯಕ್ಷತೆ :

**ಶ್ರೀ ಎಂ.ಕೆ. ಭಟ್ಟ, ಬೆಂಗಳೂರು**

ಮುಖ್ಯ ಅತಿಥಿಗಳು :

**ಶ್ರೀ ಕೆ.ಎಚ್. ರಂಗನಾಥ**

ಅರಣ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ

**ಶ್ರೀ ಆರ್.ವಿ. ದೇಶಪಾಂಡೆ**

ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಕಾರವಾರ ಜಿಲ್ಲೆ

ಅತಿಥಿಗಳು :

**ಶ್ರೀ ವಿವೇಕಾನಂದ ವೈದ್ಯ**

ಶಾಸಕರು, ಶಿರಸಿ-ಸಿದ್ದಾಪುರ ಕ್ಷೇತ್ರ

**ಶ್ರೀ ಜೆ.ಡಿ. ನಾಯ್ಕ**

ಶಾಸಕರು, ಭಟ್ಕಳ ಕ್ಷೇತ್ರ

**ಶ್ರೀ ಮೋಹನ ಶೆಟ್ಟಿ**

ಶಾಸಕರು, ಕುಮಟಾ

**ಶ್ರೀ ವಿ.ಡಿ. ಹೆಗಡೆ, ಹಳಿಯಾಳ**

ವಿಧಾನ ಪರಿಷತ್ ಸದಸ್ಯರು

**ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ**

ಶಾಸಕರು, ಅಂಕೋಲಾ

ತಾವು ಈ ಸಮಾರಂಭದಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಧ್ಯಕ್ಷರು,

ಜಿಲ್ಲಾ ಗ್ರಾಮ ಅರಣ್ಯ ಸಮಿತಿಗಳ ಒಕ್ಕೂಟ (ಉತ್ತರ ಕನ್ನಡ)

ಶ್ರೀ ಪಾಂಡುರಂಗ ಹೆಗಡೆರು.

ಶಿರಸಿ.

ಉದಯ ಆಫ್‌ಸೆಟ್ಸ್, ಶಿರಸಿ

# ಅಪ್ಪಿಕೋ ಚಳುವಳಿಗೆ ಬನ್ನಿ.

ಸಿದ್ದಾಪುರ ತಾಲೂಕು ನಡಗೋಡ ಅರಣ್ಯವಲಯಕ್ಕೆ ಸೇರಿದ ನಡಗೋಡ ಗ್ರಾಮದಲ್ಲಿ ೨೦ ಎಕರೆ ದಟ್ಟಹಸಿರು ಅರಣ್ಯವನ್ನು ನೆಲಸಮ ಕಡಿಯಲು ಅರಣ್ಯ ಇಲಾಖೆ ಪ್ರಾರಂಭ ಮಾಡಿದೆ.

ಈ ಅರಣ್ಯ ನಾಶದಿಂದ ಈ ಭಾಗದ ಪರಿಸರದ ಮೇಲೆ ಕೆಟ್ಟ ಪರಿಣಾಮ ಆಗುತ್ತದೆ. ಇದರಿಂದ ಜನಜೀವನ ಹಾಗೂ ಮಳೆ-ಬೆಳೆ ಮೇಲೂ ದುಷ್ಪರಿಣಾಮ ಆಗೇ ಆಗುತ್ತದೆ. ಇದನ್ನು ಮನಗಂಡು ಈ ಕಾಡನ್ನು ಕಡಿಯುವುದನ್ನು ತಡೆಗಟ್ಟುವುದಕ್ಕಾಗಿ ದಿ: 11-11-1983 ನೇ ಶುಕ್ರವಾರ ಮುಂಜಾನೆ 9-30 ಘಂಟೆಯಿಂದ ನಡಗೋಡ ಅರಣ್ಯದಲ್ಲಿ ಅಹಿಂಸಾತ್ಮಕ ಚಳವಳಿಯನ್ನು ಕೈಗೊಳ್ಳಲಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೂ-ಮಹನೀಯರೂ ಬಂದು ಸಹಕರಿಸಬೇಕಾಗಿ ಪ್ರಾರ್ಥನೆ.

ಅಧ್ಯಕ್ಷರು,

ಪರಿಸರ ಸಂರಕ್ಷಣಾ ಸಮಿತಿ, ಸಾಲಕಣಿ
ಶಾಖೆ ಸಿದ್ದಾಪುರ.

ಪುರ
9-11-83

# ಔಟ್ ರೀಚ್

(ಗ್ರಾಮೀಣ ಅಭಿವೃದ್ಧಿಯ ಸ್ವಯಂಸೇವಕರು)
ಕರ್ನಾಟಕ ಸರಕಾರ - ಡಿ.ಎಫ್.ಐ.ಡಿ
ಪಶ್ಚಿಮ ಘಟ್ಟಗಳ ಜೆ.ಎಫ್.ಪಿ.ಎಮ್ ಕಾರ್ಯಕ್ರಮ
ಸಾಮಾಜಿಕ ಬದಲಾವಣೆಯ ಪರಿಶೀಲನೆಯಿಂದ ಕಂಡು ಬಂದ ಅಂಶಗಳ ಸಾರಂಶ

## ಟಿಪ್ಪಣಿ.

ಕರ್ನಾಟಕ ಸರಕಾರ - ಡಿ.ಎಫ್.ಐ.ಡಿ ಪಶ್ಚಿಮ ಘಟ್ಟಗಳ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯಕ್ರಮದ ಸಾಮಾಜಿಕ ಬದಲಾವಣೆಯ ಪರಿಶೀಲನೆಯ ಜವಾಬ್ದಾರಿಯನ್ನು ಔಟ್ ರೀಚ್‌ಗೆ ವಹಿಸಲ್ಪಟ್ಟಿತ್ತು. ಪ್ರಾರಂಭದಲ್ಲಿ ಈ ಅಧ್ಯಯನವನ್ನು ಕೆನರಾ ವೃತ್ತದ 6 ಗ್ರಾಮಗಳಲ್ಲಿ, ಶಿವಮೊಗ್ಗೆಯ 3 ಗ್ರಾಮಗಳಲ್ಲಿ ಮಾಡಲು ಯೋಜಿಸಲಾಯಿತು. ಕರ್ನಾಟಕ ಅರಣ್ಯ ಇಲಾಖೆ ಮತ್ತು ಕೆಲವು ಎನ್.ಜಿ.ಒ. ಗಳ ಜೊತೆಯಲ್ಲಿಅವರ ಸಲಹೆಯ ಮೇಲೆ ರೂಪಿಸಲಾದ ಆಧಾರಾಂಶಗಳ ಪ್ರಕಾರ ಆರಿಸಲಾದ 9 ಗ್ರಾಮಗಳನ್ನು ಹೊರತುಪಡಿಸಿ, ಕರ್ನಾಟಕ ಅರಣ್ಯ ಇಲಾಖೆ ಮತ್ತು ಶಿವಮೊಗ್ಗ - ಸಿರ್ಸಿಯ ಕೆಲವು ಎನ್.ಜಿ.ಒ.ಗಳ ಸೂಚನೆಯ ಮೇಲೆ ಕೆನರಾ ವೃತ್ತದ 4 ಮತ್ತು ಶಿವಮೊಗ್ಗ ವೃತ್ತದ 5 ಗ್ರಾಮಗಳನ್ನೂ ಸೇರಿಸಲಾಯಿತು. ಹಾಗಾಗಿ ಕರ್ನಾಟಕ ಅರಣ್ಯ ಇಲಾಖೆ ಮತ್ತು ಕೆಲವು ಎನ್.ಜಿ.ಒ.ಗಳ ಸಲಹೆಯ ಮೇಲೆ 18 ಗ್ರಾಮಗಳನ್ನು ಕಡೆಯಲ್ಲಿ ನಿರ್ಧರಿಸಲಾಯಿತು.

## ಆಯ್ಕೆಯ ಆಧಾರಾಂಶಗಳು

ಗ್ರಾಮಗಳ ಅಧ್ಯಯನದ ಆಯ್ಕೆಗಾಗಿ ವಿಸ್ತರಿಸಿದ ಆಧಾರಾಂಶಗಳು ಈ ಕೆಳಗೆ ಕಂಡಂತಿವೆ

**ಕ್ರಮಸಂಖ್ಯೆ ಪ್ರಮಾಣಗಳು**

1. ವಯಸ್ಸು (ವಿ.ಎಫ್.ಸಿ ನೋಂದಾಯಿಸಿದ ತಾರೀಖು)
2. ಸಜಾತೀಯ/ವಿಜಾತೀಯ Homogeneous / Heterogeneous
3. ಎನ್.ಜಿ.ಓ/ಎನ್.ಜಿ.ಓ ಅಲ್ಲದ, ಹಾಜರಿ
4. ಸ್ವಯಂಸಂಘಟಿಸಲ್ಪಟ್ಟದ್ದು/ಸ್ವಯಂಪ್ರೇರಕ/ಅಥವಾ ಇತರೆ ಸಂಸ್ಥೆಗಳು ಸಂಘಟಿಸಿದ್ದು (ಕ.ಅ.ಇ ಎನ್.ಜಿ.ಓ ಅಲ್ಲದೆ)/ಪೂರ್ಣ ಮಹಿಳಾ ವಿ.ಎಫ್.ಸಿ.ಗಳು.
5. ವಿಫಲವಾದ ವಿ.ಎಫ್.ಸಿ.ಗಳು
6. ಬಳಕೆದಾರರ ಗುಂಪುಗಳು ಉದಾ ದನಗಾಹಿಗಳು/ಬಿದಿರು ಯುಪಯೋಗಿಸುವವರು
7. ಸ್ಥಳ/ಸಾಧನೆಯ ಆಧಾರ
8. ಕೃಷಿ ಮಾಡಿದ್ದು/ [illegible] [illegible]

| | | |
|---|---|---|
| ವ್ಯವಸಾಯ | ಆಡಳಿತದ ಮೇಲೆ | ವ್ಯವಸಾಯ |
| ಆಧಾರಿತ | ಆಧಾರಿತ | ಅರಣ್ಯ ಇಲಾಖೆ |

9. ಅರಣ್ಯ ರಕ್ಷಣೆ
10. ಪರಿಸರ - ಪ್ರವಾಸೋದ್ಯಮ
11. ವ್ಯಾಪಾರ
12. ಮಂಡಲ ವಿ.ಎಫ್.ಸಿ
13. ವಿ.ಎಫ್.ಸಿ.ಯ ಆಕಾರ ಅಳತೆ

ಕ.ಅ.ಇ ಮತ್ತು ಎನ್.ಜಿ.ಓಗಳು ಗುರುತಿಸಿ ಸಲಹೆ ಮಾಡಿದ ಗ್ರಾಮಗಳ ಪಟ್ಟಿಯ ಮೇಲೆ ಈ ಪ್ರಮಾಣಗಳನ್ನು ಇಡಲಾಯಿತು(ಗಮನಿಸಿ - ಅನ್ನೆಕ್ಸರ್ 1). ಅತ್ಯಂತ ಹೆಚ್ಚು ಪ್ರಮಾಣಗಳನ್ನು ಪೂರೈಸುವ ಗ್ರಾಮಗಳನ್ನು ಕಡೆಯದಾಗಿ ಅಧ್ಯಯನಕ್ಕಾಗಿ ಈ ಕೆಳಗೆ ಕಂಡಂತೆ ಆರಿಸಲಾಯಿತು.

| | ಕೆನರಾವೃತ್ತ | ಒಟ್ಟು | ಶಿವಮೊಗ್ಗಾ ವೃತ್ತ | ಒಟ್ಟು |
|---|---|---|---|---|
| ಮುಖ್ಯ ಗ್ರಾಮಗಳು | ಅಧ್ಯಯನ ಕಾನಗೋಡು<br>ಕನ್ನಿಗೇರಿ<br>ಬಾಲಶೆಟ್ಟಿಕೊಪ್ಪ<br>ಸಾತೇಗಿರಿ<br>ಮುಷ್ಟ<br>ಸಿರಿಗುಂಜಿ | 6 | ಮೃಗವಾಡೆ<br>ಕೆಂಚೀಕೊಪ್ಪ<br>ಹನ್ನೆ<br>ಜೋಲ್ದಾಲ್<br>ಅತ್ತಿಬೈಲು | 5 |
| ಸೇರಿಸಿದ ಗ್ರಾಮಗಳು | ಕರಿಗೇನ ಕೊಪ್ಪ<br>ಬಾಷಿ<br>ಕೋಟೆಕೊಪ್ಪ<br>ಕುಂಬಾರ ಕೊಪ್ಪ | 4 | ಕಾರೂರು<br>~~ಕಾಳೀಮನೆ~~<br>ಮುದುಭಾಸಿದ್ದಾಪುರ | 3 |
| ಒಟ್ಟು | | 10 | | 8 |

ಅಧ್ಯಯನಕ್ಕಾಗಿ ಕ್ಷೇತ್ರ ಕಾರ್ಯವು 98ರ ಜನವರಿ ಮತ್ತು ಮಾರ್ಚ ನಡುವೆ ನಡೆಯಿತು. ಅಧ್ಯಯನದ ತಂಡವು ಕೆನರಾ ಮತ್ತು ಶಿವಮೊಗ್ಗ ವೃತ್ತಗಳ ಅರಣ್ಯ ಇಲಾಖೆ ಮತ್ತು ಶಿವಮೊಗ್ಗ ಮತ್ತು ಉತ್ತರ ಕನ್ನಡದ ಎನ್.ಜಿ.ಒ.ಗಳ ಮುಖ್ಯ ಸಿಬ್ಬಂದಿಯೊಡನೆ ಇನ್ನು ಪರಸ್ಪರ ಕಾರ್ಯನಡೆಸಬೇಕಾಗಿದೆ.

ಒಟ್ಟಿನಲ್ಲಿ 8 ಮಹಿಳೆಯರೂ ಸೇರಿದಂತೆ ಔಟ್ ರೀಚ್‌ನ 30 ಸಿಬ್ಬಂದಿ ಈ ಪ್ರಯೋಗದಲ್ಲಿ ಪಾಲ್ಗೊಂಡಿದ್ದರು (ಗಮನಿಸಿ - ಅನೆಕ್ಚರ್ 2). ಅವರು ಗುಂಪುಗಳಾಗಿ ಬಂದು ಅನುಭವೀ ಮುಖ್ಯ ಸಮುದಾಯದ ಮೇಲ್ವಿಚಾರಣಿಯಲ್ಲಿ ಕೆಲಸ ಮಾಡಿದರು. ಗಮನಿಸಬೇಕಾದ ಅಂಶಗಳ ಕರಾರಿನಂತೆ ಅಧ್ಯಯನದಲ್ಲಿ ಈ ಕೆಳಕಂಡ ಅಂಶಗಳ ಮೇಲೆ ವಿಶೇಷ ಒತ್ತು ಕೊಡಲಾಯಿತು.

. ವಿವಿಧ ಗುಂಪುಗಳ ಜೀವನಾಧಾರದ ರೀತಿ, ಅರಣ್ಯ / ಅರಣ್ಯ ಉತ್ಪನ್ನಗಳ ಮೇಲಿನ ಅವಲಂಬನಾ ವೈಶಾಲ್ಯ
. ಕಾರ್ಯಕ್ರಮದಲ್ಲಿ ವಿವಿಧ ಗುಂಪುಗಳ ಒಳಪಡಿಕೆಯ ನಿರ್ಧಾರಗಳು ಮತ್ತು ಧನ ಮತ್ತು ಋಣ ಪರಿಣಾಮಗಳು
. ಇದರಲ್ಲಿ ಮಹಿಳೆಯರ, ಜಮೀನು ರಹಿತರ, ಹರಿಜನ, ಗಿರಿಜನರ ಮತ್ತು ಇತರೆ ಬದಿಯ ಗುಂಪುಗಳ/ ಬಳಕೆದಾರರ ಗುಂಪುಗಳ ಒಳಪಡಿಕೆಯ ವಿಚಾರವಾಗಿ ಒತ್ತು ಮತ್ತು ಕಾರ್ಯಕ್ರಮದ ಮೇಲೆ ಅವರ ಪರಿಣಾಮದ ಬಗ್ಗೆ ವಿಶೇಷ ಒತ್ತು ನೀಡಲಾಯಿತು.
. ಕರ್ನಾಟಕ ಅರಣ್ಯ ಇಲಾಖೆಯೊಡನೆ ಸಂಬಂಧ ಮತ್ತು ಜೆ.ಎಫ್.ಪಿ.ಎಂ.ಗೆ ಸೇರಿದ ಸಂಸ್ಥೆಗಳೊಡನೆ ಸಂಬಂಧ - ಉದಾ ಎನ್.ಜಿ.ಒ.ಗಳು ಇತ್ಯಾದಿ

. ತರಪೇತಿ ಆಧಾರ ಅವಶ್ಯಕತೆಗಳನ್ನು ಗುರುತಿಸುವುದು.
. ಆರಸಿದ ಗ್ರಾಮಗಳಲ್ಲಿ ಜೆ.ಎಫ್.ಪಿ.ಎಂ ಕಾರ್ಯಕ್ರಮದ ವಿಫಲತೆ / ಸಫಲತೆಯನ್ನು ಗುರುತಿಸುವುದು.
. ಭಾಗವಹಿಸಿದ ಕಾರ್ಯವಿಧಾನಗಳು ಮತ್ತು ಜೆ.ಎಫ್.ಪಿ.ಎಂ.ಗೆ ಸಂಬಂಧಿಸಿದ ಕಾರ್ಯ ವಿಧಾನಗಳು - ಇವನ್ನು ಗುರುತಿಸುವುದು ಇಡೀ ಕಾರ್ಯಕ್ರಮದಲ್ಲಿ ಅವಲಂಬಿತ ಸಮುದಾಯಗಳ ಚುರುಕಾದ ಪಾಲ್ಗೊಳ್ಳುವಿಕೆಯ ಮೇಲೆ ಒತ್ತು ಕೊಡಲಾಯಿತು. ಇದು ಔಟ್ ರೀಚ್‌ನ ವಿಶೇಷತೆ.

ಈ ತಂಡವು ಕ್ಷೇತ್ರದಲ್ಲಿ ಕರ್ನಾಟಕ ಅರಣ್ಯ ಸಿಬ್ಬಂದಿಯಿಂದ ಹೆಚ್ಚು ಸಹಾಯ ಪಡೆಯಿತು ಮತ್ತು ಇದನ್ನು ಒಪ್ಪಿಕೊಳ್ಳಲು ಇಚ್ಛಿಸುತ್ತದೆ. ಶಿವಮೊಗ್ಗೆಯಲ್ಲಿ, ಎನ್.ಜಿ.ಒ. ಸಿಬ್ಬಂದಿಯು ಕ್ಷೇತ್ರ ಪ್ರಯೋಗಗಳಲ್ಲಿ ಭಾಗವಹಿಸಿದ್ದೇ ಅಲ್ಲದೆ ಕ್ಷೇತ್ರದಲ್ಲಿ ಕೆಲಮಟ್ಟಿಗೆ ಸಂಸ್ಥಾ ಸಹಾಯವನ್ನು ಕೂಡ ಒದಗಿಸಿದೆ. ಇದನ್ನು ಔಟ್ ರೀಚ್ ಅಧ್ಯಯನ ತಂಡವು ಒಪ್ಪುತ್ತದೆ.

ಪ್ರತಿಯೊಂದು ಕ್ಷೇತ್ರ ಪ್ರಯೋಗವೂ, ಔಟ್ ರೀಚ್ ತಂಡವು ಕ.ಅ.ಇ. ಸಿಬ್ಬಂದಿಯೊಡನೆ ಪ್ರಾರಂಭಿಕ ಭೇಟಿಗಳಿಂದ, ಮೊದಲಿಟ್ಟಿತು. ಅಧ್ಯಯನಕ್ಕೆ ದಿನಾಂಕ ಮತ್ತು ಕಾಲವನ್ನೂ ಸಮುದಾಯದ ಇಷ್ಟದಂತೆ ನಿಗದಿ ಮಾಡಲಾಯಿತು. ಪ್ರಯೋಗದ ಉದ್ದೇಶಗಳನ್ನು ಕ.ಅ.ಇ.ಯ ಸಿಬ್ಬಂದಿಯ ಹಾಜರಿಯಲ್ಲಿ ಸಮುದಾಯಕ್ಕೆ ಅರ್ಥಮಾಡಿ ತಿಳಿಸಲಾಯಿತು.

ಪ್ರಯೋಗ ಕಾಲದಲ್ಲಿ ಭಾಗವಹಿಸುವವರನ್ನು, ಸಣ್ಣ ಗುಂಪುಗಳಾಗಿ ವಿಂಗಡಿಸಲಾಯಿತು. ಔಟ್ ರೀಚ್ ತಂಡದ ಸದಸ್ಯರು ಈ ಸಣ್ಣಗುಂಪುಗಳೊಡನೆ ಚರ್ಚೆಗಳನ್ನು ಏರ್ಪಡಿಸಿದರು. ದಿನದ ಕೊನೆಯಲ್ಲಿ, ತೀರ್ಮಾನಿಸಿದ ವಿಷಯಗಳನ್ನು ಸಮುದಾಯದ ಅವಗಾಹನೆಗಾಗಿ ಮತ್ತು ಸ್ವೀಕಾರಕ್ಕಾಗಿ ಕೊಡಲಾಯಿತು. ಈ ಕಾಲದಲ್ಲಿ ಸಾಕಷ್ಟು ಚರ್ಚೆ ಮತ್ತು ಶೋಧನೆ ನಡೆದು, ನಂತರ ಕಂಡ ವಿಚಾರಗಳು ನಿರ್ಧಾಯಿಸಲ್ಪಟ್ಟವು.

ಈ ಸಣ್ಣ ಗುಂಪುಗಳ ರಚನೆಯನ್ನು ಅವಶ್ಯಕತೆಗೆ ತಕ್ಕಂತೆ ಮಾಡಲಾಯಿತು. ಉದಾಹರಣೆಗೆ, ಕೆಲವು ಸಲ ಮಹಿಳೆಯರ ಸಜಾತೀಯ ಗುಂಪುಗಳನ್ನು, ಜಮೀನುರಹಿತ ಅಥವಾ ವಿಶೇಷ ಬಳಕೆದಾರರ ಗುಂಪುಗಳನ್ನು ರಚಿಸಲಾಯಿತು. ಕೆಲವು ಸಲ ಗುಂಪುಗಳು ಬೆರೆಸಲ್ಪಟ್ಟವು ಮತ್ತು ವಿವಿಧ ವೃತ್ತಿ ಗುಂಪುಗಳ ಮತ್ತು ಸಾಮಾಜಿಕ ಆರ್ಥಿಕ ವರ್ಗಗಳ ಪ್ರತಿನಿಧಿಗಳೂ ಇದ್ದರು. ಅಧ್ಯಯನ ಕಾಲದಲ್ಲಿ ಕರ್ನಾಟಕ ಇಲಾಖೆಯೊಡನೆಯೂ (ಶ್ರೀ ದಿಲೀಪ್ ಕುಮಾರ್ ಸಿ.ಸಿ.ಎಫ್), ಶಿವಮೊಗ್ಗ ಸಿ.ಎಫ್, ಕೆನರಾ ವೃತ್ತ, ಮತ್ತು ಗಂಗರಹಟ್ಟಿ ತರಬೇತಿ ಸಿ.ಎಫ್, ಡಿ.ಎಫ್.ಐ.ಡಿ(ಡಾ || ಜಾನೆಟ್‌ಸೀಲೆ), ಯವರೊಡನೆಯೂ ಕಾಲಕಾಲಕ್ಕೆ ಸಲಹೆಗಳನ್ನು ಮಾಡಲಾಗಿತ್ತು.

ಗ್ರಾಮವಾರು ರೀತ್ಯಾ ಒಟ್ಟು ತಿಳಿದ ನಿರ್ಧಾರಗಳು ಈ ಕೆಳಗೆ ಕಂಡಂತಿವೆ

## ಎ. ಕೆನರಾ ವೃತ್ತ

### 1. ಕಾಂಗೋಡು

ಕಾಂಗೋಡು ಗ್ರಾಮವು ಕೆನರಾ ವೃತ್ತ ಸಿರಸಿ ವಿಭಾಗದಲ್ಲಿ ಇರುತ್ತದೆ. ಇದು ಸಿದ್ದಾಪುರದಿಂದ 9 ಕಿ.ಮೀ ಮತ್ತು, ಸಿರಸಿಯಿಂದ 40 ಕಿ.ಮೀ. ದೂರದಲ್ಲಿ ಇದೆ. ಈ ಗ್ರಾಮದಲ್ಲಿ ಒಟ್ಟು 340 ಕುಟುಂಬಗಳು ಇವೆ. ಜೆ.ಎಫ್.ಪಿ.ಎಂ. ಚಟುವಟಿಕೆಗಳು ಇಲ್ಲಿ 1993ರಲ್ಲಿ ಆರಂಭಿಸಲ್ಪಟ್ಟಿದೆ.

ಕಾಂಗೋಡು ವೈವಿಧ್ಯ ನಾಗರೀಕತೆಯುಳ್ಳ ಒಂದು ದೊಡ್ಡ ಗ್ರಾಮ ಮತ್ತು ಚಟುವಟಿಕೆಗಳು ಪ್ರಾರಂಭವಾದ ಮೊದಲ ಗ್ರಾಮಗಳಲ್ಲಿ ಒಂದು. ಇದೂ ಈ ಗ್ರಾಮದಲ್ಲಿ ಹಲವಾರು ಅಭಿಪ್ರಾಯ ಪಕ್ಷಗಳು ಮತ್ತು ಬಳಕೆದಾರರ ಗುಂಪುಗಳೂ ಇವೆ. ತತ್ಪರಿಣಾಮವಾಗಿ ಹಲವಾರು ಅಂಶಗಳು ಗೋಚರಿಸುತ್ತವೆ.

### ಅಂಶಗಳು

. ಕಾಂಗೋಡು ಸಮುದಾಯ ಸದಸ್ಯರು, ಜೆ.ಎಫ್.ಪಿ.ಎಂ. ಚಟುವಟಿಕೆಗಳು ಪ್ರಾರಂಭವಾದಾಗಿನಿಂದ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಉತ್ತಮ ಸಂಬಂಧಗಳನ್ನು ಹೊಂದಿದ್ದಾರೆಂದು ಸರ್ವಾನುಮತದಿಂದ ಹೇಳುತ್ತಾರೆ. ಮೊದಲಿಗಿಂತಲೂ ಈಗ ಇಲಾಖಾ ಅಧಿಕಾರಿಗಳೊಡನೆ ಹೆಚ್ಚು ಸಂಪರ್ಕವಿದೆ. ಜಿಲ್ಲೆಯಲ್ಲಿರುವ ಇತರ ಸಮುದಾಯಗಳಂತೆ ಇಲ್ಲಿಯೂ ತಮ್ಮ ಜೀವೋತ್ಪನ್ನ ವಸ್ತುಗಳ ಅವಶ್ಯಕತೆಗಳಿಗೆ ಸಂಬಂಧಪಟ್ಟಂತೆ, ಅರಣ್ಯದೊಡನೆ ಬಲವಾದ ಸಂಬಂಧವನ್ನು ಹೊಂದಿದ್ದಾರೆ.

. ಸಮಾಜದಲ್ಲಿ ಹಲವಾರು ಪಕ್ಷಗಳ ಇರುವಿಕೆಯು ಕಾಂಗೋಡಿನ ಭಾಗವಹಿಸುವಿಕೆಯಲ್ಲಿ ಮುಖ್ಯ ಅಂಶವಾಗಿದೆ. ಇವು ಅರಣ್ಯ / ಅರಣ್ಯ ಚಟುವಟಿಕೆಗಳಲ್ಲಿ ಮುಖ್ಯ ಆಸಕ್ತಿಯನ್ನು ಹೊಂದಿದ್ದಾಗ್ಯೂ ಸಹ ವಿ.ಎಫ್.ಸಿ.ಗಳ ರಚನೆಯಲ್ಲಿ, ಇವುಗಳ ಅಭಿಪ್ರಾಯವನ್ನು ಗಣನೆಗೆ ತಂದುಕೊಳ್ಳಲಿಲ್ಲ. ಹಾಗಾಗಿ ಅವರು ಹೊರತುಪಡಿಸಲ್ಪಟ್ಟಂತೆ ಭಾವಿಸುತ್ತಾರೆ.

. ಒಂದು ಮುಖ್ಯ ವಿವಾದ ಏನೆಂದರೆ ದೊಡ್ಡ ವೃಕ್ಷಗಳು ಇದ್ದ ಪ್ರಾಕೃತಿಕ ಅರಣ್ಯವನ್ನು ತೆಗೆದಿರುವುದು ಮತ್ತು ಸಣ್ಣ ಕ್ಷೇತ್ರಗಳಲ್ಲಿ ಬಿದಿರು, ಸರ್ವೆ ಮತ್ತು ಇತರೆ ಸ್ಥಳೀಯ ಜಾತಿಗಳನ್ನು ನೆಟ್ಟಿರುವುದು. ಜನ ಅವರ ಸಲಹೆ ಪಡೆಯಲಿಲ್ಲವೆಂದು ನೊಂದಿರುತ್ತಾರೆ ಮತ್ತು ಹಲಸು, ಮಾವು, ಸೀಬೆ ಮುಂತಾದ ಹಲವಾರು ಎನ್.ಟಿ.ಎಫ್.ಪಿ. ವರ್ಗಗಳ ವೃಕ್ಷಗಳನ್ನು ಕಡಿದಿರುವುದರಿಂದ ಕೋಪಗೊಂಡಿದ್ದಾರೆ. ಇಲ್ಲಿಯವರೆಗೆ ಯಾವ ಸುಗ್ಗಿಯ ಲಾಭಗಳನ್ನು ಅವರು ಹಂಚಿಕೊಂಡಿಲ್ಲ.

. ವಿ.ಎಫ್.ಸಿ ಸದಸ್ಯರು, ಇತರೆ ಯೋಜನೆಗಳಿಗೂ ಹಾಗೂ ಎಸ್.ಹೆಚ್.ಜಿಗಳೂ ಸೇರಿದಂತೆ ಜೆ.ಎಫ್.ಪಿನಲ್ ಯೋಜನೆಗಳಿಗೆ ಸಂಬಂಧಿಸಿದಂತೆ ಹಲವಾರು ಆಡಳಿತ ವಿಚಾರಗಳಿಗೂ ಹೆಚ್ಚು ಪ್ರದರ್ಶಿಸಲ್ಪಟ್ಟಿರುವುದಾಗಿ ಅಭಿಪ್ರಾಯಪಡುತ್ತಾರೆ. ಇದು ಅವರಿಗೆ ಉಪಯುಕ್ತವಾದ್ದೆಂದೂ ಮತ್ತು ಇದು ಅವರ ಜ್ಞಾನವನ್ನು ಪ್ರೇರಣೆಯನ್ನು ಹೆಚ್ಚಿಸಿತೆಂದೂ ಹೇಳುತ್ತಾರೆ. ಆದರೆ ಇದನ್ನು ಮುಂದುವರಿಸಲು ಯಾರೂ ಇಲ್ಲ.

. ಗ್ರಾಮದಲ್ಲಿ ಎನ್.ಜಿ.ಒ. ಚಟುವಟಿಕಿಗಳು ಇಲ್ಲ. ಹಲವಾರು ವರ್ಗಗಳ ಸದಸ್ಯರು, ವಿಶೇಷವಾಗಿ ಮಹಿಳೆಯರು, ಎಸ್.ಹೆಚ್.ಜಿ ಸಂಸ್ಥೆಗಳೊಡನೆ ಬೆರೆಯಲು ನೆರವಾಗಬೇಕೆಂದು ಇಚ್ಛಿಸುತ್ತಾರೆ.

. ಕಾರ್ಯಕ್ರಮದಲ್ಲಿ ಸ್ತ್ರೀಯರು ಮತ್ತು ಇತರೆ ಬಲಹೀನ ವರ್ಗಗಳು ಭಾಗವಹಿಸಿಲ್ಲ. ಅವರನ್ನು ಸೂಕ್ತ ಯೋಜನೆಗಳ ತಯಾರಿಯಲ್ಲಿ ಸೇರಿಸಿಲ್ಲ ಮತ್ತು ಹಾಗೆಯೇ ಕಾರ್ಯಕ್ರಮದಲ್ಲಿ ಅವರ ಹೆಚ್ಚಿನ ಹೇಳಿಕೆ ಇಲ್ಲ.

ಮುಖ್ಯವಾಗಿ ಅಡಿಕೆ ಬೆಳೆಗಾರರ ಎಲೆಗೊಬ್ಬರದ ಅವಶ್ಯಕತೆಗೆ ತೊಂದರೆಯಾಗದಿದ್ದರೂ, ಜನ ಈಗ ಉರುವಲು ಮತ್ತು ದನಗಳ ಮೇವಿನ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಇದಕ್ಕೆ ಕಾರಣ, ಎಲೆ ಉದುರುವುದರಿಂದ ಇರತಕ್ಕ ಜೆ.ಎಫ್.ಪಿ. ಎಂ. ಕ್ಷೇತ್ರಗಳಲ್ಲಿ ಹುಲ್ಲು ಬೆಳೆಯದೆ ಇರುವುದು ಮತ್ತು ಒತ್ತಾಗಿ ಬೆಳೆದಿರುವ ಬಿದಿರು ಮತ್ತು ಸರ್ವೆ ಮರಗಳು ಉರುವಲು ಶೇಖರಣೆಗಾಗಿ ಮತ್ತು ದನ ಮೇಯಿಸುವುದಕ್ಕಾಗಿ 7-8 ಕಿ.ಮೀ. ದೂರದ ಸೊರಬ ತಾಲ್ಲೂಕಿಗೆ ಹೋಗಬೇಕಾಗಿದೆ. ಸೊರಬ ಕ್ಷೇತ್ರವೂ ಸಹ ಜೆ.ಎಫ್.ಪಿ.ಎಂ.ಗೆ ಒಂದು ಸಾರಿ ಒಳಪಟ್ಟಿಗೆ ಉರುವಲು ತರಲು ಮತ್ತು ದನಗಳನ್ನು ಮೇಯಿಸಲು ಹೋಗಲು ಅವರಿಗೆ ಬೇರೆ ಸ್ಥಳವಿಲ್ಲವೆಂಬುದೇ ಅವರ ಹೆದರಿಕೆ. ಈ ಕಾರಣದಿಂದ ಅವರು ತಮ್ಮ ದನಗಳನ್ನೂ ಮಾರಬೇಕಾಯಿತು (ಈಗ ದನಗಳ ಸಂಖ್ಯೆ 2000 ದಿಂದ 600ಕ್ಕೆ ಇಳಿದಿದೆ. ಒಬ್ಬ ವ್ಯಕ್ತಿಯನ್ನು ನೇಮಿಸಿಕೊಳ್ಳಬೇಕಾದ ಪ್ರಯುಕ್ತ ದನ ಮೇಯಿಸುವುದಕ್ಕೂ ಹೆಚ್ಚು ಬೆಲೆ ಕೊಡಬೇಕಾಗಿದೆ.

. ಎನ್.ಟಿ.ಎಫ್.ಪಿಗಳ ನಷ್ಟವು ಒಂದು ಮುಖ್ಯ ಋಣಾತ್ಮಕ ಪರಿಣಾಮವಾಗಿದೆ. ಸಂದರ್ಶಿಸುತ್ತಿರುವ ಅನೇಕ ಬಡ ಕುಟುಂಬಗಳು, ಈ ಚಟುವಟಿಕೆಯಿಂದಾಗಿ ಅವರ ವಾರ್ಷಿಕ ಸಂಪಾದನೆ ರೂ 3000 - 4000 ಕ್ಕೆ ನಷ್ಟವಾಯಿತೆಂದು ಹೇಳುತ್ತಾರೆ. ಇದಕ್ಕೆ ಮುಖ್ಯ ಕಾರಣ - ಜೆ.ಎಫ್.ಪಿ.ಎಂ ನ ಅಧೀನಕ ತೋಟಗಳು, ಒಣ ಎಲೆ ಮತ್ತು ರೆಂಭೆಗಳನ್ನು ಹೊರತು ಯಾವ ಉತ್ಪನ್ನವನ್ನು (ವಿಶೇಷವಾಗಿ ಜೇನು) ಕೊಡದಿರುವುದು. ವರ್ಗಗಳ ಆಯ್ಕೆಯಲ್ಲಿಯೂ ಜನಗಳ ಸಲಹೆ ಪಡೆಯಲಿಲ್ಲ.

. ಮೂಲ (ಕ.ಅ.ಇ ಮತ್ತು ವಿ.ಎಫ್.ಪಿ) ದಿಂದ ಪರಿಧಿಯವರೆಗೂ (ಸಾಮಾನ್ಯ ಸದಸ್ಯರು ಮತ್ತು ಆಸಕ್ತ ಗುಂಪುಗಳು), ಮಹಿಳೆಯರು, ಜಮೀನು ರಹಿತರು ಮತ್ತು ಹರಿಜನರು) ವಿ.ಎಫ್.ಸಿಯ ಕಾರ್ಯವಿಧಾನದ ಬಗ್ಗೆ, ನಿರ್ಧಾರಗಳ ಬಗ್ಗೆ ಮತ್ತು ಹೇಳಿಕೆಯ ಬಗ್ಗೆ ಸ್ಪಷ್ಟತೆಯಿಲ್ಲದಿರುವುದು - ಅನಾವಶ್ಯಕ ಉದ್ವೇಗಗಳು, ಘರ್ಷಣೆಗಳು ಮತ್ತು ಗಾಬರಿಯನ್ನು ಉಂಟುಮಾಡುತ್ತದೆ.

. ಮೊದಲಲ್ಲಿ ಕ.ಅ.ಇ.ಯು ಎಲ್ಲಾ ಕುಟುಂಬವಂತರಿಗೂ ಬೊಂಬು ಮತ್ತು ಸರ್ವೆ ಕಂಬಗಳನ್ನು ನಾಮ ಮಾತ್ರದ ಬೆಲೆಗೆ ಕೊಟ್ಟಿತ್ತು. ಬೊಂಬಿನ ತೋಟವು ಮೊದಲ ಸುಗ್ಗಿಗೆ ಗುರುತಿಸಲ್ಪಟ್ಟಿದ್ದಾಗ್ಯೂ ಜನ ಅದನ್ನು ಗುರುತಿಸಿಲ್ಲ. ಅವರು ವಿಕ್ರಯ ಕಾರ್ಯದಲ್ಲಿ ಪಾಲ್ಗೊಳ್ಳಲಿಲ್ಲ. ಈ ವಿಷಯಗಳು ಜನರಿಗೆ ಅನುಮಾನಗಳನ್ನೂ ಉದ್ವೇಗಗಳನ್ನೂ ಉಂಟು ಮಾಡುತ್ತವೆ.

- ಈ ಕಾರ್ಯಕ್ರಮದಿಂದ ಬಿದಿರು ತೋಟಗಳ ಲಾಭಗಳಿಂದ ಮೇದಾರರು (ಬಿದಿರು ನೇಯುವವರು) ಮಾತ್ರ ಲಾಭ ಪಡೆಯಬಹುದೆಂಬ ಹೆದರಿಕೆ ಇದೆ (50 ಹೆಕ್ಟೇರ್)
- ಜನರು ನೋಡದೆ ಇರುವ ಮೇವಿನ ಜಾಗ 15 ಕಿ.ಮೀ ದೂರದಲ್ಲಿದೆ. ಅದರಲ್ಲಿ ಎರಡು ಬಾರಿ ಸುಗ್ಗಿ ಆದಾಗ್ಯೂ, ಮತ್ತು ವಿ.ಡಿ.ಎಫ್ ಲೆಕ್ಕಕ್ಕೆ 12,000/- ರೂಪಾಯಿಗಳು ಸೇರಿದ್ದರೂ, ಜನಗಳಿಗೆ ಅದು ತಿಳಿದಿಲ್ಲ. ಹಣವು ಹೆಚ್ಚು ಕಾಲದಿಂದ ಯಾವ ವ್ಯಾಪಾರವೂ ಇಲ್ಲದೆ ಲೆಕ್ಕದಲ್ಲಿ ಗುಪ್ತವಾಗಿ ಉಳಿದಿದೆ.

. ಜೀವೋತ್ಪನ್ನ ವಸ್ತುಗಳನ್ನು ಸಮುದಾಯಕ್ಕೆ ಹಂಚುವುದರ ಮೂಲಕ ಸ್ವಲ್ಪ ಮಟ್ಟಿಗೆ ಉದ್ವೇಗಗಳನ್ನು ಶಾಂತಗೊಳಿಸಬಹುದು ಮತ್ತು ಕಾರ್ಯಕ್ರಮದ ವಿಶ್ವಾಸಾರ್ಹತೆಯನ್ನು ಹೆಚ್ಚಿಸಬಹುದು. ಉದಾ : ಕಂಬಗಳು ಮತ್ತು ಅಕೇಸಿಯಾ ಮ್ಯಾಂಗಿಯಮ್ ಮತ್ತು ಸರ್ವೇ ತೋಪುಗಳ ರೆಂಬೆಗಳು. ಇದು ಉತ್ತಮ ಕಂಬಗಳನ್ನು ಪಡೆಯುವ ಉದ್ದೇಶಕ್ಕೆ ಪೂರಕವಾಗಿರುತ್ತದೆ). ಇದು, ಉರುವಲು ಪಡೆಯಲು ತುಂಬಾ ದೂರ ಹೋಗಬೇಕಾದ ಮಹಿಳೆಯರಿಗೆ ವಿಶೇಷವಾಗಿ ಸಹಾಯಕವಾಗಿರುತ್ತದೆ.

## 2. ಕನ್ನಿಗೇರಿ

ಕನ್ನಿಗೇರಿ ಗ್ರಾಮವು ಕೆನರಾ ವೃತ್ತದ ಯೆಲ್ಲಾಪುರ ವಿಭಾಗದಲ್ಲಿದೆ. ಇದು ಯೆಲ್ಲಾಪುರದಿಂದ 8 ಕಿ.ಮೀ. ದೂರದಲ್ಲಿದೆ ಮತ್ತು ಮಂಗಳೂರು - ಮುಂಬೈ ಹೆದ್ದಾರಿಯಲ್ಲಿದೆ. ಈ ಗ್ರಾಮದಲ್ಲಿ ಒಟ್ಟು 17 ಕುಟುಂಬಗಳಿವೆ ಮತ್ತು ಎಲ್ಲರೂ ವಿ.ಎಫ್.ಸಿ ಸದಸ್ಯರಾಗಿರುತ್ತಾರೆ. ಜೆ.ಎಫ್.ಪಿ.ಎಂ. ಚಟುವಟಿಕೆಯು 1996 ರಲ್ಲಿ ಪ್ರಾರಂಭವಾಯಿತು.

## ಅಂಶಗಳು

. ಇದು ಒಂದು ಪೂರ್ಣ ಮಹಿಳಾ ವಿ.ಎಫ್.ಸಿ ಮತ್ತು ಮಹಿಳೆಯರು ಮೊದಲು ಸ್ಥಳೀಯ ಎನ್.ಜಿ.ಒ ಗಳಿಂದ (ಎಸ್.ಡಿ.ಎಸ್) ಎಸ್.ಹೆಚ್.ಜಿ.ಗೆ ಸಂಘಟಿಸಿದ್ದರು. ಇದು ಪ್ರಥಮವಾಗಿ ಸಮುದಾಯದ, ವಿಶೇಷವಾಗಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿತು. ಮಹಿಳೆಯರು ಹೇಳುವಂತೆ ಈಗ ಗ್ರಾಮದಲ್ಲಿ ಎಲ್ಲರೂ ನಮಗೆ ಕಿವಿಗೊಡುತ್ತಾರೆ.

. ಕಾರ್ಯಕ್ರಮ ಪಾರಂಭವಾದಾಗಿನಿಂದ ಸಮುದಾಯದ ಅರಣ್ಯ ಇಲಾಖೆಯ ನಡುವೆ ಸಂಬಂಧಗಳಲ್ಲಿ ನಿರ್ದಿಷ್ಟವಾದ ಸುಧಾರಣೆ ಇದೆ.

. 20 ಮಹಿಳೆಯರಿಗೆ ಬಿದಿರು ಕೆಲಸದಲ್ಲಿ ತರಬೇತಿ ಕೊಡಲಾಯಿತು. ತರಬೇತಿ ಸಫಲವಾಗಿತ್ತು ಮತ್ತು ತಮ್ಮ ಕುಶಲತೆಯನ್ನು ಹೆಚ್ಚಿಸಿಕೊಳ್ಳಲು ತುಂಬಾ ನೆರವಾಗಿದ್ದಾರೆ. ಇರತಕ್ಕ ಚಟುವಟಿಕೆಗಳನ್ನು ವೃತ್ತಿ ಮತ್ತು ವಾಣಿಜ್ಯ ತಳಹದಿಯ ಮೇಲೆ ಹೆಚ್ಚಿಸಲು ಉದ್ದೇಶಿಸಿದ್ದಾರೆ. ಜೆ.ಎಫ್.ಪಿ.ಎಂ. ಕ್ಷೇತ್ರದ ಒಂದು ಭಾಗವನ್ನು ಉತ್ತಮ ಗುಣಮಟ್ಟದ ಬಿದಿರು ತೋಪಿಗಾಗಿ ಕಾದಿರಿಸಲು ಬಳಸುತ್ತಾರೆ. ಗಣನಾ ಕೌಶಲ್ಯದ ಅಭಿವೃದ್ಧಿ, ವಾಣಿಜ್ಯ ಮತ್ತು ವಿನ್ಯಾಸಕ್ಕೆ ಉತ್ತೇಜನ ಇವುಗಳ ಮೂಲಕ ಇನ್ನೂ ಹೆಚ್ಚು ಕ್ರೋಢೀಕರಿಸಲು ಮತ್ತು ಬಿದಿರು ವ್ಯಾಪಾರ ಕಾರ್ಯಕ್ರಮವನ್ನು ಬಲಪಡಿಸಲು ಅವಕಾಶಗಳೂ ಸಹ ಇವೆ.

. ಲೆಕ್ಕಪತ್ರಗಳನ್ನು ಇನ್ನು ಕ.ಅ.ಇ.ಯ ಫಾರೆಸ್ಟರ್ ನಡೆಸಿಕೊಂಡು ಬರುತ್ತಿದ್ದಾರೆ. ಸಾಮಾಜಿಕರು ಈ ಕಾರ್ಯವನ್ನು ~~ಕ್ರಮೇಣ ತಮಗೆ~~ ಕ್ರಮೇಣ ತಮಗೆ ವಹಿಸಿಕೊಡಬೇಕೆಂದು ಭಾವಿಸುತ್ತಾರೆ. ಮಹಿಳೆಯರು ಇತರ ಸಫಲ ಸಾಲ ನಿರ್ವಹಣೆ ಕಾರ್ಯಕ್ರಮವನ್ನು ಬಹಿರಂಗವಾಗಿ ನಡೆಸಬೇಕೆಂದೂ ಮತ್ತು ಲೆಕ್ಕಪತ್ರಲ್ಲಿ ತರಬೇತಿ ಹೊಂದಬೇಕೆಂದೂ ಆಶಿಸುತ್ತಾರೆ. ವಯಸ್ಕರ ಶಿಕ್ಷಣದ ತರಗತಿಗಳು ಸದಸ್ಯರಿಗೆ ಉಪಯೋಗವಾಗಿದೆ ಎಂದು ಕಂಡು ಬರುತ್ತದೆ.

. ಸ್ಥಾಪಿಸಿದ 10 ಅಸ್ತ್ರಾ ಓಲೆಗಳಲ್ಲಿ 7, ಗ್ರಾಮದಲ್ಲಿ ವಿಫಲವಾಗಿವೆ.

## 3. ಬಾಲಶೆಟ್ಟಿ ಕೊಪ್ಪ

ಬಾಲಶೆಟ್ಟಿ ಕೊಪ್ಪ ಗ್ರಾಮವು ಕೆನರಾ ವೃತ್ತದ ಹಳ್ಳಿಯಾಲ್ ವಿಭಾಗದಲ್ಲಿದೆ. ಇದು ಹಳ್ಳಿಯಾಲ್‌ನಿಂದ 30 ಕಿ.ಮೀ. ದೂರದಲ್ಲಿದೆ ಮತ್ತು ಅತ್ಯಂತ ಒಳಭಾಗದ ಅಗಮ್ಯವಾದ ಗ್ರಾಮ. ಒಟ್ಟು 39 ಕುಟುಂಬಗಳಿದ್ದು, ಎಲ್ಲರೂ ಎ.ಎಫ್.ಸಿ ಸದಸ್ಯರಾಗಿದ್ದಾರೆ. ಇಲ್ಲಿ ಜೆ.ಎಫ್.ಪಿ.ಎಂ. ಚಟುವಟಿಕೆ 1995ರಲ್ಲಿ ಪ್ರಾರಂಭವಾಯಿತು.

ಬಾಲಶೆಟ್ಟಿಗ್ರಾಮ 3 ವಿಭಿನ್ನ ಸಮಾಜಗಳನ್ನೊಳಗೊಂಡ, ವಿಜಾತೀಯ ಗ್ರಾಮ. ಅವು ಸಿದ್ದಿಗರು, ಗೌಳಿಗರು ಮತ್ತು ಮರಾಟಿಗರು, ಗ್ರಾಮದಲ್ಲಿ ಒಂದು ಎನ್.ಜಿ.ಒ (ಐ.ಡಿ.ಎಸ್) ಕೆಲಸ ಮಾಡುತ್ತಿದೆ. ಸಿದ್ದಿಗರು ಪ್ರಭಾವಶಾಲಿ ಸಮುದಾಯ ವಿ.ಎಫ್.ಸಿ. ಎರಡು ವರ್ಷದ ಹಿಂದೆಯೇ ನೊಂದಾಯಿಸಲ್ಪಟ್ಟಿದ್ದಾಗ್ಯೂ ಕಾರ್ಯಕ್ರಮ ಇನ್ನೂ ಪ್ರಾರಂಭವಾಗಿಲ್ಲ.

## ಅಂಶಗಳು

. ಜನ, ಮುಖ್ಯವಾಗಿ ಸಿದ್ದಿಗರು, ಕಾರ್ಯಕ್ರಮದ ಬಗ್ಗೆ ಉತ್ಸುಕರಾಗಿದ್ದಾರೆ. ಹಾಗಾದರೂ ಕಾರ್ಯಕ್ರಮ ಜಾರಿಗೊಳಿಸುವುದು ನಿಧಾನವಾಗಿದೆ ಮತ್ತು ಇದು ಸಮುದಾಯದಲ್ಲಿ ಆಶಾಭಂಗ ಉಂಟುಮಾಡಿದೆ. ವೃಕ್ಷ ನಾಟಿಗಳು ಇನ್ನೂ ಪ್ರಾರಂಭವಾಗಬೇಕಾಗಿದೆ.

. ಕಾರ್ಯಕ್ರಮದ ಬಗ್ಗೆ ತಿಳುವಳಿಕೆ ಸಾಧಾರಣ. ಐ.ಡಿ.ಎಸ್, ಎನ್.ಜಿ.ಒ. ಗ್ರಾಮದಲ್ಲಿ ಬಲವಾಗಿ ಕಂಡಿಲ್ಲ. ಹಾಗಾದರೂ ಅದು ಸಾಮಾಜಿಕ ತಿಳುವಳಿಕೆಯನ್ನು ಹೆಚ್ಚಿಸಿದೆ ಮತ್ತು ಸಮುದಾಯವನ್ನೂ ವಿವಿಧ ಸರ್ಕಾರೀ ಕಾರ್ಯಕ್ರಮಗಳಿಗೆ ಸೇರಿಸಿದೆ. ಇದು ಒಂದು ಅತ್ಯಂತ ಬೆಲೆಯುಳ್ಳ ಪಾತ್ರ ಮತ್ತು ಇದನ್ನು ಗ್ರಾಮಸ್ಥರು ಗೌರವಿಸುತ್ತಾರೆ. ಕಾರ್ಯಕ್ರಮದಲ್ಲಿ ಮಹಿಳೆಯರ ಭಾಗ ಸಾಧಾರಣವಾಗಿ ಕಡಿಮೆ.

. ಮರಾಠಿ ಸಮುದಾಯದವರ, ಕನ್ನಡಿಗರ, ಮತ್ತು ವಿವಿಧ ಸಂಸ್ಥೆಗಳ ಸದಸ್ಯರ ನಡುವೆ ಭಾಷಾ ಸಂಪರ್ಕ ಒಂದು ಸಮಸ್ಯೆಯಾಗಿದೆ. ನಾಡ ಭಾಷೆಗಳ ವೈವಿಧ್ಯತೆಯಿಂದಾಗಿ ಕರ್ನಾಟಕದ ಕೆಲವು ಭಾಗಗಳು ಕ.ಅ.ಇ.ಯ ಸಿಬ್ಬಂದಿಗೂ ಸಮಸ್ಯೆಗಳಾಗಿವೆ.

. 20 ಸಾಮಾಜಿಕ ಸದಸ್ಯರಿಗೆ ಬುಟ್ಟಿ ಹೆಣೆಯುವುದರಲ್ಲಿ ತರಬೇತಿ ಕೊಡಲಾಗಿತ್ತು. ಆದರೆ ಉತ್ಪನ್ನ ಇನ್ನೂ ಆರಂಭವಾಗಬೇಕಾಗಿದೆ. ಅವರು ಸಾಂಪ್ರದಾಯಿಕ ಬುಟ್ಟಿ ಮಾಡುವವರಲ್ಲ ಮತ್ತು ಸ್ಥಳೀಯವಾಗಿ ಕಚ್ಚಾ ವಸ್ತು ಲಭ್ಯವಿಲ್ಲ.

. ಕ.ಅ.ಇ.ಯು ಅರಣ್ಯಗಾರಿಕೆಗಾಗಿ 100 ಎಕರೆ ಜಮೀನನ್ನು, ಕಾರ್ಯ ನಿರ್ವಾಹಕ ಸಮಿತಿಯ ಸಮಾವೇಶದೊಂದಿಗೆ ನಿಗದಿಪಡಿಸಲಾಗಿತ್ತು, ಆದರೆ ''ಸಾಮಾನ್ಯ ಜನರಿಗೆ'' ಈ ವಿಷಯ ತಿಳಿದಿರಲಿಲ್ಲ. ವಿ.ಎಫ್.ಸಿ ಮತ್ತು ಜೆ.ಎಫ್.ಪಿ.ಎಂ. ಬಗ್ಗೆ ಸಮಾನ ಜ್ಞಾನ ಮಟ್ಟ ಮತ್ತು ಸಮಾಚಾರಗಳಿಗೆ ಮಾರ್ಗ ಕಡಿಮೆ. ಇದು ವಿಶೇಷವಾಗಿ ಮಹಿಳೆಯರ ಸಂಬಂಧವಾಗಿದೆ.

. ಸಮುದಾಯ ವ್ಯಕ್ತಪಡಿಸಿದ ಹಲವು ಅವಶ್ಯಕತೆಗಳು ಈ ಕೆಳಗಿನಂತಿವೆ.

- ಆನೆಗಳು ದೊಡ್ಡ ಸಮಸ್ಯೆಯಾಗಿವೆ ಮತ್ತು ಪೈರು ನಷ್ಟಕ್ಕೆ ಹಾನಿ ತುಂಬುವುದು ಮುಖ್ಯ ವಿವಾದ

- ವಿ.ಎಫ್.ಸಿ.ಗಳ ಮೂಲಕ ಅಸ್ಟ್ರ ಒಲ್ಲೆ ಬಯೊಗ್ಯಾಸ್ ಮತ್ತು ಕಬ್ಬಿಣದ ನೇಗಿಲುಗಳಿಗಾಗಿ ಮಾಡಿದ ಬೇಡಿಕೆ ಇನ್ನೂ ಮಂಜೂರಾಗಬೇಕಾಗಿದೆ.

-ಮಹಿಳೆಯರು, ಕೋಳಿ ಸಾಕಣೆ ಮತ್ತು ಸಸಿ ನೆಡುವುದರಲ್ಲಿ ತರಬೇತಿಗಾಗಿ, ವಿಶೇಷವಾಗಿ ಬೇಸಿಗೆಯಲ್ಲಿ ಅವರು ಬಿಡುವಾಗಿರುವಾಗ, ಅಪೇಕ್ಷಿಸುತ್ತಾರೆ.

### 4. ಸತಗೇರಿ

ಸತಗೇರಿ ಗ್ರಾಮವು ಕೆನರಾ ವೃತ್ತದ ಕಾರವಾರ ವಿಭಾಗದಲ್ಲಿದೆ. ಇದು ಕಾರವಾದಿಂದ 25 ಕಿ.ಮೀ. ದೂರದಲ್ಲಿದೆ. ಜೆ.ಎಫ್.ಪಿ.ಎಂ. ಚಟುವಟಿಕೆ 1995 ರಲ್ಲಿ ಆರಂಭವಾಯಿತು. ಒಟ್ಟು ಈ ಗ್ರಾಮದಲ್ಲಿ 32 ಕುಟುಂಬಗಳು ವಾಸವಾಗಿವೆ ಮತ್ತು ಇದರಲ್ಲಿ 23 ವಿ.ಎಫ್.ಸಿ. ಸದಸ್ಯರು.

ಸ್ಥಳೀಯ ಎನ್.ಜಿ.ಒ (ಕೆ.ಆರ್.ಡಬ್ಲ್ಯು.ಸಿಡಿ.ಸ್) ಸಮುದಾಯವನ್ನು ಒಟ್ಟುಗೂಡಿಸುವ ಮತ್ತು ಕಾರ್ಯಕ್ರಮದಲ್ಲಿ ಅವರ ಭಾಗವನ್ನು ಪರಿಣಾಮಕಾರಿಯಾಗಿ ಮಾಡುವುದರಲ್ಲಿ ಮುಖ್ಯ ಪಾತ್ರವಹಿಸಿದೆ.

ವಿ.ಎಫ್.ಸಿ.ಯ ಒಂದು ಲಕ್ಷಣವೆಂದರೆ ಇದು ಪೂರ್ಣ ಮಹಿಳಾ ವಿ.ಎಫ್.ಸಿ.

### ಅಂಶಗಳು

. ಎನ್.ಜಿ.ಒ. (ಕೆ.ಆರ್.ಡಬ್ಲ್ಯು.ಸಿ.ಡಿ.ಎಸ್)ನ ಇರುವಿಕೆಯು ಸಮುದಾಯದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿದೆ.

ಅ. 32 ಕುಟುಂಬಗಳಲ್ಲಿ 26 ಎಸ್.ಹೆಚ್.ಜಿ. ಸದಸ್ಯರು, ಮತ್ತು ಅದರಲ್ಲಿ 23 ವಿ.ಎಫ್.ಸಿ. ಸದಸ್ಯರು

ಆ. ವಿ.ಎಫ್.ಸಿ.ಯ ಎಲ್ಲಾ ಸದಸ್ಯರೂ ಮಹಿಳೆಯರು, ಅವರು ಇತರ ಎಸ್.ಹೆಚ್.ಜಿ. ಸದಸ್ಯರೂ ಸೇರಿದಂತೆ ಒಂದು ಅಗ್ರ ಸಂಸ್ಥೆಯ ಸದಸ್ಯರು. ಅವರು 17000/- ರೂ.ಗಳನ್ನು ಉಳಿತಾಯ ಮಾಡಿದ್ದಾರೆ. ಮತ್ತು ಅವರಿಗೆ ಅನೇಕ ತರಬೇತಿಗಳಾಗಿವೆ.

ಇ. ಅನೇಕ ಸಂಪನ್ಮೂಲಗಳು ಮತ್ತು ಸಾಮರ್ಥ್ಯ ಗುಂಪು ಚಟುವಟಿಕೆ ಕಟ್ಟುವುದರಲ್ಲಿ ವ್ಯಯವಾಗಿವೆ. ಮತ್ತು ಇದು ಸದಸ್ಯರ ನಂಬಿಕೆ ಮತ್ತು ವೈಚಾರಿಕ ಮಟ್ಟವನ್ನು ಹೆಚ್ಚಿಸಿವೆ.

ಈ. ಎಸ್.ಹೆಚ್.ಜಿ.ಗಳು ಹಲವಾರು ಸಮುದಾಯ ಕಾರ್ಯಕ್ರಮಗಳನ್ನು ಪ್ರಾರಂಭಿಸಿವೆ- ಕೆರೆ ಹೂಳು ತೆಗೆಯುವುದು, ಶಾಲಾ ಕಟ್ಟಡಗಳು, ನಿರ್ಮಾಣಗಳು ಇತ್ಯಾದಿ.

. ಮಹಿಳೆಯರು ಸಾಕಷ್ಟು ತಯಾರಾಗದ್ದಲ್ಲಿ (ಸಾಮರ್ಥ್ಯವಿದ್ದಲ್ಲಿ) ಮತ್ತು ಅವಕಾಶ ಕೊಟ್ಟರೆ ಹೇಗೆ ಪರಿಣಾಮಕಾರಿಯಾಗಿ ಜೆ.ಎಫ್.ಪಿ.ಎಂ. ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂಬುದಕ್ಕೆ ಇದು ಒಂದು ಉತ್ತಮ ಉದಾಹರಣೆ. ಮಹಿಳೆಯರು ಕೊಟ್ಟ ಒಂದು ಉದಾಹರಣೆ ಎಂದರೆ ಜೆ.ಎಫ್.ಪಿ.ಎಂ. ರಕ್ಷಣೆಗೆ ಸಂಬಂಧಿಸಿದ್ದು. ಮೊದಲು ಪುರುಷರು ರಕ್ಷಣಾ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಇದು ಪಕ್ಕದ ಗ್ರಾಮಗಳೊಡನೆ ಘರ್ಷಣೆಗೆ ಅವಕಾಶವೀಯುತ್ತಿತ್ತು. ಈಗ ಮಹಿಳೆಯರು ಈ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುತ್ತಿದ್ದಾರೆ. ಅರಣ್ಯ ರಕ್ಷಣಾ ಚಟುವಟಿಕೆಗಳನ್ನು ತೆಗೆದುಕೊಳ್ಳಲು ಪಕ್ಕದ ಗ್ರಾಮಗಳ ಇತರೆ ಮಹಿಳೆಯರನ್ನು ಪ್ರೋತ್ಸಾಹಿಸುತ್ತಿದ್ದಾರೆ.

. ಕೆ. ಆರ್. ಡಬ್ಲ್ಯೂ.ಸಿ.ಡಿ.ಎಸ್. ಪ್ರೇರಿಸಿದ ಎಸ್.ಹೆಚ್.ಜಿ.ಗಳಿಗಾಗಲಿ ಅಥವಾ ವಿ.ಎಫ್.ಸಿ.ಗಳಿಗಾಗಲಿ ಸದಸ್ಯರಲ್ಲದ ಅರು ವ್ಯಕ್ತಿಗಳಿದ್ದಾರೆ. ಅವರು ಪ್ರತ್ಯೇಕಿಸಲ್ಪಟ್ಟಂತೆಯೂ, ಪಕ್ಕಕ್ಕೆ ಸರಿಸಲ್ಪಟ್ಟಂತೆಯೂ ಭಾವಿಸುತ್ತಾರೆ.

. ಸೂಕ್ಷ್ಮ ಯೋಜನೆಗಳ ತಯಾರಿಯ ಕಾಲದಲ್ಲಿ ಸಮುದಾಯಕ್ಕೆ ಕೊಟ್ಟಿದ್ದ ವಚನಗಳನ್ನು ಪಾಲಿಸಿಲ್ಲ. ಇದು ಸದಸ್ಯರಲ್ಲಿ ಅತೃಪ್ತಿಯನ್ನು ಬೆಳೆಸಿದೆ ಮತ್ತು ಜನರು ಕಾರ್ಯಕ್ರಮದಲ್ಲಿ ಹೆಚ್ಚಾಗಿ ಭಾಗವಹಿಸಲು, ವಿಶ್ವಾಸಾರ್ಹತೆಯನ್ನು ಸ್ಥಾಪಿಸಲು ಇದನ್ನು ಕಾರ್ಯಗತ ಮಾಡಬೇಕಾಗಿದೆ.

. ಮೇಲಿನ ಉದಾಹರಣೆಗಳನ್ನು ಬಿಟ್ಟು ಮಹಿಳೆಯರು ಉದಾಹರಿಸಿದ ಇನ್ನೊಂದು ವಿವಾದವೆಂದರೆ, ಸುಗ್ಗಿ ಮತ್ತು ಅಕಾಸಿಯ ತೋಟದ
ವಿಕ್ರಯದಿಂದ ಬರುವ ವರಮಾನದಲ್ಲಿ ಶೇಕಡಾ 50, ವಿ.ಎಫ್.ಸಿ.ಗೆ ಕೊಡುವುದಾಗಿ ಅರಣ್ಯ ಇಲಾಖೆ ಭರವಸೆ ನೀಡಿತ್ತು. ಎಂದರೆ 38000 ರೂಗಳಲ್ಲಿ ಅರ್ಧ 19000 ರೂ. ಒಂದು ವರುಷದ ಹಿಂದೆಯೇ ಸುಗ್ಗಿಯಾಗಿದ್ದಾಗ್ಯೂ ಇದು ಆಗಿಲ್ಲ.

## 5 ಮುತ್ತಾ

ಮುತ್ತಾ ಗ್ರಾಮವು ಕೆನರಾ ವೃತ್ತದಲ್ಲಿ ಹೊನ್ನಾವರ ವಿಭಾಗದಲ್ಲಿದೆ. ಇದು ಹೊನ್ನಾವರದಿಂದ 15 ಕಿ.ಮೀ. ದೂರದಲ್ಲಿದೆ. ಜೆ.ಎಫ್.ಪಿ.ಎಂ. ಚಟುವಟಿಕೆ 1995 ರಲ್ಲಿ ಪ್ರಾರಂಭವಾಯಿತು. ಈ ಗ್ರಾಮದಲ್ಲಿ ಒಟ್ಟು 150 ಕುಟುಂಬಗಳು ವಾಸವಾಗಿವೆ, ಅದರಲ್ಲಿ 40 ವಿ.ಎಫ್.ಸಿ. ಸದಸ್ಯರು.

ಇದು ಉತ್ತರ ಕೆನರಾದ ಕಡಲು ತೀರದ ಗ್ರಾಮಗಳಲ್ಲಿ ಒಂದಾಗಿದ್ದು ತಿಳುವಳಿಕೆಯ ಮಟ್ಟ, ಸಮುದಾಯದ ಜ್ಞಾನ ತುಂಬಾ ಉತ್ತಮವಾಗಿದೆ. ಸಮುದಾಯವು ಕಾರ್ಯಕ್ರಮದಲ್ಲಿ ಚುರುಕಾಗಿ ~~ಸಮಾವೇಶಗೊಂಡಿದೆ.~~ ಭಾಗವಹಿಸಿದೆ

## ಅಂಶಗಳು :-

. ಗ್ರಾಮದ ಎಲ್ಲಾ ಕುಟುಂಬದವರೂ ಭಾಗವಹಿಸುವುದರೊಂದಿಗೆ, 1/3 ಕ್ಕಿಂತ ಹೆಚ್ಚು ಅಧಿಕಾರಯುಕ್ತವಾಗಿ ದಾಖಲಾಗದಿದ್ದರೂ ಸಹ, ಜೆ.ಎಫ್.ಪಿ.ಎಂ. ಕಾರ್ಯಕ್ರಮವು ಶಕ್ತಿಯುತವಾಗಿ ಪ್ರಾರಂಭವಾಯಿತು. ಸಮುದಾಯವು ಅರಣ್ಯದ ಸ್ವಂತಿಕೆಯನ್ನು ಅರ್ಥ ಮಾಡಿಕೊಳ್ಳುತ್ತದೆ ಮತ್ತು ಅದನ್ನು ರಕ್ಷಿಸಲು ಇಚ್ಛಿಸುತ್ತದೆ.

. ಜೆ.ಎಫ್.ಪಿ.ಎಂ. ಕಾರ್ಯಕ್ರಮದ ಮೊದಲಿನ ಕಾರ್ಯಕ್ರಮಗಳಲ್ಲಿ ಒಂದೆಂದರೆ ಅಕ್ರಮವಾಗಿ ಆಕ್ರಮಿಸಲ್ಪಟ್ಟ ಆರು ಸ್ಥಳಗಳನ್ನು ( 2 ಹೆಕ್ಟೇರ್ ಪುನಃ ಪಡೆದುಕೊಂಡದ್ದು ಮತ್ತು ಅದನ್ನು ಜೆ.ಎಫ್.ಪಿ.ಎಂ. ಚಟುವಟಿಕೆಗೆ ಅಧೀನ ಮಾಡಿದ್ದಾರೆ.

.ಜನರ ಅಭಿಪ್ರಾಯಗಳು

ಮಳೆಗಾಲದಲ್ಲಿ ಮುಖ್ಯಭೂಭಾಗದಿಂದ ಸಂಪರ್ಕಕಡಿದು ಹೋಗುವುದುರಿಂದ ಅವರು ಕ.ಅ.ಇ ಯನ್ನು ಒಂದು ದೋಣಿಗಾಗಿ ಪ್ರಾರ್ಥಿಸಿದ್ದರು, ಆದರೂ ಇಲ್ಲಿ ಯವರೆಗೂ ಉತ್ತರವಿಲ್ಲ. ಇದರಿಂದ ಅವರು ನಿರಾಶರಾಗಿದ್ದಾರೆ

.ಅರಣ್ಯ ಇಲಾಖೆಯು ಜೆ.ಎಫ್.ಪಿ.ಎಂ: ಕ್ಷೇತ್ರದ ಗೇರುಹಣ್ಣಿನ ತೋಟಗಳನ್ನು ಕೆ.ಸಿ.ಡಿ.ಸಿ ಗೆ ಗುತ್ತಿಗೆಕೊಟ್ಟಿ ರುವುದರಿಂದ ಸಮುದಾಯ ನಿರಾಶೆ ಹೊಂದಿದ್ದಾರೆ ವರಮಾನ ಒಂದೇ ಅಲ್ಲದೆ. ಜೀವನಾಧಾರ ಮತ್ತು ಉದ್ಯೋಗಾವ ಕಾಶಗಳಿಗೂ ಇದು ಅವರಿಗೆ ದೊಡ್ಡನಷ್ಟವೆಂದು ಭಾವಿಸುತ್ತಾರೆ. ಇದಕ್ಕೆಕಾರಣ ಗೇರು ಹಣ್ಣಿನಸುಗ್ಗಿಯನ್ನು ಕೆ.ಸಿ.ಡಿ.ಸಿ.ಯವರು ಕೇರಳದ ಗುತ್ತಿಗೆದಾರರಿಗೆ ಮಾರಾಟ ಮಾಡುತ್ತಾರೆ. ಜೆ.ಎಫ್.ಪಿ.ಎಂ ನಿಂದ ಹೊರದೂಡಲ್ಪಟ್ಟ ಆರು ಕುಟುಂಬಗಳಿಗೆ ಇಲ್ಲಿಯವರೆಗೂ ಬೇರೆ ಜೀವನಾಧಾರವಿಲ್ಲ.

.ಅರಣ್ಯದ ಜಮೀನಿನ ನಿರ್ವಹಣೆಯಲ್ಲಿ ನಿಶ್ಚಿತವಾದ ಸುಧಾರಣೆ ಇದೆ ಎಂದು ಜನ ಭಾವಿಸುತ್ತಾರೆ. ಅವರು ಆರೋಗ್ಯ ಕರವಾದ ತೋಟಗಳನ್ನು ಮತ್ತು ಅನೇಕ ಗುಡ್ಡ ಪ್ರದೇಶಗಳು ಮೊದಲು ಬಂಜರಾಗಿದ್ದು ಈಗ ಹೇಗೆ ಹಸಿರು ತೋಟಗಳಿಂದ ಕಾಣುತ್ತಿದೆಯೆಂದೂ ಗುರುತಿಸುತ್ತಾರೆ. ಅವರು"ಅಕೇಸಿಯೊ ಮ್ಯಾಂಜಿಯಂ" ಮತ್ತು ಇತರೆ ಮಿಶ್ರಿತ ತೋಟಗಳ ಬಗ್ಗೆ ~~ಗಮನಿಸಿದ್ದಾ~~ರೆ. ಅವರು ಮಣ್ಣು ಮತ್ತು ನೀರುಗಳನ್ನು ರಕ್ಷಿಸುವ ಮೂಲಕ ತೋಟದ ಪ್ರಮಾಣಗಳಲ್ಲಿ (ಅರ್ಧ ಚಂದ್ರಾಕಾರದ ಕಂದಕಗಳು, ರೇಖಾಕಂದಕಗಳು ಇತ್ಯಾದಿ, ಒಳನೀರಿನ ಮಟ್ಟಗಳಲ್ಲಿ ಅಭಿವೃದ್ಧಿ ಕಂಡುಬರುತ್ತಿದೆ.

## ಸಿರಿಗುಂಜಿ

ಸಿರಿಗುಂಜಿಗ್ರಾಮವು ಕೆನರಾವೃತ್ತದ ಹೊನ್ನಾವರ ವಿಭಾಗದಲ್ಲಿದೆ. ಇದು ಕುಟಾದಿಂದ 16 ಕಿ.ಮೀ. ದೂರದಲ್ಲಿದೆ ಜೆ.ಎ.ಫ್.ಪಿಎಂ. ಚಟುವಟಿಕೆ 1995ರಲ್ಲಿ ಆರಂಭವಾಯಿತು. ಈಗ್ರಾಮದಲ್ಲಿ ಒಟ್ಟು 48 ಕುಟುಂಬಗಳು ವಿ.ಎಫ್.ಸಿ ಸದಸ್ಯರು ಸಮುದಾಯವು/ಜೆ.ಎಫ್.ಪಿಎಂ ಚಟುವಟಿಕೆಯ ಬಗ್ಗೆ ಜಾಗೃಕರಾಗಿದ್ದಾರೆ ಮತ್ತೂ ಅದರಲ್ಲಿ ಪೂರ್ಣವಾಗಿ ಸಾಗಿ ~~ಸಮಾವೇಶಗೊಂಡಿದ್ದಾರೆ~~

## ಅಂಶಗಳು

ಕ.ಅ.ಇ. ಮತ್ತು ಸ್ಥಳೀಯ ಸಮುದಾಯದ ನಡುವೆ ತುಂಬಾ ಸಂಬಂಧವಿದೆ. ಮತ್ತು ಇವರು ಅಭಿವೃದ್ಧಿ ಕೆಲಸದಲ್ಲಿ ಸಹಭಾಗಿಗಳಾ ಗಿರು~~ಹಕೆ~~ ಕೋರುತ್ತದೆ

. ವಿ.ಎಫ್.ಸಿ.ಸದಸ್ಯರು, ಹಿಂದೆ ಅರಣ್ಯವನ್ನು ಉರುವಲು, ಮೇವು ಮತ್ತು ಮರಮುಟ್ಟು ಗಳಿಗಾಗಿ ~~ನಿರ್ಬಂಧನೆಯಿಲ್ಲದೆ~~ ಉಪಯೋಗಿಸಿ ಕೊಳ್ಳುತ್ತಿದ್ದರೆಂದು ಹೇಳುತ್ತಾರೆ. ಈಗ ಇದು ಹೆಚ್ಚು ಕ್ರಮಬದ್ಧವಾದ ನಿರ್ವಹಣೆಯಾಗಿದೆ. ಅರಣ್ಯ ಸುರಕ್ಷಿಕವಾಗಿರಬೇಕಾದರೆ ಇದು ಅಗತ್ಯವೆಂದು ಹೇಳುತ್ತಾರೆ.

. ವಿ.ಎಫ್.ಸಿ. ಸದ್ಯರು ಈವರೆಗೆ ಕಳ್ಳಸಾಗಾಣಿಕೆದಾರರನ್ನು ಹಿಡಿದು19,000/-ರೂ ಮರ ಮುಟ್ಟುಗಳನ್ನು ವಶಪಡಿಸಿ ಕೊಂಡಿದ್ದಾರೆ.

ಕ ಅ.ಇ.ಯು12000/- ರೂ ಮರಮುಟ್ಟುಗಳನ್ನು ಹರಾಜು ಹಾಕಿದ್ದರೂ ಸಹ, ಇವರಿಗೆ ಇನ್ನು ಯಾವುದೇ ಫಲವನ್ನು ಕೊಟ್ಟಿಲ್ಲ. ವಿ.ಎಫಿ.ಸಿ ತನ್ನದೇ ಆದ, ಕಳ್ಳಸಾಗಾಣಿಕೆ ನಿಲ್ಲಿಸುವಪ್ರತಿ ವ್ಯಕ್ತಿಗೆ 500/- ರೂಗಳಬಹುಮಾನ ಕೊಡುವ ಪದ್ಧತಿಯನ್ನು ರೂಢಿಸಿಕೊಂಡಿರುತ್ತಾರೆ

. ಪಿ.ಎಫ್.ಸಿ.ಸದಸ್ಯರು, ಜೆ.ಎಫ್.ಪಿ.ಎಂ. ಚಟುವಟಿಕೆಯನ್ನು ಇತರ ಸ್ಥಳಗಳಲ್ಲಿ ಪ್ರಾರಂಭಿಸಿದಲ್ಲಿ, ಕಾನೂನುಬಾಹಿರವಾಗಿ ಮರ ಕಡಿಯುವುದನ್ನು ನಿಲ್ಲಿಸಿದಲ್ಲಿ ಅವರ ಮೇಲಿನ ಒತ್ತಡ ಕಡಿಮೆಯಾಗುವುದೆಂದು ಭಾವಿಸುತ್ತಾರೆ ಮತ್ತು ಕುಮ್ಟಾ ನಗರವಾಸಿಗಳಿಗೆ ಅನುಕೂಲವಾಗುತ್ತದೆ.

. ಅರಣ್ಯಇಲಾಖೆಯು ಜನರಿಗೆ (ಸಮುದಾಯಕ್ಕೆ) ಬೇಕಾದ ಸಸಿಗಳನ್ನು ಹೆಚ್ಚು ನೆಡಬೇಕೆಂದು ಇಚ್ಛಿಸುತ್ತಾರೆ

.ವೈದ್ಯಕೀಯ ಸಸಿಗಳ ಕೃಷಿಗೆ ಕ್ಷೇತ್ರವನ್ನು ನಿಗದಿಡಿಸಬೇಕೆಂದು ಸಮುದಾಯ ಒಪ್ಪುತ್ತದೆ ಮತ್ತು ಅವರ ಸಾಂಪ್ರದಾಯಿಕ ಆರೋಗ್ಯ ಪದ್ಧತಿಯನ್ನು ಪುನಃ ಪಡೆಯಲು ಅವರು ಅಪೇಕ್ಷಿಸುತ್ತಾರೆ.

. ಜೆ.ಎಫ್.ಪಿ.ಎಂ. ಸ್ಥಾಪನೆಯಿಂದ ಬಡಗಿಗಳ ಮೇಲೆ ಪರಿಣಾಮವಾಗಿದೆ.

## 7.ಕರಿಗೇನಕೊಪ್ಪ

ಪ್ರಧಾನವಾಗಿ ಕೃಷಿ ಮೂಲವಾದ ಕರಿಗೇನಕೊಪ್ಪ ಕೆನರಾವೃತ್ತದ ಯಲ್ಲಾಪುರ ವಿಭಾಗದಲ್ಲಿದೆ. ಇದು ಮುಂಡಗೋಡಿನಿಂದ 8 ಕಿ.ಮೀ. ದೂರದಲ್ಲಿ ಯೆಲ್ಲಾಪುರದಿಂದ 42 ಕಿ.ಮೀ. ದೂರದಲ್ಲಿಯೂ ಇದೆ. ಇಲ್ಲಿರುವ 140 ಕುಟುಂಬಗಳಲ್ಲಿ, 80 ಲಂಬಾಣಿ (ಗಿರಿಜನ) ಸಮುದಾಯಕ್ಕೆ ಸೇರಿವೆ, ಈ ಗ್ರಾಮ ಸಮುದಾಯದ ಒಂದು ಮುಖ್ಯ ಲಕ್ಷಣವೆಂದರೆ, ಹೆಚ್ಚು ಕುಟುಂಬ ಮಾರ್ಚ್- ಜೂನ್ ಕಾಲದಲ್ಲಿ ಶಿವಮೊಗ್ಗ, ಶಿರಸಿ, ಹುಬ್ಬಳ್ಳಿ ಇತ್ಯಾದಿ ಸ್ಥಳಗಳಿಗೆ ವಲಸೆಹೋಗುತ್ತಾರೆ

ಒಂದು ವರ್ಷದಿಂದ, ಒಂದು ಎನ್.ಜಿ.ಓ." ಚಿನಿಯಾರ್ಡ್" ಕರಿಗೇನಕೊಪ್ಪದಲ್ಲಿ ಕೆಲಸಮಾಡುತ್ತದೆ. ಇದು ಮುಖ್ಯವಾಗಿ ಮಹಿಳೆಯರನ್ನು ಸ್ವಯಂಸಹಾಯ ಗುಂಪುಗಳಾಗಿ ಸಂಘಟಿಸುವುದರಲ್ಲಿ, ಉಳಿತಾಯ ಮತ್ತು ಸಾಲನಿರ್ವಹಣೆ ಕೆಲಸಗಳನ್ನು ಮಾಡಿದೆ. ಕರಿಗೇನ ಕೊಪ್ಪದಲ್ಲಿ ವಿ.ಎಫ್.ಸಿ ಮಹಿಳೆಯರನ್ನು ಒಳಗೊಂಡಿದೆ. ವಿ.ಫ್.ಸಿ ಜನರಲ್ ಬಾಡಿಯಲ್ಲಿ ಒಟ್ಟು 100 ಸದಸ್ಯರಿದ್ದಾರೆ ಮತ್ತು ಇದರಲ್ಲಿ 10 ಕಾರ್ಯನಿರ್ವಹಣೆ ಸಮಿತಿ ಸದಸ್ಯರಾಗಿದ್ದಾರೆ.

<u>ಅಂಶಗಳು:</u> —

. ಜನರು ವಲಸೆಹೋಗುವುದು, ಜೆ.ಎಪ್.ಪಿ.ಎಂ ಕಾರ್ಯಕಮದಲ್ಲಿ ಭಾಗವಹಿಸುವುದಕ್ಕೆ ದೊಡ್ಡ ಅಡ್ಡಿಯಾಗಿದೆ, ಏಕೆಂದರೆ ಇದರಿಂದ ಸಮುದಾಯವ್ಯವಸ್ಥೆ, ತಿಳಿವಳಿಕೆ ಹೆಚ್ಚಿಸಿಕೊಳ್ಳವುದರಲ್ಲಿ ಭಾಗವಹಿಸುವುದನ್ನು ನಿರ್ಭಂದಿಸುತ್ತದೆ. ಇದನ್ನು ಇನ್ನೂ ಮುಂದೆ ಹೀಗ ವಿವರಿಸಬಹುದು.

- ಕ.ಅ.ಇ. ಮತ್ತು ಜನರ ನಡುವೆ ಉತ್ತಮ ಸಂಬಂಧ ಅಭಿವೃದ್ಧಿಪಡಿಸಲು ಕ.ಅ.ಇ. ಸಹಕರಿಸಲು ಸಿದ್ಧವಿಲ್ಲ.
- ಕ.ಅ.ಇ. 12 ಎಕರೆ ಪ್ರದೇಶದಲ್ಲಿ ಮರಗಳನ್ನು ನೆಟ್ಟಿತ್ತು ಆದರೆ ಉದಾಸೀನತೆ ಮತ್ತು ಕಾಳ್ಗಿಚ್ಚಿನಿಂದ ಅದು ಉಳಿಯಲಿಲ್ಲ. ಜನರು ತಮ್ಮ ಕೃಷಿಗಾಗಿ ಉರುವಲು ಮತ್ತು ಜೀವನಾಧಾರಕ್ಕಾಗಿ ಜೆ.ಎಫ್.ಪಿ.ಎಂ. ಕ್ಷೇತ್ರದ ಮರಗಳನ್ನು ಕಡಿದುದಾಗಿ ದೂರುತ್ತಾರೆ. ಆದರೆ ಸಮುದಾಯ ಅದು ನಿಜವಲ್ಲವೆಂದು ಹೇಳುತ್ತಾರೆ.

.ಜನರು ಬಡತನದಿಂದ ಜೆ.ಎಫ್.ಪಿ.ಎಂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಚ್ಛಿಸಿಲ್ಲ.

. ಸಮುದಾಯ ವಲಸೆಹೋಗುವುದನ್ನು ಕಡಿಮೆ ಮಾಡಲು ಮತ್ತು ಆದಾಯ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದನ್ನು ಸಲಹೆ ಮಾಡುತ್ತದೆ. ಉದಾ

a. ಹೈನುಗಾರಿಕೆ ಮತ್ತು ಕುರಿಸಾಗಾಣಿಕೆ

b. ಕ.ಅ.ಇ ಮೊದಲು ಜನರಿಗೆ ಬೀಜ ಸಂಗ್ರಹಿಸುವ ಮತ್ತು ಪೊಟ್ಟುತೆಗೆಯುವ ಕೆಲಸ ಕೊಟ್ಟಿತ್ತು-ಜನ ಇಂತಹ ಹೆಚ್ಚು ಉದ್ಯೋಗಕ್ಕಾಗಿ ಕಾದಿರುತ್ತಾರೆ

c. ಎಸ್. ಹೆಚ್.ಸಿ.ಗಳ ವ್ಯವಸ್ಥೆ, ಉಳಿತಾಯ ಮತ್ತು ಸಾಲಕಾರ್ಯಕ್ರಮಗಳನ್ನು ಪ್ರಾರಂಭಿಸುವುದರ ಮೂಲಕ ಸಮುದಾಯ ವ್ಯವಸ್ಥೆಯನ್ನು ಬಲಪಡಿಸುವುದು. ಶ್ರೀರಾಜಣ್ಣ (ಸೇರಿದ ಒಬ್ಬವ್ಯಕ್ತಿ ಮತ್ತ ಸಮುದಾಯಕ್ಕೆ ವ್ಯಾಪಕವಾಗಿ ಒಪ್ಪಿಗೆಯೂದವನು), ಅರಣ್ಯ ಇಲಾಖೆ ಮತ್ತು ಗ್ರಾಮಸ್ಥರ ನಡುವೆ ಸಂಪರ್ಕಕ್ಕಾಗಿ ಒಪ್ಪಿರುತ್ತಾರ.

. ಅಸ್ಟ್ರಾಒಲೆನಂತಹ ಇಪಿಎಗಳ ಜಾರಿಗೊಳಿಸುವಿಕೆಯನ್ನು ಸುಧಾರಿಸಬೇಕು. ಮೊದಲು ಕಟ್ಟಿದ 25 ಅಸ್ಟ್ರಾಒಲೆಗಳು ಜನರಿಗೆ ಒಪ್ಪಿಗೆಯಾಗಿಲ್ಲ ಏಕೆಂದರೆ ಅವು ಸಾಧಾರಣ ಒಲೆಗಳಿಗಿಂತ ಹೆಚ್ಚು ಉರುವಲನ್ನು ವ್ಯಯ ಮಾಡುತ್ತವೆ

8 ಬಾಷಿ

ಬಾಷಿಗ್ರಾಮವು ಕೆನರಾವೃತ್ತದ ಸಿರಸಿ ವಿಭಾಗದಲ್ಲಿದೆ. ಇದು ಸಿರಸಿಯಿಂದ 26 ಕಿ.ಮೀ. ದೂರದಲ್ಲಿದೆ. ಜೆ.ಎಫ್.ಪಿ.ಎಂ ಚಟುವಟಿಕೆ 1997ರಲ್ಲಿ ಪಾರಂಭವಾಯಿತು. ಇದರಲ್ಲಿ ಒಟ್ಟು 195 ಕುಟುಂಬಗಳು ವಾಸಿಸುತ್ತವೆ. ಇಲ್ಲಿ ವಿ.ಎಫ್.ಸಿ. ವಿಫಲವಾಗಿರುಲು ಕಾರಣ ಪ್ರತಿಸ್ಪರ್ಧಿ ಗುಂಪುಗಳು ಎಂದು ಇಲ್ಲಿಗೆ ಭೇಟಿ ಮಾಡಿದವರಿಗೆ ತಿಳಿಯುತ್ತದೆ.

ಅಂಶಗಳು

.ವಿ.ಎಫ್.ಸಿ. ಅಧ್ಯಕ್ಷರ ಚುನಾವಣೆ ಕಾಲದಲ್ಲಿ ಗ್ರಾಮದ ಸಂಕೀರ್ಣ ಮತಭೇದಗಳಿಂದ, ರಾಜಕೀಯ ಚಳುವಳಿ ಯಿಂದ ಸಮಾವೇಶ ಕುಂಠಿತವಾಯಿತು. ಒಂದು ಪಕ್ಷವು ಅತಿಕ್ರಮಿಸಿದ ಜಮೀನನ್ನು ಜೆ.ಎಫ್.ಪಿ.ಎಂ ಅಧೀನಕ್ಕೆ ತರುವುದೇ ಮುಖ್ಯ ಅಂಶವಾಗಿತ್ತು ಅತಿಕ್ರಮಿಸಿದವರು ಇದಕ್ಕೆ ವಿರೋಧವಾಗಿದ್ದರು ಕ.ಅ.ಇ. ಅತಿಕ್ರಮಿಸದ ಇದ್ದವರನ್ನು ಉತ್ತೇಜಿಸುತ್ತಿದ್ದರು.

. ತತ್ಪರಿಣಾಮವಾಗಿ ಗ್ರಾಮದಲ್ಲಿನ ಇತರ ಅಭಿವೃದ್ಧಿ ಚಟುವಟಿಕೆಗಳೂ ನಿಂತುಹೋಗಿವೆ. 5 ವರ್ಷಗಳಿಂದ ವಿ.ಎಫ್.ಸಿ. ಸಭೆಗಳು ನಡೆದಿಲ್ಲ.

. ಜೆ.ಎಫ್.ಪಿ.ಎಂ. ಚಟುವಟಿಕೆಗಳನ್ನು ವಿ.ಎಫ್.ಸಿ., ಕ.ಅ.ಇ. ಪರವಾಗಿ ನಡೆಸುತ್ತದೆ ಮತ್ತು ವಿ.ಎಫ್.ಸಿ ಸದಸ್ಯರು ಇದರಲ್ಲಿ ಭಾಗವಹಿಸುವುದಿಲ್ಲ.

. ಗ್ರಾಮದಲ್ಲಿನ ಎರಡುಪಕ್ಷಗಳ ನಡುವಿನ ಭೇದಗಳನ್ನು ರಾಜಿ ಮಾಡಿಸಿದರೆ ಮಾತ್ರ ಮುಂದೆ ಸುಧಾರಣೆ ಸಾಧ್ಯ. ಆದರೂ ಇದು ಸದ್ಯಕ್ಕೆ ಹತ್ತಿರದಲ್ಲಿಲ್ಲ ಕೆ.ಅ.ಇ.ಯ ಸಿಬ್ಬಂದಿಗೆ ಈ ಸಮಸ್ಯೆಯನ್ನುಪರಿಣಾಮಕಾರಿಯಾಗಿ ಬಗೆಹರಿಸಲು ಅವಶ್ಯಕವಾದ ಕುಶಲತೆ ಇಲ್ಲ.

9. ಕೋಟೆ ಕೊಪ್ಪ

ಕೋಟೆ ಕೊಪ್ಪಗ್ರಾಮವು ಕೆನರಾವೃತ್ತದ ಸಿರಸಿ ವಿಭಾಗದಲ್ಲಿದೆ. ಇದು ಸಿರಸಿಯಿಂದ 26 ಕಿ. ಮೀ. ದೂರದಲ್ಲಿದೆ. ಒಟ್ಟು 16 ಕುಟುಂಬಗಳು ವಿ.ಎಫ್.ಸಿ. ಸದಸ್ಯರಾಗಿದ್ದಾರೆ. ಒಂದು ಎಸ್.ಹೆಚ್.ಜಿ. ದೊಡನೆ ಉತ್ತಮ ಮಟ್ಟದ ಸಹಕಾರದಿಂದ ~~ಸಫಲವಾದ ಜೆ.ಎಫ್.ಪಿ.ಎಂ.ಗಳ~~ ತೋಟಗಾರಿಕೆ, ಹಾಲು ಉತ್ಪಾದನೆ ಇತ್ಯಾದಿಗಳಿಂದ ಸಫಲವಾಗಿದೆ. ಹಲವಾರು ಸರಕಾರಿಕಾರ್ಯಕ್ರಮಗಳಿಂದ ಸಂಪನ್ಮೂಲವನ್ನು ಸಂಘಟಿಸುವುದರಲ್ಲಿ ಕ.ಅ.ಇ.ಸಮಾನ ಮುಖ್ಯ ಪಾತ್ರವಹಿಸಿದೆ.

ಅಂಶಗಳು :-

ವಿಕಾಸ ಆರಂಭಿಸಿದ ಒಂದು ಯುವ ಗುಂಪು ಮತ್ತು ಒಂದು ಮಹಿಳೆಯರ ಗುಂಪು ಇವೆ. ಇವು ಚೆನ್ನಾಗಿ ಕಾರ್ಯನಿರ್ವಹಿಸುತ್ತವೆ. ಶಕ್ತಿಯುತವಾದ ವಿ.ಎಫ್.ಸಿ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಗೆ ಕಾರಣಕಾರಕವಾಗಿದೆ. ಯೋಜನೆ ಜಾರಿಗೊಳಿಸುವುದಕ್ಕೆ ಪೂರ್ವಭಾವಿಯಾದ ಸಿದ್ಧತೆಗೆ ಇದು ಒಳ್ಳೆಯ ಉದಾಹರಣೆ. ವಿಕಾಸದ ಜೊತೆಗೆ, ಬಿ.ಎ.ಐ.ಎಫ್ ಸಹ ವರಮಾನ ಉತ್ಪಾದಿಸುವ ಚಟುವಟಿಕೆಗಳನ್ನು (ತೋಟಗಾರಿಕೆ ಮತ್ತು ಹಾಲು ಉತ್ಪಾದನೆ) ವರ್ಧಮಾನಕ್ಕೆ ತರುವಲ್ಲಿ ಬಿ.ಎ.ಐ.ಎಫ್ ಸಹ ಚುರುಕಾಗಿ ಕೆಲಸ ಮಾಡಿದೆ. ಕಾರ್ಯಕ್ರಮದಲ್ಲಿ ತಿಳಿವಳಿಕೆ, ಪ್ರೇರಣೆ ಮತ್ತು ಕೂಡ, ತರಬೇತಿ, ಮತ್ತು ಪ್ರವಾಸ-ವಿಕಾಸ ಕಾರ್ಯಕ್ರಮಗಳನ್ನು ಬಿ.ಎ.ಐ.ಎಫ್‌ಗಳು ಏರ್ಪಡಿಸಿವೆ.

. ಕ.ಅ.ಇ ಸಿಬ್ಬಂದಿಯು ಗ್ರಾಮಸ್ಥರಿಗೆ ಸರ್ಕಾರದ ಯೋಜನೆಗಳನ್ನು ಒದಗಿಸಿದೆ. ವಿಕಾಸ ಸ್ವಯಂಸೇವಾ ಸಂಸ್ಥೆ, ವಿ.ಎಫ್.ಸಿ. ಚಟುವಟಿಕೆಗಳನ್ನು ಬಲಪಡಿಸುವುದರಲ್ಲಿ ಸಮಭಾಗಿಯಾಗಿದೆ.

. ಹಲವಾರು ಇ.ಪಿ.ಎಗಳ ಜಾರಿ. ಉದಾ ಗ್ರಾಮ ಸಮುದಾಯ ಕೇಂದ್ರವನ್ನು ಸಂಪೂರ್ಣಗೊಳಿಸಿದ್ದು, ಕಾರ್ಯನಡೆಸುತ್ತಿರುವ 16 "ಅಸ್ತ್ರಾ ಒಲೆ" ಗಳಹಂಚಿಕೆ, 9 ಗೋಬರ್‌ಗ್ಯಾಸ ಯಂತ್ರಗಳು (ಇದರಲ್ಲಿ 8 ಕಾರ್ಯನಡೆಸುತ್ತಿವೆ), (ಗ್ರಾಮವನ್ನು ಮುಖ್ಯರಸ್ತೆಗೆಸೇರಿಸುವುದರಲ್ಲಿ 800 ಮೀಟರ್ ರಸ್ತ (ಜಿಲ್ಲಾಪರಿಷತ್ ಮೂಲಕ). ಗ್ರಾಮದೇವಸ್ಥಾನಗಳನ್ನು ಕಟ್ಟಿದ್ದು,34 ಹೆಕ್ಟೇಕರ ರಕ್ಷತ ಪ್ರದೇಶದಲ್ಲಿ (25 ಹೆಕ್ಟೇರ್‌ಹೊಸ ತೋಟ) ಪ್ರದೇಶದಲ್ಲಿ 44000 ಸಸಿಗಳನ್ನು ನೆಟ್ಟದ್ದು-ಇವು ಕಾರ್ಯಕ್ರಮದಲ್ಲಿ ಸಮುದಾಯದ ನಂಬಿಕೆಯನ್ನು ಹೆಚ್ಚಿಸಲು ಸಹಾಯಕವಾಗಿವೆ

. ಈ ಮೇಲಿನವುಗಳ ಜೊತೆಗೆ, ಆಗಾಗ್ಗೆ ಕ.ಅ.ಇ.ಯ ಮೇಲಧಿ ಕಾರಿಗಳ ಭೇಟಿ ಮತ್ತು ವಿದೇಶಿಯರಭೇಟಿ. ತಿಳಿವಳಿಕೆ ಮತ್ತು ಪ್ರೇರಣೆಯನ್ನು ಹೆಚ್ಚಿಸಲು ಸಹಾಯಕವಾಗಿವೆ.

. ಕಾರ್ಯಕ್ರಮದಲ್ಲಿ ಮಹಿಳೆಯರ ಭಾಗವಹಿಸುವಿಕೆ. ಸರಾಸರಿಗಿಂತಲೂ ಹೆಚ್ಚಾಗಿದೆ.

. ಕ.ಅ.ಇ, ಮೇಲೆ ಹೇಳಿದಂತ ಇತರ ಸರಕಾರಿ ಇಲಾಖೆಗಳನ್ನು ಉದಾ ಜಿಲ್ಲಾ ಪರಿಷತ್ ಸಂಪರ್ಕಿಸುವುದರ ಮೂಲಕ ಸಂಪನ್ಮೂಲಗಳನ್ನು ಸಂಘಟಿಸುವುದರಲ್ಲಿ ಮುಖ್ಯಪಾತ್ರವಹಿಸಿದೆ. ಈ ಮೂಲಕಬಲವಾದ.

. ಸಮುದಾಯವು ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿ ಸುವುದರಮೂಲಕ ಮತ್ತು ಜೆ.ಎಫ್.ಪಿ.ಎಂ. ಕ್ಷೇತ್ರವನ್ನು ರಕ್ಷಸುವುದು, ಕಳ್ಳಸಾಗಾಣಿಕೆಗಾರರನ್ನು ಹಿಡಿಯುವುದು, ಕಾಳಿಚ್ಚನ್ನು ಆರಿಸುವುದು ಇತ್ಯಾದಿಗಳ ಮೂಲಕ, ವಿನಿಸುಯ ಮಾಡಿಕೊಂಡಿದ್ದಾರೆ

. ತಂಡ ಕಲಸದ, ಪರಸ್ಪರ ಪೂರಕ ಮತ್ತು ಸಹಕಾರದ ಒಂದು ಉತ್ತಮ ಉದಾಜರಣೆ

## 10. ಕುಂಬಾರ ಕೊಪ್ಪ

ಕುಂಬಾ ಕೊಪ್ಪ ಕೆನರಾವೃತ್ತದ ಹಲಿಯಲ್ ವಿಭಾಗದಲ್ಲಿದೆ. ಇದು ಹಲಿಯಾಲ್ ನಿಂದ 15 ಕೆ. ಮೀ ದೂರದಲ್ಲಿದೆ. ಜೆಎಫ್.ಪಿ.ಎಂ. ಕಾರ್ಯಕ್ರಮವು1995 ರಲ್ಲಿ ಪ್ರಾರಂಭವಾಯಿತು.

ಈ ಗ್ರಾಮವು ಎರಡು ಪಕ್ಷಗಳ ಇರುವಿಕೆಯಿಂದ ಗುರುತಿಸಲ್ಪಟ್ಟಿದೆ, ಇದರಲ್ಲಿ ಒಂದು ರಕ್ಷಣೆಗಾಗಿ, ಇನ್ನೊಂದು ಅದುರ ವಿರೋಧಕ್ಕಾಗಿ. ಇದು ನಡೆಯುತ್ತರುವ ಘರ್ಷಣೆಗ ದಾರಿಮಾಡಿದ

### ಅಂಶಗಳು

. ಕಾರ್ಯಕ್ರಮದ ಬಗ್ಗ ತಿಳಿವಳಿಕೆ ಹೆಚ್ಚಿಸುವ ಬಂದು ಎಸ್.ಜಿ.(ಐ.ಡಿ.ಎಸ್) ಈಗ್ರಾಮದಲ್ಲಿ ಅಸ್ರಕ್ತದಲ್ಲಿದೆ. ಮೊದಲು ಐಡಿಸ್ ಪ್ರಾರಂಭಿಸದ ಮಹಿಳೆಯರ ಒಂದು ಎಸ್.ಹಚ್.ಜಿಗುಂಪು ಇಲ್ಲಿಪ್ತ; ಇದು 300 ರೂ/ಗಳನ್ನೂ ಉಳಿಸಿತ್ತು; ಆದರೆ ಇದು ಈಗಕೆಲಸ ಮಾಡುತ್ತಲ್ಲ. ಎಸ್.ಜಿ.ಒಗಳ ಚಟುವಟಿಕೆಯು ಸಮುದಾಯದ ಚಟುವಟಿಕೆಯನ್ನು ಹಚ್ಚಸುವುದಕ್ಕೂ ಮತ್ತು ಜೆ.ಎಫ್.ಪಿ.ಎಂ ಸೇರಿದಂತೆ ಹಲವಾರು ಕಾರ್ಯಕ್ರಮ ದೊನೆ ಸಂಬಂಧಿಸುವುದೂ ಸೀಮಿತವಾಗಿದೆ. ಹಾದರೂ ಕ್ಕಾರ್ಯಕ್ರಮದಿಲ್ಲಿ ಜೆ.ಎಫ್.ಪಿ.ಎಂ ಪಾತ್ರದೆ ಮಹಿಳೆಯರ ಕಿಳಿವಳಿಕೆಯು ಸೀಮಿಕವಾಗಿದೆ.

ಕಾರ್ಯಕ್ರಮವನ್ನು ಜಾರಿಗೆ ತರುವುದರಲ್ಲಿ ಎದುರಿಸುತ್ರಿರುವ ಮುಖ್ಯ ಅಂಶಗಳಲ್ಲಿ ಒಂದು ಗ್ರಾಮದಲ್ಲಿನ ಪ್ರಕ್ಷಗಳು. ಕಾರ್ಯಕ್ರ ಮದ ಪರವಾಗಿ 17ಸದಸ್ಯರಿದ್ದರೆ ವಿರುದ್ಧವಾಗಿರಿ 4 ಸದಸ್ಯರಿದ್ದುರೆಂಬ ದೂರುಇದೆ. ಭಾಗವಹಿಸದೆ ಇರುವ ವಿ.ಎಫ್.ಸದಸ್ಯರು ತಮ್ಮ ಜೀವನಾಧರಕ್ಕಾಗಿ ಮರಮುಟ್ಟುಗಳನ್ನು ಕಳ್ಳಸಾಗಾಣಿಕೆ ಮಾಡುತಿತಾ ರಂಬದೂರು ಇದೆ ಮತ್ತು ಅದರಿಂದ ಕಾರ್ಯಕ್ರಮ ಮುಂದು ವರೆಯುವುದು ಅವರಿಗೆ ಇಷವಿಲ್ಲ. ಒಂದು ಸಲ ಕಾಸಿಚ್ಚ ಹಬ್ಬಿದಾಗ ಈ ನಾಲ್ಕು ಕುಟುಂಬ ಅದನ್ನು ಆರಿಸಲು ಸಹಾಯ ಮಾಡದ ಸಂದರ್ಭವೂ ಇದೆ.

ಜೆ.ಎಫ್.ಪಿ.ಯಂ ಚಟುವಟಕೆಗಳನ್ನು ಬಿಟ್ಟು ಇತರ ಕಾರ್ಯಕ್ರಮಗಳಲ್ಲಿ 21ಕುಟುಂಬಗಳು ಒಂದಾಗಿರುತ್ತವೆ. ಈ ಎರಡು ಗುಂಪುಗಳು ತಮ್ಮ ವಿಭೇದಗಳನ್ನು ಮರೆಯಲು ಹಿರಿಯರನ್ನು ಕೋರಿರುತ್ತಾರೆ. ಜನರು ಎದುರಿಸುತ್ತಿರುವ ಸಮಸ್ಯೆಗಳು ಹಲವಾರು.

# ಕಂಡು ಬಂದ ವಿಷಯಗಳ ಸಾರಾಂಶ

**ಸಾಮಾಜಿಕ ಬದಲಾವಣೆಯ ಪರಿಶೀಲನೆಯಿಂದ ಕಂಡು ಬಂದ ಅಂಶಗಳು ಸಾರಾಂಶ ಈ ಕೆಳಗೆ ಕೊಟ್ಟಿದೆ**

. ಒಂದು ಅತ್ಯಂತ ಸಂಕೀರ್ಣ ಸಂದರ್ಭದಲ್ಲಿ ಮತ್ತು ಕರ್ಯಕ್ರಮದಲ್ಲಿ ಪಾಲುಗಾರಿಕೆಯ ಸಂಪ್ರದಾಯವನ್ನು ಅನುಸರಿಸುವುದು, ಒಟ್ಟಿನಲ್ಲಿ ಕ.ಅ.ಇ.ಯದು ಒಂದು ಒಳ್ಳೆಯ ಪ್ರಯತ್ನವಾಗಿದೆ. (ಸಮುದಾಯಃ ಪರಿಸರ(ಪ್ರಾಕೃತಿಕ ಸಂಪನ್ಮೂಲಗಳು) ಸಂಸ್ಥಾ ಸಂಸ್ಕೃತಿ) ಅಧ್ಯಯನದ

. ಭೇಟಿ ಮಾಡಿದ ಸುಮಾರು ಎಲ್ಲಾ ಗ್ರಾಮಗಳಲ್ಲಿಯೂ (ಕೆಂಬೆಕೊಪ್ಪ ಮತ್ತು ಕಲ್ಮನೆ ಹೊರತು ಜನರು ಅರಣ್ಯ ಇಲಾಖೆಯೊಡನೆ ಸಂಬಂಧ ಗಮನೀಯ ರೀತಿಯಲ್ಲಿ ಸುಧಾರಿಸಿರುವುದಾಗಿ ವ್ಯಕ್ತಪಡಿಸಿದ್ದಾರೆ. Entry Point Activities

. ಭೇಟಿ ಮಾಡಿದ ಅಧ್ಯಯನದ ಎಲ್ಲಾ ಗ್ರಾಮಗಳಲ್ಲಿಯೂ ಕ.ಅ.ಇ.ಸಿಬ್ಬಂದಿಯು ಹಲವಾರು ಇ.ಪಿ.ಎ.ಗಳ ಮೂಲಕ-ಕಂಬಗಳು, ಬದಿರು, ವಸತಿ, ಅಸ್ಟ್ರ ಒಲ್ಸ್, ಬಯೋಗ್ಯಾಸ್, ಇತ್ಯಾದಿಗಳ ಮೂಲಕ ಸಮುದಾಯದೊಡನೆ ಉತ್ತಮ ಸಂಬಂಧಗಳನ್ನು ಉಂಟುಮಾಡಲು ನಿಷ್ಕಪಟ ಪ್ರಯತ್ನ ಮಾಡಿದೆ.

. ಸಮುದಾಯದ ಸಂಸ್ಥೆ ಮತ್ತು ಪಾಲ್ಗೊಳ್ಳುವಿಕೆಯ ದೃಷ್ಟಿಯಿಂದ ಯೋಗ್ಯವಾದ ಮತ್ತು ಬದ್ಧ ಎನ್.ಜಿ.ಒ.ಇರುವಕಡೆ ಕಾಯ ರ್ಕ್ರಮದಲ್ಲಿ ಪಾಲ್ಗೊಳ್ಳುವಿಕೆಯು ಹೆಚ್ಚು ಪರಿಣಾಮಕಾರಿಯಾಗಿದೆ. (ಉದಾ. ಕೋಟಿಕೊಪ್ಪ (ವಿಕಾಸ ಮತ್ತು ಬಿ.ಎ.ಐ.ಎಫ್) ಸತಗೇರಿ (ಕೆ.ಆರ್.ಡಬ್ಲ್ಯೂ.ಸಿ.ಡಿ.ಸ್) ಮತ್ತು ಕನ್ನಿಗೆರೆ (ಎಸ್.ಡಿ.ಎಸ್) ಹಾಗಿದ್ದರೂ ಎನ್.ಜಿ.ಓ.ಗಳು ಮತ್ತು ಕ.ಅ.ಇ.ಯ ನಡುವಿನ ಸಂಬಂಧ ಕ್ರಿಯಾತ್ಮಕವಾಗಿ ಸಹಾಯಕವಾಗಿಲ್ಲ.

. ಪಾಲ್ಗೊಳ್ಳುವಿಕೆ ಗ್ರಾಮದ ವಿಸ್ತಾರದ ಮತ್ತು ಜನತೆಯ ಸಜಾತೀಯತೆಯನ್ನು (ಉದಾಃ ಮೇದರು ಮುಂತಾದ ಬಳಕೆದಾರರ ಗುಂಪು) ಅವಲಂಬಿಸುತ್ತದೆ (ಸಣ್ಣಗ್ರಾಮದಲ್ಲಿ ಹೆಚ್ಚು ಪಾಲ್ಗೊಳ್ಳುವಿಕೆ.

. ಪೂರ್ತಾ ಮಹಿಳೆಯರ ವಿ.ಎಫ್.ಸಿ.ಗಳನ್ನು ಹೊರತುಪಡಿಸಿ (ಉದಾ. ಮೃಗವಾಡೆ, ಕನ್ನಿಗೇರಿ ಮತ್ತು ಸತಗೇರಿ) ಕಾರ್ಯಕ್ರಮದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ತುಂಬಾ ಕಡಿಮೆ ಮತ್ತು ಪರಿಣಾಮಕಾರಿಯಾಗಿಲ್ಲ (ಗುರುತಿಗೆ ಮಾತ್ರ). ವಿ.ಎಫ್.ಸಿ. ಕಾರ್ಯ ರೀತಿ, ಲೆಕ್ಕಪತ್ರ ಮತ್ತು ಇತರ ಕಾರ್ಯಕ್ರಮಗಳ ವಿಷಯಗಳ ಬಗ್ಗೆ ಅವರ ತಿಳುವಳಿಕೆ ಗಣನೀಯವಲ್ಲದ್ದು.

. ಹೆಚ್ಚಿನ ಸಂಖ್ಯೆಯಲ್ಲಿ ಜಮೀನು ರಹಿತರನ್ನು ವಿ.ಎಫ್.ಸಿ.ಗಳಿಲ್ಲಿ ಭಾಗವಹಿಸಲು ಅವಕಾಶ ಕೊಡಲಾಗಿಲಿಲ. ಹೆಚ್ಚಿನ ಕಾರ್ಯಭಾರದಿಂದ, ಕಾಲ ಮತ್ತು ಪ್ರತ್ಯೇಕತೆಯಿಂದ, ಅವರು ಸರ್ವ ಸಾಮಾನ್ಯ ಸಭೆಯ ಚಟುವಟಿಕೆಗಳಲ್ಲಿ ಭಾಗವಹಿಸಲಾಗಿಲ್ಲ.

. ವಿ.ಎಫ್.ಸಿ. ಹಣಕಾಸು ನಿರ್ವಹಣೆ ಮತ್ತು ವಿ.ಎಫ್.ಸಿ. ಕಾರ್ಯರೀತಿ ಸಾಮಾನ್ಯವಾಗಿ ತಿಳಿಯುವಂತಿಲ್ಲ. ಜನರು, ವಿ.ಎಫ್.ಸಿ. ಆದಾಯ ಮತ್ತು ಖರ್ಚಿನ ಬಗ್ಗೆಯೂ ಮತ್ತು ಸೂಕ್ತ ಯೋಜನೆ ತಯಾರಿಕೆ, ಜೆ.ಎಫ್.ಎಂ.ಕ್ಷೇತ್ರಗಳ ಆಯ್ಕೆಯ ಬಗ್ಗೆಯೂ ತಮ್ಮನ್ನು ಸೇರಿಸಿಕೊಳ್ಳಬೇಕೆಂದು ಹೇಳುತ್ತಾರೆ.

. ಲಾಭದ ಹಂಚಿಕೆ ಇನ್ನೂ ಪ್ರಾರಂಭವಾಗಬೇಕಾಗಿದೆ (ಬಿದಿರು / ಮೇದರನ್ನು ಬಿಟ್ಟು

- ಹಳೆಯ ತೋಟಗಳಿಂದ ಬಂದ ಲಾಭದ ಹಂಚಿಕೆ
- ಜೀವೋತ್ಪನ್ನ, ರೆಂಬೆಗಳು, ಕಂಬಗಳು, ಹುಲ್ಲು ಇತ್ಯಾದಿ (ಹೊಸ ತೋಟದವು)
- ಕಳ್ಳ ಸಾಗಣಿಕೆದಾರರನ್ನು ಹಿಡಿದದ್ದರಿಂದ ಮತ್ತು ಅದರಿಂದ ಬಂದ ಉತ್ಪನ್ನ ಹಂಚಿಕೆ

. ಜನರು ನಿರೀಕ್ಷಿಸುವುದು ಜೆ.ಎಫ್.ಪಿ.ಮ್.ನಿಂದ ಹೆಚ್ಚಿಗೆ ವರಮಾನ, ಆದುದರಿಂದ ಕಾರ್ಯಕ್ರಮವನ್ನು ಆದಾಯ ಉತ್ಪನ್ನ ಚಟುವಟಿಕೆಗಳಿಗೆ ಪರಿಣಾಮಕಾರಿಯಾಗಿ ಕೂಡಿಸುವುದು ಫಲದಾಯಕ. ಇದನ್ನು ಕ.ಅ.ಇ. ನೇರವಾಗಿ ಮಾಡಬಹುದು (ಸಿಪ್ಪೆ ತೆಗೆಯುವುದು, ಬೀಜ ಸಂಗ್ರಹಣೆ ಅಥವಾ ಸಸಿಗಳ ಬೆಳವಣಿಗೆಗಳ ಮೂಲಕ) ಅಥವಾ ಎನ್.ಜಿ.ಒ.ಗಳ ಮೂಲಕ ಮಾಡಬಹುದು. ಮಹಿಳೆಯರಿಗೆ, ಜಮೀನುರಹಿತರಿಗೆ ಮತ್ತು ಇತರೆ ಬದಿಯ ಗುಂಪುಗಳಿಗೆ ವಿಶೇಷ ಒತ್ತು ಕೊಡಬೇಕಾಗುತ್ತದೆ.

. ಹೆಚ್ಚಿನ ಸಂದರ್ಭಗಳಲ್ಲಿ ಒಂದು ಕಾರ್ಯಕ್ರಮದ ಸದವಕಾಶ ಮೌಲ್ಯವಿದೆ. ಯಾವುದೆಂದರೆ

- ಜನರು ಹೆಚ್ಚಾಗಿ ಮಹಿಳೆಯರು ಉರುವಲು ಸಂಗ್ರಹಕ್ಕಾಗಿ ಮತ್ತು ದನವೇಯಿಸುವುದಕ್ಕಾಗಿ ಹೆಚ್ಚು ದೂರ ಹೋಗಬೇಕಾಗಿದೆ. ಅವರು ಹೆಚ್ಚು ಕಾಲ ಈ ಚಟುವಟಿಕೆಯಲ್ಲಿ ಕಳೆಯುತ್ತಾರೆ ಮತ್ತು ಇದರಲ್ಲಿ ಹೆಚ್ಚು ದೇಹ ಶ್ರಮವೂ ಸೇರಿದೆ. ಕೆಲವು ಸಂದರ್ಭಗಳಲ್ಲಿ ಅವರು ಉರುವಲಿಗಾಗಿ ಒಳ ಕ್ಷೇತ್ರಗಳಿಗೆ ಹೋಗುತ್ತಾರೆ. ಅವರು ಈಗ ಜೀವೋತ್ಪನ್ನ ವಸ್ತುಗಳು (ಹತ್ತಿಕಾಂಡಗಳು, ತೆಂಗಿನ ಗರಿಗಳು ಮತ್ತು ತೆಂಗಿನ ಚಿಪ್ಪುಗಳು)ಇರುವವರಿಂದ ಉರುವಲನ್ನು ಕೊಂಡ ಸಂದರ್ಭಗಳು ಕಂಡು ಬಂದಿವೆ.

.ಈಗ ಮೊದಲು ಮಹಿಳೆಯರು ಮತ್ತು ಮಕ್ಕಳು ಉರುವಲು ಮತ್ತು ದನ ಮೇಯಿಸಲು ಹೋಗುತ್ತಿದ್ದರು ಪುರುಷರು ಉರುವಲು ಸಂಗ್ರಹಣೆ ಮತ್ತು ದನ ಮೇಯಿಸುವುದಕ್ಕಾಗಿ ಮೊದಲಿಗಿಂತಲೂ ಈಗ ಹೆಚ್ಚು ದೂರ ಹೋಗುವುದರಿಂದ, ಅವರ ಈಗಿನ ಸಮತೋಲನದಲ್ಲಿ ಗೊಂದಲ ಉಂಟಾಗಿದೆ. ಇದು ಕುಟುಂಬದ ಸಂಪಾದಿಸುವ ಸಾಮರ್ಥ್ಯಕ್ಕೂ ಮತ್ತು ಸಂಬಂಧಗಳಿಗೂ ಆತಂಕಕಾರಿಯಾಗಿದೆ.

**(ಹೆಂಗಸರು ಮತ್ತು ದನಕಾಯುವ ಹುಡುಗರು)** .

. ಕಿರು ಅರಣ್ಯ ಉತ್ಪನ್ನಗಳು, ಜೇನು ಇತ್ಯಾದಿಗಳಿಂದ ಆಗಿರುವ ನಷ್ಟದಿಂದ ಕೆಲವು ಕ್ಷೇತ್ರಗಳಲ್ಲಿ ಜಮೀನುರಹಿತರ ಮೇಲೆ ಪ್ರಭಾವ ಬೀರಿದೆ.

. ನ್ಯಾಯಕ್ಕೆ ಸಂಬಂಧಿಸಿದ ಹಲವು ವಿಚಾರಗಳು- ಅತಿಕ್ರಮಣಕಾರರನ್ನು ತೆಗೆಯುವುದು, ಮೇದರಿಗೆ ಬಿದಿರು ಹಿಸೆ ಕೊಡುವುದು ಮತ್ತು ಅರಣ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಉದ್ಯೋಗದ ನಷ್ಟ.

. ಒಂದು ಮುಖ್ಯ ಸಮಸ್ಯೆ ಎಂದರೆ ಅಕ್ಕಪಕ್ಕದ ಗ್ರಾಮಗಳಿಂದ ಒತ್ತಡ ಮತ್ತು ಇದರಲ್ಲಿ ಕ್ರಮ ಇಲ್ಲದಿರುವಿಕೆ. ಇದು ಇಲ್ಲಿನ ವಿ.ಎಫ್.ಸಿ.ಗಳ ಮೇಲೆ, ಅವರ ಜೆ.ಎಫ್.ಎಂ.ಕ್ಷೇತ್ರಗಳನ್ನು ನಿರ್ವಹಿಸಲು ತುಂಬಾ ಒತ್ತಡ ಬೀರುತ್ತಿದೆ.
. ಜನಗಳಿಂದ ಅವರ ಸಮಸ್ಯೆಗಳನ್ನು ಪರಿಹರಿಸಲು ಕ.ಅ.ಇ.ಮೇಲೆ ಅತಿ ಹೆಚ್ಚಿನ ಬೇಡಿಕೆ ಮತ್ತು ನಿರೀಕ್ಷಣೆ ಇದೆ. ಉದಾಃ ವಸತಿ, ಕುಡಿಯುವ ನೀರು, ಶಾಲೆ, ಸಾಗಣೆ, ಉದ್ಯೋಗ ಇತ್ಯಾದಿ (ಒಂದು ಸಮುದಾಯವು ಕ.ಅ.ಇ.ಯಿಂದ ದೋಣಿಯನ್ನು ನಿರೀಕ್ಷಿಸುತ್ತದೆ)

.ಪರ್ಯಾಯ ಶಕ್ತಿ ಕಾರ್ಯಕ್ರಮ ~~ಕೊಡಕನಲ್ಲಿ~~ ತೊಂದರೆಗಳು
- ಹೊಗೆರಹಿತ ಚೂಲಾಗಳು ಕೆಲಸ ಮಾಡುತ್ತಿಲ್ಲ
- ಬಯೋ ಅನಿಲ ಯಂತ್ರಗಳನ್ನು ಸ್ಥಾಪಿಸಿಲ್ಲ
- ಸೀಮೆಯೆಣ್ಣೆಗೆ ಏರ್ಪಾಡು ಇಲ್ಲದಿರುವುದು

. ದೊಡ್ಡ ಗ್ರಾಮಗಳಲ್ಲಿ ಯೋಜನೆಯನ್ನು ಜಾರಿಗೊಳಿಸಲು ಸಮುದಾಯ ವ್ಯವಸ್ಥೆಯ ಪೂರ್ವ ತಯಾರಿ ಇಲ್ಲದಿರುವುದು ಉದ್ವೇಗಗಳನ್ನು ಹೆಚ್ಚಿಸಿದೆ ಅಥವಾ ಕಾರ್ಯಕ್ರಮ ವಿಫಲತೆಗೆ ಕಾರಣವಾಗಿದೆ (ಉದಾ. ಕಾಂಗೋಡು, ಕಂಚೀಕೊಪ್ಪ)

. ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಶ್ರದ್ಧೆ ಮತ್ತು ನಂಬಿಕೆಯ ಪ್ರಮಾಣಗಳು ಅಗತ್ಯವಿದೆ. ಉದಾ. ಕಾಡಿನ ಉತ್ಪನ್ನಗಳ ಹಂಚಿಕೆ- ಸತಗೇರಿ ಮತ್ತು ಕಾಂಗೋಡಿನಲ್ಲಿ ವಾಗ್ದಾನ ಮಾಡಿದ್ದು, ಕಳ್ಳಸಾಗಾಣಿಕೆದಾರರನ್ನು ಹಿಡಿದುದಕ್ಕೆ ಬಹುಮಾನಗಳು, ಜೀವೋತ್ಪನ್ನಗಳ ಹಂಚಿಕೆ - ಕತ್ತರಿಸಿದ ರೆಂಬೆಗಳು, ಬಿದಿರು ಇತ್ಯಾದಿ, ಅಸ್ತ್ರಾ ಒಲೆಗಳು ಕೆಲಸ ಮಾಡುವುದು, ಕಿರು ಯೋಜನಾ ತಯಾರಿಕೆಯ ಸಮಯದಲ್ಲಿ ಗ್ರಾಮಗಳಲ್ಲಿ ಮಾಡಿದ ಒಪ್ಪಂದಗಳು ಇತ್ಯಾದಿ.

. ಜೆ.ಎಫ್.ಪಿ.ಎಂ. ಕಾರ್ಯಕ್ರಮ ಮತ್ತು ವಿ.ಎಫ್.ಸಿ. ಕಾರ್ಯ ರೀತಿಯ ರಚನೆ ಮತ್ತು ವಿಧಾನಗಳು ಸರಿಯಾಗಿವೆ. ಹಾಗಾದರೂ ಕಾರ್ಯಕ್ರಮದ ಬಗ್ಗೆ ತಿಳುವಳಿಕೆ ಕಡಿಮೆಯಾಗುತ್ತಿದೆ ಮತ್ತು ಕಾರ್ಯರೀತಿ, ನಿರ್ಧಾರ ಮಾಡುವುದು, ಲೆಕ್ಕಗಳ ಬಗ್ಗೆ ಮೇಲಿನಿಂದ (ವಿ.ಎಫ್.ಸಿ. ಮತ್ತು ಕ.ಅ.ಇ.) ಪಂಥಿಯವರೆಗೂ (ಜನರಲ್ ಬಾಡಿ, ಮಹಿಳೆಯರು, ಜಮೀನುರಹಿತ ಮತ್ತು ಇತರ ಗುಂಪುಗಳು) - ಇವು ಎಲ್ಲರಿಗೂ ತಿಳಿಯುವಂತಿಲ್ಲ. ಇದು ಕಾರ್ಯಕ್ರಮವನ್ನು ಬಲಹೀನಗೊಳಿಸುತ್ತದೆ ಮತ್ತು ಅನಾವಶ್ಯಕ ಉದ್ವೇಗಗಳನ್ನು ಸೃಷ್ಟಿಸುತ್ತದೆ.

. ಕ.ಅ.ಇ.ಯು ವಿ.ಎಫ್.ಸಿ.ಸದಸ್ಯರಿಗೆ ಗುಂಪು ಭಾವನೆಯಲ್ಲಿ ಮತ್ತು ಜೆ.ಎಫ್.ಪಿ.ಎಂ. ಚಟುವಟಿಕೆಯಲ್ಲಿ ತರಬೇತಿ ಕೊಡಲು ಒಳ್ಳೆಯ ಪ್ರಯತ್ನಗಳನ್ನು ಮಾಡಿದೆ.

. ಜೆ.ಎಫ್.ಪಿ.ಎಂ. ಕಾರ್ಯಕ್ರಮದ ಪರಿಣಾಮವನ್ನು, ಶಾಲೆ ಹಾಜರಿ, ಶಾಲೆ ಬಿಟ್ಟ ಹುಡುಗಿಯರು, ವಯಸ್ಕರ ಶಿಕ್ಷಣ ಕ್ಷೇತ್ರಗಳಲ್ಲಿ ನಿರ್ಧರಿಸಲು ಈಗ ~~ತುಂಬಾ ಬೇಗ~~ ಇನ್ನೂ ಸಮಯ ಬೇಕು. ಹಾಗಾದರೂ ಪ್ರಮುಖ ಪರಿಣಾಮ ಅರಣ್ಯ ರಕ್ಷಿಸಲು ಇಚ್ಛೆ ಮತ್ತು ಗುಂಪು ನಿರ್ವಹಣೆಯಲ್ಲಿ ಎಂದು ತೋರುತ್ತದೆ. ಅನಿರ್ಬಂಧಿತ ದುರುಪಯೋಗದಿಂದ ರಕ್ಷಣೆ ಮತ್ತು ಪುನರುತ್ಪಾದನೆಗೆ ಬದಲಾವಣೆಗಳು. ಅಗತ್ಯವಿದೆ

. ನ್ಯಾಯ, ಉದ್ಯೋಗ ಮತ್ತು ಜೀವನೋಪಾಯಗಳನ್ನು ಹೆಚ್ಚಿಸುವುದು- ಮಹಿಳೆಯರು, ಬುಟ್ಟಿ ಹೆಣೆಯುವವರು, ಕುಂಬಾರರು, ಮೂಲಿಕೆ ವೈದ್ಯರು ಮತ್ತು ವಿಶೇಷವಾಗಿ ಜಮೀನುರಹಿತರು- ಇವರ ಅಭಿವೃದ್ಧಿಗೆ ಕಾರ್ಯಕ್ರಮದಲ್ಲಿ ವಿಶೇಷ ಯೋಜನೆ ಕಾಣುವುದಿಲ್ಲ.

.ಕ್ಷೇತ್ರ ಸಿಬ್ಬಂದಿಯರಿಗೆ ಕಾಣುವ ಒತ್ತಡ (ರಕ್ಷಕರು, ಅರಣ್ಯಕರು ಮತ್ತು ವೀಕ್ಷಕರು)

-ಕ್ಷೇತ್ರಗಳ ಭೇಟಿಗೂ, ಮೇಲ್ವಿಚಾರಣೆಗೂ ಮತ್ತು ವಿ.ಎಫ್.ಸಿ/ಸಮುದಾಯದೊಡನೆ ತೀವ್ರವಾಗಿ ಕಲೆತು ಕೆಲಸ ಮಾಡಲು ಬೇಕಾದ ಸಾಗಣೆ ಅನುಕೂಲ ಇಲ್ಲದಿರುವುದು

-ಜೆ.ಎಫ್.ಪಿ.ಎಂ. ಚಟುವಟಿಕೆಗೆ ಕೊಡುವ ಪ್ರಾಮುಖ್ಯತೆ ಬೇರೆ ಅರಣ್ಯ ಚಟುವಟಿಕೆಗಳಿಗಿಂತ ಕಡಿಮೆ.

. ಕಿರು ಯೋಜನೆಗಳು- ನಿರಂತರ ಮತ್ತು ಖಡ್ಡಾಯಬದ್ಧವಾಗಿರುವ ಕಾರಣಮತ್ತು ಪ್ರತಿಕ್ರಿಯೆಗೆ ಅವಕಾಶವಿದೆಯೇ? (ಉದಾ. ವರ್ಗಗಳ ಆಯ್ಕೆ, ಕ್ಷೇತ್ರಗಳ ಆಯ್ಕೆ, ಜವಾಬ್ದಾರಿಗಳ ಹಂಚಿಕೆ)

. ಕಾರ್ಯ ನಿರ್ವಚನೆ ಮತ್ತು ಪಾತ್ರಗಳ ಸ್ಪಷ್ಟತೆ - ನಿಜವಾದ ಸಾರಾಂಶ ಏನು? ಕ.ಅ.ಇ.ಯ ಪಾತ್ರವೇನು? ಸಮುದಾಯ ವ್ಯವಸ್ಥೆಗಾಗಿಯೇ? ಬಡತನ ನಿರ್ಮೂಲನಕ್ಕಾಗಿಯೇ? ಸಾಮಾನ್ಯ/ಸಮಗ್ರ ಗ್ರಾಮ ಅಭಿವೃದ್ಧಿಗಾಗಿಯೇ? ಇಲ್ಲದಿದ್ದಲ್ಲಿ ಈ ಅಂಶಗಳನ್ನು ಯಾರು ಯಾರಿಗೆ ತಿಳಿಸಬೇಕು?

## ಸಮೀಕ್ಷೆ

ಅಧ್ಯಯನ ತಂಡವು ಈಗ ತಿಳಿದ ಅಂಶಗಳ ಬಗ್ಗೆ ವಿಶಾಲವಾದ ವರದಿ ಬರೆಯುವ ಕಾರ್ಯದಲ್ಲಿದೆ. ಇದು ಕೆಲವು ಅಧ್ಯಯನ ಉದಾಹರಣೆಗಳ ತಯಾರಿಯನ್ನು ಒಳಗೊಂಡಿರುತ್ತದೆ. ಕೆನರಾ ಮತ್ತು ಶಿವಮೊಗ್ಗಾ ವೃತ್ತಗಳಲ್ಲಿ ಕ್ಷೇತ್ರದ ಸಿಬ್ಬಂದಿಯೊಡನೆ ಪರಸ್ಪರ ವಿನಿಮಯ ಇನ್ನೂ ಆಗಬೇಕಾಗಿದೆ ಮತ್ತು ವಿವಿಧ ಗುಂಪುಗಳ ಕಾರ್ಯ ಅವಸರದಿಂದ ಇದು ಜುಲೈ ಸುಮಾರಿಗೆ ಪೂರ್ಣವಾಗಬಹುದು. ಜುಲೈ ಕೊನೆಗೆ ಕೊನೆಯ ವರದಿ ಸಿದ್ಧವಾಗಬಹುದೆಂಬ ನಿರೀಕ್ಷೆ ಇದೆ.

ಈ ಅಧ್ಯಯನ ನಡೆಸಲು ಅವಕಾಶ ಮಾಡಿ ಕೊಟ್ಟದ್ದಕ್ಕಾಗಿ ಕರ್ನಾಟಕ ಅರಣ್ಯ ಇಲಾಖೆಗೂ, ಡಿ.ಎಫ್.ಐ.ಡಿ ಮತ್ತು ಹಲವಾರು ಎನ್.ಜಿ.ಒ.ಗಳಿಗೂ, ಕಾರ್ಯಕ್ರಮದಲ್ಲಿ, ಸೇರಿದ ಸಮುದಾಯಗಳಿಗೂ ಔಟ್‌ರೀಚ್ ವಂದನೆ ಸಲ್ಲಿಸುತ್ತದೆ. ಪರಸ್ಪರ ವಿನಿಮಯಗಳು ತುಂಬಾ ವೈಚಾರಿಕವಾಗಿದ್ದುವು ಮತ್ತು ಕಂಡುಬಂದ ಅಂಶಗಳು ಕಾರ್ಯಕ್ರಮಕ್ಕೆ ವಿಶೇಷವಾಗಿ ಒಳಗೊಂಡ ಸಮುದಾಯಗಳಿಗೆ ಉಪಯೋಗವಾಗುವುದೆಂಬ ಭರವಸೆ ತಾಳಿದ್ದೇವೆ.

ಔಟ್‌ರೀಚ್ ತಂಡ

- Layout of study report
- How actually you present the details?

→ ~~Points~~/ what are the criterias for assessing social change?

What are your criteria for assessing the social change/Social impacts?

What is the opinion of villagers?

awareness

→ Conservation for the sake of benefits

→ or

Conservation for the sake of

Conservation of Ecology.

Protection VP?

PSK F1

# ಪುರುಷೋತ್ತಮರಾವ್ ಕೃಷಿ ಸಂಶೋಧನಾ ಪ್ರತಿಷ್ಠಾನ, ತೀರ್ಥಹಳ್ಳಿ
## ಕೃಷಿ ಪ್ರಯೋಗ ಪರಿವಾರ, ಕರ್ನಾಟಕ

ಸಾಂಪ್ರದಾಯಿಕ ಬೀಜಗಳನ್ನು ಸಂರಕ್ಷಿಸಿ, ಸಂವರ್ಧಿಸಿದ

**ಶ್ರೀ ಬಿ. ಕೆ. ದೇವರಾವ್**

ಅಮ್ಮೆಮನೆ, ಮಿತ್ತಬಾಗಿಲುಗ್ರಾಮ, ಬೆಳ್ತಂಗಡಿ ತಾಲ್ಲೂಕು, ಅವರಿಗೆ

## ಪುರುಷೋತ್ತಮ ಸನ್ಮಾನ

ಅಧ್ಯಕ್ಷತೆ : **ಶ್ರೀ ಎಸ್. ಆರ್. ರಂಗಮೂರ್ತಿ**
ಅಧ್ಯಕ್ಷರು, ಕ್ಯಾಂಪ್ಕೋ ಲಿ., ಮಂಗಳೂರು

ಮುಖ್ಯ ಅತಿಥಿಗಳು : **ಶ್ರೀಮತಿ ವನಜಾ ರಾಮ್ ಪ್ರಸಾದ್**
ಮುಖ್ಯಸ್ಥರು, ಗ್ರೀನ್ ಪ್ರತಿಷ್ಠಾನ, ಬೆಂಗಳೂರು

| | |
|---|---|
| ಸ್ಥಳ : | ಕಾಶೀನಾಥ ಕಲಾ ಮಂದಿರ, ಬೊಮ್ಮರಸಯ್ಯನ ಅಗ್ರಹಾರ, ತೀರ್ಥಹಳ್ಳಿ<br>✆ 28663 |
| ದಿನಾಂಕ: | ಕಲಿಯುಗಾಬ್ದ 5102, ವಿಕ್ರಮ ಸಂವತ್ಸರ, ಭಾದ್ರಪದ ಬಹುಳ ಪಂಚಮಿ<br>18-09-2000, ಸೋಮವಾರ |
| ಸಮಯ : | ಬೆಳಗ್ಗೆ 10-30ರಿಂದ |

## ತಮಗೆಲ್ಲರಿಗೂ ಆದರದ ಸ್ವಾಗತ

ವಿಶ್ವಸ್ತ ಬಳಗ
ಕೃಷಿ ಪ್ರಯೋಗ ಪರಿವಾರ

ಶ್ರೀಮತಿ ಶಾಂತಾ ಪುರುಷೋತ್ತಮರಾವ್
ಅಧ್ಯಕ್ಷರು ಹಾಗೂ ಸದಸ್ಯರು
ಪುರುಷೋತ್ತಮರಾವ್ ಕೃಷಿ ಸಂಶೋಧನಾ ಪ್ರತಿಷ್ಠಾನ
ತೀರ್ಥಹಳ್ಳಿ

"ಕೃಷಿ ನಿವಾಸ", ಕುರುವಳ್ಳಿ, ತೀರ್ಥಹಳ್ಳಿ-577 432 ✆ 28340 (08181)

## ಕಾರ್ಯಕ್ರಮ

| | | |
|---|---|---|
| ಬೆಳಗ್ಗೆ | 10-00 | ನೋಂದಣಿ |
| ಬೆಳಗ್ಗೆ | 10-30 | ಸನ್ಮಾನ ಸಮಾರಂಭ |
| ಮಧ್ಯಾಹ್ನ | 12-30ರಿಂದ 2-00 | ಭೋಜನ |
| ಮಧ್ಯಾಹ್ನ | 2-00ರಿಂದ 3-30 | ''ಕಳೆದುಕೊಳ್ಳುತ್ತಿರುವ ಬೀಜ ಸ್ವಾತಂತ್ರ್ಯ''<br>ವಿಶೇಷ ಉಪನ್ಯಾಸಗಳು ಮತ್ತು ಸಂವಾದ |
| ಮಧ್ಯಾಹ್ನ | 3-30ರಿಂದ 4-30 | ''ಮಳೆ ನಕ್ಷತ್ರಗಳು - ಮಳೆ ಹಾಗೂ ಬೆಳೆ''<br>ಶ್ರೀ ಶೇಷಗಿರಿರಾವ್, ಪಾವಗಡ ಇವರಿಂದ |

## ಪ್ರದರ್ಶಿನಿ

ಸಾಂಪ್ರದಾಯಿಕ ಬೀಜಗಳು ಮತ್ತು ಮಾಹಿತಿ, ಸಾವಯವ ಕೃಷಿ ಸಂಬಂಧಿ ಪುಸ್ತಕಗಳು, ಶಿಖರಿಣಿ, ಸಾವಯವ ಕೃಷಿ ಉತ್ಪನ್ನಗಳು, ಅರಿಶಿನ-ಕುಂಕುಮ ಇತ್ಯಾದಿಗಳ ಪ್ರದರ್ಶನ ಹಾಗೂ ಮಾರಾಟ.

◻ ಗಣಿಗಾರಿಕೆಯಿಂದಾಗಿ ಮಳೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಕಡಿಮೆಯಾಗಿದೆ.

**ಹಾದಿಯುದ್ದಕ್ಕೂ ಅಪಾಯಗಳ ಸರಮಾಲೆ**

ಹೀಗೆ ತನ್ನ ಉಗಮ ಸ್ಥಾನದಲ್ಲೇ ಅಪಾಯಕ್ಕೆ ಒಳಗಾದ ತುಂಗ-ಭದ್ರ ನದಿಗಳು ಹಾದಿಯುದ್ದಕ್ಕೂ ಅನೇಕ ರೀತಿಯ ಮಾಲಿನ್ಯಕ್ಕೆ ತುತ್ತಾಗಿವೆ. ಭದ್ರಾವತಿಯ ಎಂಪಿಎಂ ಮತ್ತು ವಿಐಎಸ್ ಎಲ್ ಕಾರ್ಖಾನೆಗಳು ಭದ್ರೆಯನ್ನು ಹೊಲಸು ಚರಂಡಿ ಮಾಡಿವೆ. ಹರಿಹರ ಪಾಲಿ ಫೈಬರ್ಸ್ ಕಂಪನಿಯಂತೂ ನದಿಗೆ ನೇರ ವಿಷಪ್ರಾಶನ ಮಾಡಿಸುತ್ತಿದೆ. ಅಲ್ಲದೇ ಜಲಾನಯನ ಪ್ರದೇಶದುದ್ದಕ್ಕೂ ಹೆಚ್ಚುತ್ತಿರುವ ಅರಣ್ಯ ನಾಶವು ಅನೇಕ ಜಲಮೂಲಗಳನ್ನು ಬತ್ತಿಸಿವೆ.

**ವಿದೇಶಿಯರ ಮೋಜಿಗೆ ಆದಿವಾಸಿಗಳ ಮೇಲೆ ಸವಾರಿ**

ಕುದುರೆಮುಖ ಗಣಿಗಾರಿಕೆಯು ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಬಂದರೂ ಅದನ್ನು ಸರ್ಕಾರ ಡಿ[illegible]ಟಿಪ್ಪೆ ಮಾಡಿ ವಿದೇಶಿಯರಿಗೆ ಮಾರಲು ಹೊರಟಿದೆ. ತಲೆತಲಾಂತರದಿಂದ ಇಲ್ಲೇ ಹುಟ್ಟಿ ಬೆಳೆದ ಅಲ್ಲಿನ ರೈತ ಗಿರಿಜನರನ್ನು ಒಕ್ಕಲೆಬ್ಬಿಸಲು ಎಲ್ಲಾ ಸಿದ್ಧತೆ ನಡೆದಿದೆ. ಅಂದರೆ ಈ ಸರ್ಕಾರಗಳು ಸ್ಥಳೀಯ ಜನರ ಬದುಕುವ ಹಕ್ಕನ್ನೂ ನಿರಾಕರಿಸಿ ವಿದೇಶಿಯರಿಗೆ ಮಣೆ ಹಾಕುವ ದಲ್ಲಾಳಿಯಂತೆ ವರ್ತಿಸುತ್ತಿರುವುದು ಪ್ರಜಾಪ್ರಭುತ್ವದ ಹೇಯಕೃತ್ಯವಾಗಿದೆ. ಆದ್ದರಿಂದ ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆ ರದ್ದಾಗಲೇಬೇಕು.

**ಡಾಲರ್‌ಗಳ ದುರಾಸೆಯಲ್ಲಿ**

ಸರ್ಕಾರ ಇಷ್ಟೆಲ್ಲಾ ಅನಾಹುತಗಳ ನಡುವೆ ನಡೆಸುತ್ತಿರುವ ಈ ಗಣಿಗಾರಿಕೆಯಿಂದ ಬರುವ ಏಕೈಕ ಲಾಭವೆಂದರೆ (ಸರ್ಕಾರಿ ನಾಲಗೆಯಲ್ಲಿ) ಡಾಲರ್ ಗಳಿಕೆ - ವಿದೇಶಿ ವಿನಿಮಯ. ತುಂಗಭದ್ರಾ ನದಿಯು ಕರ್ನಾಟಕದಲ್ಲೇ 15 ಲಕ್ಷ ಎಕರೆ ಭೂಮಿಗೆ ನೇರ ನೀರಾವರಿ ಸೌಲಭ್ಯ ಕಲ್ಪಿಸುತ್ತಿದೆ. ಅಲ್ಲದೆ ನೆರೆಯ ಆಂಧ್ರಪ್ರದೇಶದಲ್ಲೂ ಲಕ್ಷಾಂತರ ಎಕರೆ ಭೂಮಿಗೆ ತುಂಗಭದ್ರೆಯ ನೀರೇ ಆಸರೆಯಾಗಿದೆ. ನದಿ ತಟದಲ್ಲಿ ಬೆಳೆವ ಭತ್ತ, ಕಬ್ಬು, ಅಡಿಕೆ, ಕಾಫಿ, ಟೀ, ಏಲಕ್ಕಿ ಕಾಳುಮೆಣಸು ಇವು ತಂದುಕೊಡುವ ವಿದೇಶಿ ವಿನಿಮಯ ಎಷ್ಟು? ಸರ್ಕಾರಿ ಲೆಕ್ಕದ ಪ್ರಕಾರ ಒಂದು ಎಕರೆ ನೀರಾವರಿಯನ್ನು ಆಶ್ರಯಿಸಿ ಐದು ಮಂದಿ ಬದುಕಬಹುದಾದರೆ ಕನಿಷ್ಠ 70-80 ಲಕ್ಷ ಜನ ನದಿಯನ್ನೇ ಆಶ್ರಯಿಸಿ ಬದುಕುವರೆಂದಾಯಿತು. ಇನ್ನು ಇದರ ಸುತ್ತ ನಡೆಯುವ ವ್ಯಾಪಾರ, ವಾಣಿಜ್ಯ ಕೈಗಾರಿಕೆಗಳು ಒಟ್ಟಾರೆ ಜನಜೀವನಕ್ಕೆ ನೀಡುವ ಆಧಾರ ಯಾವ ಕಾರ್ಖಾನೆಯೂ ನೀಡಲಾರದು. ತುಂಗಭದ್ರ ಪ್ರಕೃತಿಯೇ ನಿರ್ಮಿಸಿದ ಜೀವಂತ ಕಾರ್ಖಾನೆ. ಯಾವ ಡಾಲರ್‌ನಿಂದಲೂ ಇದರ ಬೆಲೆ ಕಟ್ಟಲಾಗದು. ಸರ್ಕಾರ ಕೆಐಒಸಿಎಲ್ ಕಾರ್ಮಿಕರ ಪ್ರಶ್ನೆಯನ್ನು ಮುಂದಿಟ್ಟು ನಾಟಕವಾಡುವ ಬದಲು ಗಣಿಗಾರಿಕೆ ನಿಲ್ಲಿಸಿ ಕಾರ್ಮಿಕರಿಗೆ ಪ[illegible]ರ್ಯಾಯ ಉದ್ಯೋಗಾವಕಾಶ ಕಲ್ಪಿಸಬೇಕು.

**ಬಂಧುಗಳೇ,**

ನಮ್ಮೆಲ್ಲರ ಜೀವನಾಡಿಯಾದ ತುಂಗ-ಭದ್ರೆಯ ನಾಶವೆಂದರೆ ಈ ನಾಡಿನ ಸರ್ವನಾಶವೇ ಸರಿ. ಹೀಗೆ ಕಳೆದ 32 ವರ್ಷಗಳಿಂದ ನಮ್ಮ ನಾಡಿನ ಅಮೂಲ್ಯ ಭೂಗರ್ಭವನ್ನು ಬಗೆದು ಸಾಮ್ರಾಜ್ಯಶಾಹಿಗಳ ಹೊಟ್ಟೆತುಂಬಿಸಿದ ಈ ಜನವಿರೋಧಿ ಯೋಜನೆಯನ್ನು ಈ ಕೂಡಲೇ ನಿಲ್ಲಿಸದಿದ್ದರೆ ಧರೆ ಹತ್ತಿ ಉರಿದೀತು, **ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೇ, ಧರೆ ಹತ್ತಿ ಉರಿದೊಡೆ ನಿಲ್ಲಬಹುದೆ?** ಆದ್ದರಿಂದ ಕಳೆದ ವರ್ಷವೇ ತನ್ನ ಲೆಸನ್ಸ್ ಅವಧಿ ಮುಗಿಸಿದ ಕೆಐಒಸಿಎಲ್ ಕಂಪನಿಗೆ ಒಂದು ವರ್ಷ ವಿಸ್ತರಣಾ ಲೆಸನ್ಸ್ ಕೊಟ್ಟಿರುವುದೇ ಸರ್ಕಾರದ ಜನದ್ರೋಹವಾಗಿದೆ. ಆದರೆ ಈಗ ಮತ್ತೆ ಅದನ್ನು 20 ವರ್ಷಗಳಿಗೆ ವಿಸ್ತರಿಸುವ ಸಂಚು ನಡೆದಿದೆ. 1994 ರಿಂದಲೂ ನದಿ ಪಾತ್ರದ ಎಲ್ಲಾ ಜಿಲ್ಲೆಗಳ ಜನತೆ

ಗಣಿಗಾರಿಕೆ ರದ್ದುಮಾಡುವಂತೆ ಒತ್ತಾಯಿಸಿ ನಿರಂತರ ಪ್ರತಿಭಟನೆ ಮಾಡುತ್ತಲೇ ಇದ್ದರೂ, ಸರ್ಕಾರ ಪಂಚೇಂದ್ರಿಯಗಳನ್ನು ಬಂದ್ ಮಾಡಿ ಕುಳಿತಿದೆ. ಆದ್ದರಿಂದ ತುಂಗ-ಭದ್ರೆಯ ಉಳಿವಿಗೆ ಗಂಡಾಂತರಕಾರಿಯಾಗಲಿರುವ ಈ ಯೋಜನೆಯ ವಿರುದ್ಧ ನಾಡಪ್ರೇಮಿಗಳು, ಪರಿಸರ ಪ್ರೇಮಿಗಳು ಬಲವಾದ ಹೋರಾಟ ಕಟ್ಟಬೇಕಿದೆ. ಎಲ್ಲ ಭೇದ ಮರೆತು ಒಕ್ಕೊರಲ ಪ್ರತಿಭಟನೆ ಸೂಚಿಸಲು ಬನ್ನಿ.

- ಕುದುರೆಮುಖ ಗಣಿಗಾರಿಕೆ ರದ್ದಾಗಲಿ ; ಕಾರ್ಮಿಕರಿಗೆ ಪರ್ಯಾಯ ವ್ಯವಸ್ಥೆಯಾಗಲಿ
- ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳನ್ನು ಒದ್ದೋಡಿಸಿ
- ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆ ರದ್ದಾಗಲಿ.

## ತುಂಗ-ಭದ್ರ ಉಳಿಸಿ ಹೋರಾಟ ಒಕ್ಕೂಟ

ಡಿಸೆಂಬರ್ 23ರಿಂದ ಜನವರಿ 2ರವರೆಗೆ ನದಿ ತೀರದ ಊರುಗಳಲ್ಲಿ ಕಾಲ್ನಡಿಗೆ ಜಾಥಾ

**2ನೇ ಜನವರಿ 2001 ಮಂಗಳವಾರ**

### ಶಿವಮೊಗ್ಗದಲ್ಲಿ ತುಂಗಭದ್ರ ತೀರದ ಜನತೆಯ ಸಮಾವೇಶ

(ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಬಳ್ಳಾರಿ, ರಾಯಚೂರು, ಕೊಪ್ಪಳ)

## ಬೃಹತ್ ಪ್ರತಿಭಟನಾ ರ್‍ಯಾಲಿ

ಉದ್ಘಾಟನೆ : ಪೊನ್ನಮ್ಮಾಳ್
ಸಮಾಜವಾದಿ ಹೋರಾಟಗಾರರು, ಶಿವಮೊಗ್ಗ

ಬೆಳಿಗ್ಗೆ 11 ಗಂಟೆಗೆ ನಗರದ ಸೈನ್ಸ್ ಮೈದಾನದಿಂದ ರ್‍ಯಾಲಿಯ ಆರಂಭ. ನಗರದ ಪ್ರಮುಖ ಬೀದಿಗಳಲ್ಲಿ ರ್‍ಯಾಲಿ ನಡೆಸಿ ನಂತರ ಸೈನ್ಸ್ ಮೈದಾನದಲ್ಲಿ ತುಂಗ-ಭದ್ರ ತೀರದ ಜನತೆಯ ಸಮಾವೇಶ

**ಬಹಿರಂಗ ಸಭೆ : ಮಧ್ಯಾಹ್ನ 3 ಗಂಟೆಗೆ**


ಪ್ರಸ್ತಾವನೆ : ಕೆ.ಪಿ.ಶ್ರೀಪಾಲ, ಸಿ ಎಲ್ ಎಫ್, ಶಿವಮೊಗ್ಗ

ಭಾಷಣಕಾರರು : ಚೌಧುರಿ ಮಹೇಂದ್ರ ಸಿಂಗ್ ಟಿಕಾಯತ್
ರಾಷ್ಟ್ರೀಯ ಅಧ್ಯಕ್ಷರು, ಭಾರತೀಯ ಕಿಸಾನ್ ಯೂನಿಯನ್, ನವದೆಹಲಿ.
ಪ್ರೊ. ನಂಜುಂಡಸ್ವಾಮಿ ರಾಜ್ಯಾಧ್ಯಕ್ಷರು,
ಕರ್ನಾಟಕ ರಾಜ್ಯ ರೈತ ಸಂಘ, ಬೆಂಗಳೂರು
ಡಾ.ನಿ.ಮುರಾರಿ ಬಲ್ಲಾಳ ಪ್ರಾಧ್ಯಾಪಕರು, ಮಾಹೆ - ಮಣಿಪಾಲ್
ಪಾಂಡುರಂಗ ಹೆಗಡೆ ಪರಿಸರವಾದಿಗಳು, ಶಿರಸಿ
ಕಲ್ಕುಳಿ ವಿಠ್ಠಲ ಹೆಗ್ಡೆ ಒಕ್ಕೂಟದ ಅಧ್ಯಕ್ಷರು, ಶೃಂಗೇರಿ
ಕಡಿದಾಳು ಶಾಮಣ್ಣ ರೈತ ಮುಖಂಡರು, ಭಗವತಿಕೆರೆ
ಎಸ್.ಸುಂದರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ, ಶಿವಮೊಗ್ಗ

ಅಧ್ಯಕ್ಷತೆ : ಕೆ.ವಿ.ಸುಬ್ಬಣ್ಣ ಮ್ಯಾಗ್ಸೆಸ್ಸೆ ಪ್ರಶಸ್ತಿ ವಿಜೇತರು, ನೀನಾಸಂ, ಹೆಗ್ಗೋಡು

ತುಂಗ-ಭದ್ರ ಉಳಿಸಿ ಸಮಾವೇಶಕ್ಕೆ ಸಾವಿರಾರು ಸಂಖ್ಯೆಯಲ್ಲಿ ಬನ್ನಿ

ಎಚ್ಚರ! ತುಂಗ ಭದ್ರೆಯ ನಾಶ ಕುಡಿಯುವ ನೀರಿಗೆ ಹಾಹಾಕಾರ!!!



## ಏಳಿ ! ಎದ್ದೇಳಿ ! ತುಂಗ-ಭದ್ರೆಯ ರಕ್ಷಣೆಗೆ ಮುಂದಾಗಿ ಕುದುರೆಮುಖ ಗಣಿಗಾರಿಕೆ ನಿಲ್ಲಿಸಲು ಒಂದಾಗಿ

# ತುಂಗ-ಭದ್ರ ತೀರದ ಜನತೆಯ ಸಮಾವೇಶ

ಆತ್ಮೀಯ ನಾಡ ಬಾಂಧವರೇ,

ತುಂಗಭದ್ರೆಯ ತೀರದ ಜನರಾದ ನಮಗೆಲ್ಲಾ ಈ ನದಿ ತಾಯಿ ಸಮಾನ. ಪಶ್ಚಿಮ ಘಟ್ಟದ ಕುದುರೆಮುಖ ಶ್ರೇಣಿಯಲ್ಲಿ ಉಗಮವಾಗುವ ತುಂಗಭದ್ರೆ ವರ್ಷಪೂರ್ತಿ ಹರಿದು ಶತಮಾನಗಳಿಂದಲೂ ಈ ನಾಡಿನ ಮಕ್ಕಳ ಹಸಿವನ್ನು ಇಂಗಿಸುತ್ತಿದ್ದಾಳೆ. ಸ್ವಾತಂತ್ರ್ಯ ಬಂದು 53 ವರ್ಷಗಳ ನಂತರವೂ ಹಳ್ಳಿ ಹಳ್ಳಿಗಳಿಗೆ ಕನಿಷ್ಟ ಕುಡಿಯುವ ನೀರನ್ನು ಒದಗಿಸಲು ಯೋಗ್ಯತೆಯಿಲ್ಲದ ಇಲ್ಲಿನ ಸರ್ಕಾರಗಳು ಪ್ರಕೃತಿದತ್ತ ನೀರಿನ ಆಸರೆಯಾದ ಈ ನದಿ ಮೂಲಕ್ಕೆ ಸಂಚಕಾರ ತರಲು ಹೊರಟಿರುವುದು ಅತ್ಯಂತ ಆತಂಕಕಾರಿಯಾಗಿದೆ! 1994ರಲ್ಲಿ ತುಂಗಾ ಮೂಲದ ಗಂಗಡಿಕಲ್ಲು ಗುಡ್ಡದಲ್ಲಿ ಸರ್ಕಾರ ಗಣಿಗಾರಿಕೆಗೆ ಪರವಾನಿಗೆ ನೀಡಿದಾಗ ನದಿ ತೀರದ ಜನರೆಲ್ಲಾ 'ತುಂಗಾ ಮೂಲ ಉಳಿಸಿ ಹೋರಾಟ ಒಕ್ಕೂಟ'ದಡಿ ಒಂದಾಗಿ ಪ್ರತಿಭಟಿಸಿದ ನಂತರ ಜನಾಭಿಪ್ರಾಯಕ್ಕೆ ಮಣಿದ ಸರ್ಕಾರ ಗಣಿಗಾರಿಕೆಯ ಪ್ರಸ್ತಾವನೆಯನ್ನು ಹಿಂದಕ್ಕೆ ಪಡೆದಿತ್ತು.

ಆದರೆ ಜಾಗತೀಕರಣದ ಈ ಸಂದರ್ಭದಲ್ಲಿ ಖಾಸಗೀಕರಣದ ಗಾಳಿ ಬಲವಾಗಿ ಬೀಸುತ್ತಿರುವಾಗ ವಿದೇಶಿ ಕಂಪನಿಗಳ ಹದ್ದಿನ ಕಣ್ಣಿಗೆ ತುಂಗಭದ್ರಾ ಪರ್ವತ ಶ್ರೇಣಿ ಮತ್ತೊಮ್ಮೆ ಗುರಿಯಾಗಿದೆ. ಇದೇ ಡಿ.13ರಂದು ನವದೆಹಲಿಯಲ್ಲಿ ಉಕ್ಕು ಖಾತೆ ಸಚಿವ ಕೆ. ಕೆ. ತ್ರಿಪಾಠಿ ಅವರು ಹೇಳಿಕೆ ನೀಡಿ ಕುದುರೆಮುಖ ಗಣಿಗಾರಿಕೆ ವಿಸ್ತರಿಸುವ ಸಲುವಾಗಿ ಕೆಐಓಸಿಎಲ್ ಕಂಪನಿಯ ಗಣಿಗಾರಿಕೆಯ ಅವಧಿ ಮುಗಿದಿದ್ದರೂ ಪರವಾನಿಗೆಯನ್ನು ನವೀಕರಿಸಿ ಮತ್ತೆ 20 ವರ್ಷಗಳ ಕಾಲ ಗಣಿಗಾರಿಕೆಗೆ ಅನುಮತಿ ನೀಡಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ ಎಂಬುದನ್ನು ಖಚಿತಪಡಿಸಿದ್ದಾರೆ.

**ಗಣಿಗಾರಿಕೆಯ ದೈತ್ಯನಿಗೆ ನಮ್ಮ ಮಾರಾಟ !**

'ಮನೆ ಸುಟ್ಟು ಇದ್ದಿಲು ಮಾರುವ' ಡಬ್ಲ್ಯುಟಿಓ ಒಪ್ಪಂದದಂತೆ ಎಲ್ಲವನ್ನೂ ಖಾಸಗಿಯವರಿಗೆ ಮಾರಲು ಹೊರಟಿರುವ ಸರ್ಕಾರ ಈಗ ಜರ್ಮನ್ ಕನ್ಸಲ್ಟೆನ್ಸಿಯೊಂದಿಗೆ ಕುದುರೆಮುಖ ಅದಿರು ಕಂಪನಿ (ಕೆಐಓಸಿಎಲ್) ಯನ್ನು ಜಪಾನ್‌ನ ದೊಡ್ಡ ಸ್ಟೀಲ್ ಕಂಪನಿಯಾದ ನಿಪ್ಪಾನ್ ಸ್ಟೀಲ್ ಕಂಪನಿಗೆ ಮಾರಲು ಹೊರಟಿದೆ. ಗಣಿಗಾರಿಕೆಯ ಈ ಮಾರಾಟವನ್ನು ಮತ್ತಷ್ಟು ಆಕರ್ಷಕವಾಗಿಸಲು ಈಗಾಗಲೇ ಗಣಿಗಾರಿಕೆ ನಡೆಸುತ್ತಿರುವ 6,800 ಹೆಕ್ಟೇರ್ ಪ್ರದೇಶದಲ್ಲಿ ಆಳ ಗಣಿಗಾರಿಕೆ, ಗಂಗಡಿಕಲ್ಲು ಮತ್ತು ನೆಲ್ಲಿಬೀಡುಗಳಿಗೂ ಗಣಿಗಾರಿಕೆಯ ವಿಸ್ತರಣೆ, ಲಕ್ಯಾ ಡ್ಯಾಂನ ಹೂಳಿನಿಂದ ಕಬ್ಬಿಣ ಪರಿಷ್ಕರಣೆ ಮುಂತಾದವನ್ನು ಸೇರಿಸಿ ಗಣಿಗಾರಿಕೆಯ ಅವಧಿಯನ್ನು 20 ವರ್ಷಗಳವರೆಗೆ ನಡೆಸಲು ಎಲ್ಲಾ ಯೋಜನೆಗಳೂ ಸಿದ್ಧವಾಗಿವೆ.

**ಕುದುರೆಮುಖ ಗಣಿಗಾರಿಕೆ ಲಾಭವೇನು ?**

ಕಳೆದ 30 ವರ್ಷಗಳಿಂದ ನಿರಂತರವಾಗಿ ನಮ್ಮ ಸಮೃದ್ಧ ಪರಿಸರವನ್ನು ಬಗೆದು ತೆಗೆದ ಕುದುರೆಮುಖದ ಕಬ್ಬಿಣದ ಅದಿರನ್ನು ಕೆಐಓಸಿಎಲ್ ಶೇ.100ರಷ್ಟು ವಿದೇಶಗಳಿಗೆ ರಫ್ತು ಮಾಡಿದೆಯೇ ವಿನಃ ಈ ನಾಡಿನ ರೈತನ ನೇಗಿಲ ಕುಳಕ್ಕೂ ಒಂದು ತುಂಡು ಕಬ್ಬಿಣ ಉಪಯೋಗವಾಗಿಲ್ಲ. ಅಲ್ಲದೇ

ಕಂಪನಿಯು ಈ ಭಾಗದ ಪರಿಸರಕ್ಕೆ ,ಸುತ್ತಲಿನ ನದಿಗಳಿಗೆ ಮಾಡಿರುವ ಹಾನಿ ಅಪಾರವಾದದ್ದು. ಅದರ ಕೆಲವು ಮುಖ್ಯಾಂಶಗಳನ್ನು ನೋಡಿ :

□ ಭೂಮಿಯ 18 ಮುಖ್ಯ ಜೀವ ವೈವಿಧ್ಯ ಕೇಂದ್ರ( Ecological Hot Spot)ಗಳಲ್ಲಿಒಂದಾದ ಪಶ್ಚಿಮ ಘಟ್ಟದ 6,000 ಎಕರೆ ಸಮೃದ್ಧ ಅರಣ್ಯ ಪ್ರದೇಶದ ನಾಶ .

□ ಗಣಿಗಾರಿಕೆಯ ಹೂಳು ತಡೆಯಲು ನಿರ್ಮಿಸಿದ ಲಕ್ಯಾ ಡ್ಯಾಂ ಅನೇಕ ಸಾರಿ ಒಡೆದಿದ್ದರಿಂದ ಇದುವರೆಗೆ 40ಕ್ಕೂ ಹೆಚ್ಚು ಜನ ಸಾವೀಗೀಡಾಗಿದ್ದಾರೆ.

□ ಗಣಿಗಾರಿಕೆಯ ಹೂಳಿನಿಂದಾಗಿ ಭದ್ರಾ ನದಿಯು ಸಂಪೂರ್ಣವಾಗಿ ಕಲುಷಿತವಾಗಿದ್ದು , ಕುದುರೆಮುಖದ ಪಕ್ಕದಲ್ಲಿರುವ ಕಳಸ ಪಟ್ಟಣದಲ್ಲೇ ನದಿ ನೀರು ಕುಡಿಯಲು ಅಯೋಗ್ಯವೆಂದು ತಜ್ಞರು ಹೇಳಿದ್ದಾರೆ.

□ ಭದ್ರಾ ನದಿಯಲ್ಲಿ ಹೂಳಿನಿಂದಾಗಿ ಪ್ರವಾಹ ಹೆಚ್ಚಾಗಿ ಸುತ್ತಲಿನ ಗದ್ದೆ, ಅಡಿಕೆ -ತೋಟಗಳು ಬಂಜರಾಗಿ ರೈತರು ಕಂಗಾಲಾಗಿದ್ದಾರೆ.

□ ಭೂಕಂಪಗಳಿಂದ ಸುರಕ್ಷಿತವಾಗಿದ್ದ ಈ ಪ್ರದೇಶವು ಗಣಿಗಾರಿಕೆಗಾಗಿ ಸಿಡಿಸುವ ಸ್ಫೋಟಕಗಳಿಂದಾಗಿ 1998ರಜೂನ್‌ನಲ್ಲಿ ಸರಣಿ ಭೂಕಂಪದ ಅಪಾಯಕ್ಕೆ ಒಳಗಾಗಿದ್ದು , ಇನ್ನೊಮ್ಮೆ ಭೂಕಂಪವಾದರೆ ಸರ್ವನಾಶವಾದೀತೆಂದು ತಜ್ಞರು ಎಚ್ಚರಿಸಿದ್ದಾರೆ.

□ ಕರ್ನಾಟಕ ಹಾಗೂ ಆಂಧ್ರದ 15 ಲಕ್ಷ ಎಕರೆ ಭೂಮಿಗೆ ನೇರ ನೀರಾವರಿ ಸೌಕರ್ಯ ಕಲ್ಪಿಸಿರುವ ಗಾಜನೂರು, ಭದ್ರಾ ಮತ್ತು ತುಂಗಭದ್ರಾ ಅಣೆಕಟ್ಟುಗಳಲ್ಲಿ ಗಣಿಗಾರಿಕೆಯ ಹೂಳಿನಿಂದಾಗಿ ನೀರಿನ ಶೇಖರಣಾ ಸಾಮರ್ಥ್ಯ ಕುಗ್ಗಿದ್ದು ಚಾನಲ್‌ಗಳ ಟೈಲೆಂಡ್ ರೈತರಿಗೆ ಈಗಲೇ ನೀರಿಲ್ಲದೆ ಅವರ ಭೂಮಿ ಬಂಜರಾಗುತ್ತಿದೆ.

□ ಗಣಿಗಾರಿಕೆಯಿಂದಾಗಿ ಅರಣ್ಯ ನಾಶವಾದ ಕಾರಣ ಭೂಮಿಯ ಮೇಲ್ಮಣ್ಣು ಕೊಚ್ಚಿ ಹೋಗಿ ನದಿಯನ್ನು ಸೇರುತ್ತಿರುವುದರಿಂದ ಈ ಜಲಾಶಯಗಳು ತಮ್ಮ ಸಂಗ್ರಹಣಾ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿವೆ. ಹೊಸಪೇಟೆಯ ಅಣೆಕಟ್ಟಿನಲ್ಲಿ ಈಗಾಗಲೇ 1/3 ಭಾಗದಷ್ಟು ಹೂಳು ತುಂಬಿದೆ ಎಂದು ಇಂಜಿನಿಯರ್‌ಗಳು ಆತಂಕ ವ್ಯಕ್ತಪಡಿಸಿದ್ದಾರೆ. ಇದುವರೆಗೂ ನಮ್ಮಲ್ಲಿ ಹೂಳೆತ್ತುವ ಯಾವ ತಂತ್ರಜ್ಞಾನವೂ ಬಂದಿಲ್ಲ. ಆದ್ದರಿಂದ **ಪರಿಸ್ಥಿತಿ ಹೀಗೆ ಮುಂದುವರಿದರೆ ರೈತರು , ಕಾರ್ಮಿಕರು, ವ್ಯಾಪಾರಿಗಳು ಬೀದಿ ಪಾಲಾಗುವ ದಿನ ದೂರವಿಲ್ಲ.**

□ ಇಲ್ಲಿನ ಶೋಲಾ ಕಾಡುಗಳ ಹುಲ್ಲುಗಾವಲಿನ ಜೀವ ವೈವಿಧ್ಯತೆಯನ್ನು ಕಡೆಗಣಿಸಿ ಬಂಜರು ಭೂಮಿಯೆಂದು ದಾಖಲೆಗಳಲ್ಲಿ ತೋರಿಸಿ ಮಾಧ್ಯಮಗಳನ್ನು ಮೋಸಗೊಳಿಸಲಾಗಿದೆ. ಅಳಿವಿನಂಚಿನಲ್ಲಿರುವ ಸಿಂಗಲಿಕ(LionTiled Monkey) 'ಸೇರಿದಂತೆ ಅನೇಕ ಜೀವಿಗಳು ಬಲಿಗೆ ಮರದಂತಹ ಸಸ್ಯ ಪ್ರಬೇಧಗಳು, ಮಾಷೀರ್ ಜಾತಿಗೆ ಸೇರಿದ ಮೀನು ಸೇರಿದಂತೆ ಅನೇಕ ಅಪರೂಪದ ಮೀನುಗಳು ಈ ಗಣಿಗಾರಿಕೆಯಿಂದ ಆಪತ್ತನ್ನು ಎದುರಿಸುತ್ತಿವೆ.

□ ಈಗಾಗಲೇ ಬೋಳಿಸಿರುವ ಅರಣ್ಯ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ಗಿಡದಂತಹ ಅಪಾಯಕಾರಿ ಅಕೇಶಿಯಾ ಗಿಡಗಳನ್ನು ನೆಟ್ಟು ಅನೇಕ ಬಾರಿ ಪರಿಸರ ಪ್ರಶಸ್ತಿ ಪಡೆದಿರುವ ಕೆಐಒಸಿಎಲ್ ಕಂಪನಿ ಸತ್ಯವನ್ನು ಮರೆ ಮಾಚಿ ಜನರನ್ನು ವಂಚಿಸುತ್ತಿದೆ. ಇಲ್ಲಿನ ಎಂ.ಪಿ ಹಾಗೂ ಎಂ.ಎಲ್.ಎ ಗಳನ್ನು ತನ್ನ ಚೇಲಾಗಿರಿಗೆ ಬಳಸಿಕೊಳ್ಳುತ್ತಿದೆ.

□ ಕಳೆದ ಜೂನ್‌ನಲ್ಲಿ ಕಂಪನಿಯ ಅದಿರು ಸಾಗಾಣಿಕೆಯ ಪೈಪ್ ಲೈನ್ ಸೋರಿಕೆಯಿಂದ ಹತ್ತಿರದ ಅರಣ್ಯ ಪ್ರದೇಶ ಮತ್ತು ಎಣ್ಣೆ ಹೊಳೆಗೆ ಕಬ್ಬಿಣದ ಸ್ಲರಿ ರಾಡಿಯಾಗಿ ಹರಿದು, ಸುತ್ತಲಿನ ಜಮೀನುಗಳಿಗೆ ಅಪಾರ ಹಾನಿಯುಂಟು ಮಾಡಿದ್ದನ್ನು ಪತ್ರಿಕೆಗಳು ವಿವರವಾಗಿ ಪ್ರಕಟಿಸಿವೆ.




ತುಂಗ - ಭದ್ರ, ತೀರಜನತೆಯ
ಸಮಾವೇಶ,
ಬೃಹತ್ ಪ್ರತಿಭಟನಾ ರ್‍ಯಾಲಿ
2 ಜನವರಿ 2001, ಶಿವಮೊಗ್ಗ
ಸ್ಥಳ : ಸೈನ್ಸ್ ಮೈದಾನ,
ಬಿ.ಹೆಚ್. ರಸ್ತೆ,
ಶಿವಮೊಗ್ಗ

**ತುಂಗ - ಭದ್ರ ಉಳಿಸಿ ಹೋರಾಟ ಒಕ್ಕೂಟ**

# ತುಂಗ-ಭದ್ರೆಯ ನಾಶ ನಮ್ಮೆಲ್ಲರ ಸರ್ವನಾಶ

*ಆತ್ಮೀಯ ನಾಡ ಬಾಂಧವರೆ,*

ತುಂಗೆ ಭದ್ರ ನದಿಗಳ ಉಗಮ ಸ್ಥಾನವಾದ ಕುದುರೆಮುಖ ಪರ್ವತ ಶ್ರೇಣಿಯ ಗಂಗಡಿಕಲ್ಲು ಮತ್ತು ನೆಲ್ಲಿಬೀಡುಗಳಲ್ಲಿ ಸರಕಾರ ಮತ್ತೊಮ್ಮೆ ಗಣಿಗಾರಿಕೆಗೆ ಅವಕಾಶ ನೀಡಿರುವುದು ಆಘಾತಕಾರಿ ಸಂಗತಿಯಾಗಿದೆ.

ಈ ಗಣಿಗಾರಿಕೆಯಿಂದ ತುಂಗ-ಭದ್ರ ನದಿ ಸಂಪೂರ್ಣ ನಾಶವಾಗಲಿದೆ. ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಗಳ ಸುಮಾರು ೮೦ ಲಕ್ಷ ಜನ ನೇರವಾಗಿ ನದಿಯ ನೀರನ್ನು ಆಶ್ರಯಿಸಿ ಬದುಕುತ್ತಿದ್ದಾರೆ. ಹೀಗಾಗಿ ನದಿಯ ನಾಶವೆಂದರೆ ಈ ಭಾಗದ ಜನರ ಸರ್ವನಾಶವೇ ಸರಿ. ಆದ್ದರಿಂದ ನಮ್ಮೆಲ್ಲರ ಜೀವನಾಡಿಯಾದ ತಾಯಿ ತುಂಗ ಭದ್ರೆಯನ್ನು ಉಳಿಸುವ ಈ ಹೋರಾಟಕ್ಕೆ ಜೊತೆಗೂಡ ಬನ್ನಿ....

■ *ದಗಾಕೋರ ರಾಜಕಾರಣಿಗಳ ಸ್ವಾರ್ಥಕ್ಕೆ ನಮ್ಮ ಸಮೃದ್ಧ ಪರಿಸರ ಬಲಿಪಶುವಾಗಿದೆ. ಜನ ರಾಜಕಾರಣಿಗಳಿಗೆ ಬುದ್ಧಿ ಕಲಿಸಬೇಕು. ನಮ್ಮನ್ನಾಳುವ ಸರಕಾರದ ವಿರುದ್ಧ ನೇರ ಹೋರಾಟವೊಂದೇ ಪರಿಸರ ಉಳಿಸಿಕೊಳ್ಳುವಲ್ಲಿ ನಮಗಿರುವ ದಾರಿ. ಆದರೆ ತುಂಗ ಮತ್ತು ಭದ್ರ ನದಿ ಹುಟ್ಟುವ ಪ್ರದೇಶದಲ್ಲಿ ಕಬ್ಬಿಣದ ಅದಿರು ಯೋಜನೆಗೆ ಸರಕಾರ ಅನುಮತಿ ನೀಡಿ ಜನ ದ್ರೋಹಕ್ಕೆ ಕೈ ಹಾಕಿದೆ.*

- ಶಿವರಾಮ ಕಾರಂತರು

■ ಕುದುರೆಮುಖ ಗಣಿಗಾರಿಕೆಯಿಂದ ಭದ್ರಾ ನದಿಗೆ ಈಗಾಗಲೇ ತುಂಬಲಾರದ ಹಾನಿಯಾಗಿದೆ. ಈಗ ಮತ್ತೆ ತುಂಗ-ಭದ್ರ ಮೂಲದಲ್ಲಿ ಗಣಿಗಾರಿಕೆ ಮಾಡಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅನುವು ಮಾಡಿಕೊಡುವುದರಿಂದ ತುಂಗ-ಭದ್ರ ನದಿ ಸಂಪೂರ್ಣ ನಾಶವಾಗಲಿದೆ. ಇದನ್ನು ಜನ ಒಗ್ಗಟ್ಟಾಗಿ ವಿರೋಧಿಸಬೇಕಿದೆ.

- ಕೆ.ಪಿ. ಪೂರ್ಣಚಂದ್ರ ತೇಜಸ್ವಿ

■ ಸ್ಥಳೀಯ ಜನರ ಅಭಿಪ್ರಾಯವನ್ನು ಕೇಳದೇ ತುಂಗ ಮತ್ತು ಭದ್ರ ನದಿಯ ಉಗಮ ಸ್ಥಾನವಾದ ಗಂಗಡಿಕಲ್ಲು ಮತ್ತು ನೆಲ್ಲಿಬೀಡುವಿನಲ್ಲಿ ಕಬ್ಬಿಣದ ಅದಿರು ಯೋಜನೆಗೆ ಸರಕಾರ ಅನುಮತಿ ನೀಡುತ್ತಿರುವುದನ್ನು ಎಲ್ಲರೂ ವಿರೋಧಿಸಬೇಕು. ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ ಸರಕಾರ ಸ್ಥಳೀಯ ಜನರ ಅಭಿಪ್ರಾಯ ಕೇಳುವ ಪ್ರಜಾಪ್ರಭುತ್ವದ ಮೂಲ ತತ್ವವನ್ನು ಅನುಸರಿಸದೇ ಇದ್ದಾಗ ಜನರಿಗೆ ಅದರ ವಿರುದ್ಧ ಹೋರಾಟ ನಡೆಸುವುದೊಂದೇ ಉಳಿದಿರುವ ದಾರಿ.

- ಕೆ.ವಿ. ಸುಬ್ಬಣ್ಣ, ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತರು

---

ಉತ್ತರ ಪ್ರದೇಶದ ಗಾಂಧಿಯೆಂದೇ ಖ್ಯಾತರಾದ

ಸಮಾವೇಶದ ಮುಖ್ಯ ಅತಿಥಿಗಳು : **ಚೌಧುರಿ ಮಹೇಂದ್ರ ಸಿಂಗ್ ಟಿಕಾಯತ್**

ರಾಷ್ಟ್ರೀಯ ಅಧ್ಯಕ್ಷರು, ಭಾರತೀಯ ಕಿಸಾನ್ ಯೂನಿಯನ್, ನವದೆಹಲಿ.

---

2ನೇ ಜನವರಿ (ಮಂಗಳವಾರ) 2001 ರ ತುಂಗಭದ್ರ ಉಳಿಸಿ

ರ್‍ಯಾಲಿಗೆ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ

# ತುಂಗಭದ್ರೆಯ ರಕ್ಷಣೆ ನಮ್ಮೆಲ್ಲರ ಹೊಣೆ

ಮುದ್ರಣ ಓಂಕಾರ್ ಕಂಪ್ಯೂಟರ್ ಆಫ್ಸೆಟ್ಸ್, ಶಿವಮೊಗ್ಗ ✆ 73306

P 54 F 1

# ಪೈಪವರ್ ಮಜ್ದೂರ್ ವೆಲ್‌ಫೇರ್ ಯೂನಿಯನ್

(ಭಾರತೀಯ ಮಜ್ದೂರ್ ಸಂಘಕ್ಕೆ ಸಂಯೋಜಿತ)

ಅಂಬಿಕಾನಗರ – 581363

ರ.ನಂ. 361/80

## ದಾಂಡೇಲಿ ಜಲವಿದ್ಯುತ್ ಯೋಜನೆಯನ್ನು ಖಾಸಗಿ ಸಂಸ್ಥೆಗೆ ನೀಡದೆ ಕೆ. ಪಿ. ಸಿ. ಗೆ ನೀಡಿದರೆ...........

- ಮುರ್ಡೇಶ್ವರ ಪವರ್ ಕಾರ್ಪೋರೇಶನ್ (ಎಂಪಿಸಿ) 18 ಮೆ. ವ್ಯಾ. ವಿದ್ಯುತ್ ಉತ್ಪಾದಿಸಿದರೆ ಕೆ. ಪಿ. ಸಿ. 30 ಮೆ. ವಾ. ಉತ್ಪಾದಿಸಬಲ್ಲದು.
- ಎಂ. ಪಿ. ಸಿ. ಯ ವಿದ್ಯುತ್ ಯೂನಿಟ್ ದರ ರೂ. 4–00 ಆದರೆ ಕೆ. ಪಿ. ಸಿ. ಯ ಯೂನಿಟ್ ದರ ರೂ. 2–00 ಕ್ಕಿಂತ ಕಡಿಮೆ.
- ಸ್ಥಳೀಯ ನಿರಾಶ್ರಿತರಿಗೆ / ನಿರುದ್ಯೋಗಿಗಳಿಗೆ ಕೆಪಿಸಿ ಯಿಂದ ಮಾತ್ರ ಉದ್ಯೋಗ ಸೌಲಭ್ಯ ಸಾಧ್ಯ.
- ದಾಂಡೇಲಿ ಪಟ್ಟಣಕ್ಕೆ ಸುವ್ಯವಸ್ಥಿತ ಕುಡಿಯುವ ನೀರು ಪೂರೈಕೆ ಮತ್ತು ಒಳಚರಂಡಿ ಯೋಜನೆ ಕೆಪಿಸಿ ರೂಪಿಸಲು ಸಾಧ್ಯ.
- ಮೌಳಂಗಿ ಗ್ರಾಮವನ್ನು ಕೆಪಿಸಿ ಯು ದತ್ತು ಪಡೆದು ಮಾದರಿ ಗ್ರಾಮವಾಗಿ ರೂಪಿಸಲು ಸಾಧ್ಯ.
- ದಾಂಡೇಲಿ, ಹಳಿಯಾಳ, ಜೋಯಿಡಾಗಳಲ್ಲಿರುವ ಉದ್ದಿಮೆಗಳಿಗೆ ಕೆಪಿಸಿ ವಿದ್ಯುತ್‌ನ್ನು ನೇರವಾಗಿ ನೀಡಬಹುದಾಗಿದೆ.
- ನಿರಾಶ್ರಿತರಿಗೆ ಪುನರ್ವಸತಿಯ ಜೊತೆಗೆ ಬದಲಿ ಅರಣ್ಯ ಬೆಳೆಸುವ ಯೋಜನೆ ಕೆಪಿಸಿ ಯಿಂದ ಮಾತ್ರ ಸಾಧ್ಯ.
- ಕಾಳಿ ವಿದ್ಯುತ್ ಯೋಜನೆಯ ಹಿನ್ನೀರಿನಲ್ಲಿ ಪ್ರವಾಸೋದ್ದಿಮೆಗೆ ಧಕ್ಕೆಯಾಗದಂತೆ ದಾಂಡೇಲಿ ವಿದ್ಯುತ್ ಯೋಜನೆಯನ್ನು ಕೆಪಿಸಿ ಸುಲಭವಾಗಿ ಮಾಡಬಲ್ಲದು.
- ಯೋಜನೆಗೆ ಬೇಕಾದ ಹಣಕಾಸನ್ನು ಸ್ಥಳೀಯ ಉದ್ದಿಮೆ ಹಾಗೂ ಬ್ಯಾಂಕಗಳ ನೆರವಿನಿಂದ ಕ್ರೋಢೀಕರಿಸಬಹುದಾಗಿದೆ
- ದಾಂಡೇಲಿ ಯೋಜನೆಯಿಂದ ಉತ್ಪಾದನೆಯಾದ ವಿದ್ಯುತ್‌ನ್ನು ಸ್ಥಳೀಯ ಪುರಸಭೆಗಳಿಗೆ ಕೆಪಿಸಿ ಯು ನೇರವಾಗಿ ಪೂರೈಸಬಹುದಾದ್ದರಿಂದ ಪ್ರಸರಣ ಮತ್ತು ವಿತರಣೆಯ ಹಾನಿ ತಪ್ಪಿಸಬಹುದಾಗಿದೆ.
- ದಾಂಡೇಲಿ ಜಲವಿದ್ಯುತ್ ಯೋಜನೆಯನ್ನು ಕೆಪಿಸಿ ಗೆ ನೀಡಿದರೆ ನಾಗಝರಿ ಜಲವಿದ್ಯುತ್ ಸ್ಥಾವರಕ್ಕೆ ನೀರು ಪೂರೈಕೆ ವ್ಯತ್ಯಯವಾಗುವ ಸಾಧ್ಯತೆ ತಪ್ಪುತ್ತದೆ
- ಕೆಪಿಸಿ ಯಲ್ಲಿ ತಾಂತ್ರಿಕ ಪರಿಣಿತರು, ಅನುಭವಿ ಕಾರ್ಮಿಕರು ಹಾಗೂ ಯೋಜನೆಗೆ ಬೇಕಾದ ಮೂಲಭೂತ ಸೌಲಭ್ಯಗಳು ಈಗಾಗಲೇ ಇರುವುದರಿಂದ ಪ್ರಸ್ತುತ ಯೋಜನೆಯನ್ನು ಕಡಿಮೆ ಅವಧಿ ಹಾಗೂ ವೆಚ್ಚದಲ್ಲಿ ಮಾಡಬಹುದಾಗಿದೆ.
- ದಾಂಡೇಲಿ ಯೋಜನೆಯನ್ನು ಖಾಸಗಿಯವರಿಗೆ ನೀಡಿದರೆ, ಖಾಸಗೀಯವರ ಹೊಟ್ಟೆ ಬೆಳೆದೀತೆ ವಿನಃ ಸಾರ್ವಜನಿಕರಿಗೆ ಕಿಂಚಿತ್ತು ಉಪಯೋಗವಾಗದು. ಆದರೆ ಕೆಪಿಸಿ ಗೆ ನೀಡಿದರೆ ಯೋಜನೆಯ ಸುತ್ತಮುತ್ತಲಿನ ಪ್ರದೇಶಗಳು ಅಭಿವೃದ್ಧಿ ಕಂಡಾವು.

ಆದರೆ ಇವೆಲ್ಲ ನನಸಾಗುವುದು ದಾಂಡೇಲಿ ವಿದ್ಯುತ್ ಯೋಜನೆಯನ್ನು ಮುರ್ಡೇಶ್ವರ ಪವರ್ ಕಾರ್ಪೋರೇಶನ್ ಬದಲು ಕೆ. ಪಿ. ಸಿ. ಗೆ ನೀಡಿದಾಗ ಮಾತ್ರ ಎಂಬುದು ನೆನಪಿನಲ್ಲಿರಲಿ..........

ದಿನಾಂಕ 7-12-2000

ಪೈಪವರ್ ಮಜ್ದೂರ್ ವೆಲ್‌ಫೇರ್ ಯೂನಿಯನ್
ಅಂಬಿಕಾನಗರ

PSK F1

# ಬಂದರು ಬಂದರೆ ಯಾರಿಗೆ ತೊಂದರೆ?

**"ಈ ಭೂಮಿಯ ಮೇಲಿನ ಕಟ್ಟಕಡೆಯ ಮರವನ್ನು ಕಡಿದ ಮೇಲೆ;**
**ಈ ಭೂಮಿಯ ಮೇಲಿನ ಕೊನೆಯ ನದಿಯನ್ನು ವಿಷಮಯಗೊಳಿಸಿದ ಮೇಲೆ;**
**ಈ ಜಲದಲ್ಲಿಯ ಕೊನೆಯ ಮೀನನ್ನು ಹಿಡಿದು ನುಂಗಿದ ಮೇಲೆಯೇ**
**ಕೇವಲ ಹಣಮಾತ್ರದಿಂದ, ಏನನ್ನೂ ಮಾಡಲಾಗುವುದಿಲ್ಲ ಎಂಬ ಸತ್ಯ ತಿಳಿಯುತ್ತದೆ."**

ಇದೊಂದು ರೆಡ್ ಇಂಡಿಯನ್ ಗಾದೆ. ಕೋಲಂಬಸ್‌ನು ಅಮೇರಿಕ ಶೋಧದ ನಂತರದಲ್ಲಿ ಅಮೇರಿಕೆಯ ಆದಿ ನಿವಾಸಿಗಳಾದ ರೆಡ್ ಇಂಡಿಯನ್ನರ ಮೇಲೆ ಆದ ಸಾಂಸ್ಕೃತಿಕ, ದೈಹಿಕ ಆಘಾತದಲ್ಲಿ ಇಡೀ ರೆಡ್ ಇಂಡಿಯನ್ ಸಮುದಾಯ ನಾಮಾವಶೇಷವಾಗುವ ಹಂತಕ್ಕೆ ಬಂದಾಗ ಆ ಸಮುದಾಯದಿಂದ ಹೊರಹೊಮ್ಮಿದ ಅನುಭವದ – ನೋವಿನ – ಕಟು ವಾಸ್ತವದ ದಾರ್ಶನಿಕ ಮಾತು ಇದು. ಇಂದು ಈ ಮಾತು ಭಾರತಕ್ಕೂ ಅನ್ವಯಿಸುತ್ತದೆ. ಅಂತಹ ವಿಕಟ ಪರಿಸ್ಥಿತಿಯಲ್ಲಿ ಇಲ್ಲಿನ ಕರಾವಳಿ ಸಮುದಾಯ ಸಿಲುಕಿಕೊಳ್ಳುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ತದಡಿಯಲ್ಲಿ ಸ್ಥಾಪಿಸಲುದ್ದೇಶಿಸಿರುವ ಬೃಹತ್ ಬಂದರು ಯೋಜನೆಯು ಸುತ್ತಲಿನ ಬಹುದೊಡ್ಡ ಪ್ರಮಾಣದ ಭೂಭಾಗವನ್ನು ವ್ಯಾಪಿಸಲಿದೆ. ಈ ಪ್ರದೇಶವು ದೇಶದಲ್ಲಿಯೇ ಸುಂದರ ಹಾಗೂ ಜೀವ ವೈವಿಧ್ಯತೆಯ ನೈಸರ್ಗಿಕ ತಾಣವಾಗಿದೆ. ಬಂದರು ಇಲ್ಲಿ ವಸಾಹತು ಹೊಂದುವುದರಿಂದ ಸುಮಾರು 1500ಕ್ಕೂ ಹೆಚ್ಚು ಕುಟುಂಬ ಗಳು ಉದ್ಯೋಗ ಕಳೆದುಕೊಳ್ಳುವುದರ ಜೊತೆಗೆ ಬಹುದೊಡ್ಡ ಪ್ರಮಾಣದಲ್ಲಿ ನಿರಾಶ್ರಿತ ಸಮಸ್ಯೆಯನ್ನು ಎದುರಿಸಲಿವೆ. ಈ ಸುತ್ತ ಮುತ್ತಲಿನ ಪ್ರದೇಶದಲ್ಲಿ ಮೀನುಗಾರರು, ಹಾಲಕ್ಕಿಗಳು, ನಾಡವ-ನಾಯಕ, ನಾಮಧಾರಿಗಳು, ಪಟಗಾರ, ಹಳ್ಳೇರ, ಗಾಬೀತ, ಮುಸ್ಲಿಂ ಇವರು ಪ್ರಮುಖವಾಗಿ ನೆಲೆಸಿದವರಾಗಿದ್ದಾರೆ. ಇವರೆಲ್ಲರೂ ಹೆಚ್ಚಿನದಾಗಿ ಸಮುದ್ರದ ಉತ್ಪನ್ನವನ್ನು ಅವಲಂಬಿಸಿದ್ದಾರೆ.

ತದಡಿ ಬಂದರು ಪ್ರದೇಶ ಮತ್ತು ಸರಕಾರ ಸ್ವಾಧೀನಪಡಿಸಿಕೊಂಡ ಹಿರೇಗುತ್ತಿ ಬಳಿಯ 1848 ಎಕರೆ ಗಜನಿ ಭೂಮಿಯನ್ನು ವಶಪಡಿಸಿಕೊಂಡು ಯೋಜನೆಯನ್ನು ದಿಢೀರನೆ ಅನುಷ್ಠಾನಕ್ಕೆ ತರಲಾಗಿದೆ. ಈ ಯೋಜನೆಯ ರೂಪರೇಷೆ ಏನು? ಪರಿಹಾರ ಹೇಗೆ? ನಿರಾಶ್ರಿತರಾಗುವವರ ಸಂಖ್ಯೆ ಎಷ್ಟು? ಸಾಧಕ ಬಾಧಕಗಳೇನು? ಎಂಬ ಇನ್ನಿತರ ಯಾವ ಪ್ರಮುಖ ಅಂಶಗಳನ್ನೂ ಜನರಿಗೆ ತಿಳಿಸದೇ ಯೋಜನೆಯನ್ನು ತರಲಾಗಿದೆ. ಈ ಜಿಲ್ಲೆಯಲ್ಲಿ ಈಗಾಗಲೇ ಸೀಬರ್ಡ್, ಕೈಗಾ, ಕೊಡಸಳ್ಳಿ, ಶರಾವತಿ ಟೇಲರೇಸ್ ಯೋಜನೆ ಯಿಂದ ಪರಿಹಾರ ಹಾಗೂ ನಿರಾಶ್ರಿತ ಸಮಸ್ಯೆಗಳಿಂದ ಜನರು ಜರ್ಜರಿತರಾಗಿದ್ದಾರೆ.

ಪರಿಸರ ಕಾಯ್ದೆ ಪ್ರಕಾರ ಯಾವುದೇ ಬೃಹತ್ (29) ಯೋಜನೆಗಳು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಸಾರ್ವಜನಿಕ ಸಭೆ ಯನ್ನು ಏರ್ಪಡಿಸಿ ಜನರಿಗೆ ಇದರ ಮಾಹಿತಿ ನೀಡಿ ಅವರ ಅಹವಾಲು ಪಡೆಯಬೇಕೆಂದು ತಿಳಿಸಲಾಗಿದೆ. ಇಂತಹ ಬೃಹತ್ (29) ಯೋಜನೆಗಳಲ್ಲಿ ತದಡಿ ಬಂದರು ಯೋಜನೆಯೂ ಒಂದಾಗಿದೆ. ಆದರೆ ಬಂದರು ಪ್ರಾರಂಭಿಸುವ ಪೂರ್ವದಲ್ಲಿ ಸ್ಥಾನಿಕ ಅನುಮತಿ ಪಡೆಯದೆ ಬಂದಿರುವ ಈ ಯೋಜನೆ ಬಗ್ಗೆ ಜನರು ಆತಂಕಗೊಂಡಿದ್ದಾರೆ. ಬಂದರು ಯೋಜನೆ ಯಾರ ಲಾಭಕ್ಕೆ? ಜನಸಾಮಾನ್ಯ ರನ್ನು ಅತಂತ್ರಗೊಳಿಸಲೇ ಎಂಬ ಗುಮಾನಿ ಇದೆ.

ಪರಿಸರ ವಿಜ್ಞಾನಿಗಳ ಪ್ರಕಾರ ಈ ತದಡಿ ಬೃಹತ್ ಬಂದರು ಯೋಜನೆಯು ಈ ಸೀಮಿತ ಪ್ರದೇಶಕ್ಕೆ ಮಾತ್ರವಲ್ಲದೇ ಇಡೀ ಪಶ್ಚಿಮ ಘಟ್ಟವನ್ನೇ ನಾಶಮಾಡುತ್ತದೆ. ಬಂದರಿನಿಂದಾಗಿ ತದಡಿ - ಅಘನಾಶಿನಿ ಭಾಗದಲ್ಲಿ ದೇಶದಲ್ಲಿಯೇ ಅತ್ಯಧಿಕವಾಗಿ ಸಿಗುತ್ತಿರುವ ಬೆಳಚು (Shellfish) ಹಾಗೂ ಸಿಗಡಿ ಮತ್ತು ಉತ್ತಮ ತಳಿಯ ಮೀನುಗಳು ಬಂದರು ನಿರ್ಮಾಣದ ಆರಂಭದಲ್ಲಿಯೇ ಶಾಶ್ವತವಾಗಿ ನಿರ್ನಾಮವಾಗುವವು. ಜೊತೆಗೆ ರಾಜ್ಯದಲ್ಲಿಯೇ ಉತ್ತಮ ಉಪ್ಪನ್ನು ಉತ್ಪಾದಿಸುವ ಸುಮಾರು 500 ಎಕರೆ ಭೂ ಪ್ರದೇಶದಲ್ಲಿ ಇನ್ನು ಮುಂದೆ ಉಪ್ಪು ಬೆಳೆಯುವುದು ಇತಿಹಾಸವಾಗುವುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಂದರು ಯೋಜನೆಯ ಹೆಸರಿನಲ್ಲಿ ಬರುವ ಇನ್ನಿತರ ಅನೇಕ ಬೃಹತ್ ಉದ್ದಿಮೆಗಳಿಗೆ ಈ ಬಂದರು ಮಹಾದ್ವಾರವಾಗುವುದು. ಪಶ್ಚಿಮ ಘಟ್ಟದಲ್ಲಿ ಸಿಗುತ್ತದೆ ಎಂದು ಭಾವಿಸಲಾದ ಮ್ಯಾಂಗನೀಸ್ ಮತ್ತು ಭಾರೀ ಪ್ರಮಾಣದಲ್ಲಿ ಕಲ್ಲಿದ್ದಲು ಆಮದು ರಫ್ತು ಹಾಗೂ ಸಂಗ್ರಹಣೆಗೆ ಈಗಾಗಲೇ ನಿಗದಿ ಪಡಿಸಿರುವ ಭಾರಿ ಪ್ರಮಾಣದ ಭೂಪ್ರದೇಶ ಬಳಕೆಯಾಗುವುದು ಎನ್ನಲಾಗಿದೆ.

# ಈ ಅಹವಾಲುಗಳನ್ನು ಕೇಳುವವರಾರು ?

* ಅಘನಾಶಿನಿ ಸಂಗಮ ಪ್ರದೇಶದಲ್ಲಿ 100 ಅಡಿ ಆಳ ಹೂಳೆತ್ತಲಾಗುತ್ತಿರುವುದು ನಿಜವೇ ?
* ಈ ಎತ್ತಿದ ಹೂಳನ್ನು ಬಂದರಿನ ಕಟ್ಟೆ ಹಾಗೂ ಧಕ್ಕೆಗಳನ್ನು ನಿರ್ಮಿಸಲು ಹೊಸ್ಕಟ್ಟಾದ ಸುಮಾರು 120 ಎಕರೆ ಪ್ರದೇಶದಲ್ಲಿ ಹಾಕಲಾಗುತ್ತಿದೆ ಇದು ನಿಜವೇ ?
* ಹೊಸ್ಕಟ್ಟಾ ಮತ್ತು ಇತರೇ ಮಜಿರೆಗಳಲ್ಲಿ ಬಂದರಿಗೆ ಸಂಬಂಧ ಪಟ್ಟಂತ ಗೊಡಾನ್‌ಗಳು, ಕಾರ್ಯಾಲಯಗಳು ನಿರ್ಮಾಣವಾಗುತ್ತಿರುವುದು ನಿಜವೇ ?
* ಗೋಕರ್ಣ ರೈಲ್ವೆ ಸ್ಟೇಷನ್ನಿಂದ ತದಡಿ ಬಂದರಿನ ತನಕ ರೈಲ್ವೆ ಲೈನಿಗಾಗಿ ಜಾಗ ಖಾಲಿ ಮಾಡಬೇಕಾದವರ ಕುಟುಂಬಗಳ ಸಂಖ್ಯೆ ಎಷ್ಟು ?
* ಮಂಗಳೂರಿನಲ್ಲಿ ವಿಸ್ತರಣೆಗೆ ಅವಕಾಶವಿದ್ದರೂ ಮತ್ತು ಇತಿಹಾಸ ಕಾಲದಿಂದಲೂ ಪ್ರಸಿದ್ಧವಾದ ನೈಸರ್ಗಿಕ ಬಂದರಾದ ಕಾರವಾರದಲ್ಲಿ ಸುಲಭವಾಗಿ 400 ಎಕರೆ ಪ್ರದೇಶದಷ್ಟು ಜಮೀನಿದ್ದರೂ ಸಹ ಈ ತದಡಿ ಬಂದರಿನ ಹಿನ್ನೆಲೆಯೇನು ?
* ಬಂದರಿನಲ್ಲಿ ಮತ್ತೆ ಹೂಳು ತುಂಬದಿರುವಂತೆ ಅಘನಾಶಿನಿ ನದಿಯನ್ನು ಕಾಲುವೆ (ಚಾನೆಲ್) ಮೂಲಕ ಸಂಗಮ ಪ್ರದೇಶದ ದಿಕ್ಕನ್ನು ಬದಲಾಯಿಸಲಾಗುತ್ತಿದೆ ಇದು ನಿಜವೇ ?
* 1800 ಎಕರೆ ಪ್ರದೇಶದಲ್ಲಿ ಸಂಗ್ರಹಿಸಬಹುದಾದ [ಆಮದು–ರಫ್ತಿಗಾಗಿ] ವಸ್ತುಗಳು ಯಾವುವು ? ಮತ್ತು ಪ್ರಮಾಣ ಎಷ್ಟು ?
* ಬಂದರಿನಲ್ಲಿ ಏಕಕಾಲದಲ್ಲಿ ಎಷ್ಟು ಹಡಗುಗಳು ಕಾರ್ಯನಿರ್ವಹಿಸುತ್ತವೆ ?
* ಬಂದರು ಯೋಜನೆಯಿಂದ ರೈತ, ಕೂಲಿ ಕಾರ್ಮಿಕರಿಗೆ ಹೇಗೆ ಉದ್ಯೋಗ ದೊರೆಯುತ್ತದೆ. ?
* ಸ್ಥಳೀಯ 17 ಸಾವಿರಕ್ಕೂ ಹೆಚ್ಚು ಮೀನುಗಾರರು, 1700 ಕ್ಕೂ ಮಿಕ್ಕಿದ ದೋಣಿಗಳಿಂದ ವರ್ಷಕ್ಕೆ ಸರಾಸರಿ 12ಸಾವಿರ ಮೆಟ್ರಿಕ್ ಟನ್‌ಗಳಷ್ಟು ಅಧಿಕ ಮೀನು ಉತ್ಪನ್ನ ಇದೆ. ಇದರ ಮುಂದಿನ ಭವಿಷ್ಯವೇನು ? ಮತ್ತು ಇವರಿಗೆ ರಕ್ಷಣೆ ಹೇಗೆ ?
* ನಿರಾಶ್ರಿತರಾಗುವವರಿಗೆ ಪುನರ್ವಸತಿ, ಪರಿಹಾರ ಹಾಗೂ ಉದ್ಯೋಗವಕಾಶಗಳು ಎಷ್ಟು ?
* ಬಂದರು ನಿರ್ಮಾಣದಿಂದ ಸ್ಥಳೀಯರಿಗೆ ಸಿಗುವ ಉದ್ಯೋಗಗಳು ಯಾವವು ಮತ್ತು ಎಷ್ಟು ?
* ಬಂದರು ಯೋಜನೆಯಿಂದ ಉದ್ಯೋಗ ಕಳೆದುಕೊಳ್ಳುವವರಿಗೆ ಪರಿಹಾರವೇನು ?
* ಈಗಿರುವ ಡ್ಯಾನಿಶ್ ಬಂದರಿನ ಭವಿಷ್ಯವೇನು ?
* ಮುಂದೆ ಯಾವತ್ತೂ ನಿರಾಶ್ರಿತರ ಹಾಗೂ ಸ್ಥಳೀಯರ ಆರೋಗ್ಯ ರಕ್ಷಣೆ ಹೇಗೆ ?

**ಈ ಎಲ್ಲ ಪ್ರಶ್ನೆಗಳಿಗೆ ಜನರಿಗೆ ಸರಕಾರದಿಂದ ಉತ್ತರ ದೊರಕಿಸಬೇಕಾದ ಕಾರ್ಯ ಸಂಘ ಸಂಸ್ಥೆಗಳು ಹಾಗೂ ಜನ ಪ್ರತಿನಿಧಿಗಳದ್ದು ಅಲ್ಲವೇ ?**


• ಪ್ರಕಟಣೆ •

ಸ್ನೇಹಕುಂಜ

ಕಾಸರಕೋಡ, ಹೊನ್ನಾವರ

☎ : **30332**


ದೀನಬಂಧು ಮುದ್ರಣ, ಹೊನ್ನಾವರ. ✆ : **22287**

# ಬಂದರು ಬಂದರೆ ಯಾರಿಗೆ ತೊಂದರೆ?

"ಈ ಭೂಮಿಯ ಮೇಲಿನ ಕಟ್ಟಕಡೆಯ ಮರವನ್ನು ಕಡಿದ ಮೇಲೆ;
ಈ ಭೂಮಿಯ ಮೇಲಿನ ಕೊನೆಯ ನದಿಯನ್ನು ವಿಷಮಯಗೊಳಿಸಿದ ಮೇಲೆ;
ಈ ಜಲದಲ್ಲಿಯ ಕೊನೆಯ ಮೀನನ್ನು ಹಿಡಿದು ನುಂಗಿದ ಮೇಲೆಯೇ
ಕೇವಲ ಹಣಮಾತ್ರದಿಂದ, ಏನನ್ನೂ ಮಾಡಲಾಗುವುದಿಲ್ಲ ಎಂಬ ಸತ್ಯ ತಿಳಿಯುತ್ತದೆ."

ಇದೊಂದು ರೆಡ್ ಇಂಡಿಯನ್ ಗಾದೆ. ಕೊಲಂಬಸ್‌ನು ಅಮೇರಿಕ ಶೋಧದ ನಂತರದಲ್ಲಿ ಅಮೇರಿಕೆಯ ಆದಿ ನಿವಾಸಿಗಳಾದ ರೆಡ್ ಇಂಡಿಯನ್ನರ ಮೇಲೆ ಆದ ಸಾಂಸ್ಕೃತಿಕ, ದೈಹಿಕ ಆಘಾತದಲ್ಲಿ ಇಡೀ ರೆಡ್ ಇಂಡಿಯನ್ ಸಮುದಾಯ ನಾಮಾವಶೇಷವಾಗುವ ಹಂತಕ್ಕೆ ಬಂದಾಗ ಆ ಸಮುದಾಯದಿಂದ ಹೊರಹೊಮ್ಮಿದ ಅನುಭವದ - ನೋವಿನ - ಕಟು ವಾಸ್ತವದ ದಾರ್ಶನಿಕ ಮಾತು ಇದು. ಇಂದು ಈ ಮಾತು ಭಾರತಕ್ಕೂ ಅನ್ವಯಿಸುತ್ತದೆ. ಅಂತಹ ವಿಕಟ ಪರಿಸ್ಥಿತಿಯಲ್ಲಿ ಇಲ್ಲಿನ ಕರಾವಳಿ ಸಮುದಾಯ ಸಿಲುಕಿಕೊಳ್ಳುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ತದಡಿಯಲ್ಲಿ ಸ್ಥಾಪಿಸಲುದ್ದೇಶಿಸಿರುವ ಬೃಹತ್ ಬಂದರು ಯೋಜನೆಯು ಸುತ್ತಲಿನ ಬಹುದೊಡ್ಡ ಪ್ರಮಾಣದ ಭೂಭಾಗವನ್ನು ವ್ಯಾಪಿಸಲಿದೆ. ಈ ಪ್ರದೇಶವು ದೇಶದಲ್ಲಿಯೇ ಸುಂದರ ಹಾಗೂ ಜೀವ ವೈವಿಧ್ಯತೆಯ ನೈಸರ್ಗಿಕ ತಾಣವಾಗಿದೆ. ಬಂದರು ಇಲ್ಲಿ ವಸಾಹತು ಹೊಂದುವುದರಿಂದ ಸುಮಾರು 1500ಕ್ಕೂ ಹೆಚ್ಚು ಕುಟುಂಬಗಳು ಉದ್ಯೋಗ ಕಳೆದುಕೊಳ್ಳುವುದರ ಜೊತೆಗೆ ಬಹುದೊಡ್ಡ ಪ್ರಮಾಣದಲ್ಲಿ ನಿರಾಶ್ರಿತ ಸಮಸ್ಯೆಯನ್ನು ಎದುರಿಸಲಿವೆ. ಈ ಸುತ್ತ ಮುತ್ತಲಿನ ಪ್ರದೇಶದಲ್ಲಿ ಮೀನುಗಾರರು, ಹಾಲಕ್ಕಿಗಳು, ನಾಡವ-ನಾಯಕ, ನಾಮಧಾರಿಗಳು, ಪಟಗಾರ, ಹಳ್ಳೇರ, ಗಾಬೀತ, ಮುಸ್ಲಿಂ ಇವರು ಪ್ರಮುಖವಾಗಿ ನೆಲೆಸಿದವರಾಗಿದ್ದಾರೆ. ಇವರೆಲ್ಲರೂ ಹೆಚ್ಚಿನದಾಗಿ ಸಮುದ್ರದ ಉತ್ಪನ್ನವನ್ನು ಅವಲಂಬಿಸಿದ್ದಾರೆ.

ತದಡಿ ಬಂದರು ಪ್ರದೇಶ ಮತ್ತು ಸರಕಾರ ಸ್ವಾಧೀನಪಡಿಸಿಕೊಂಡ ಹಿರೇಗುತ್ತಿ ಬಳಿಯ 1848 ಎಕರೆ ಗಜನಿ ಭೂಮಿಯನ್ನು ವಶಪಡಿಸಿಕೊಂಡು ಯೋಜನೆಯನ್ನು ದಿಢೀರನೆ ಅನುಷ್ಠಾನಕ್ಕೆ ತರಲಾಗಿದೆ. ಈ ಯೋಜನೆಯ ರೂಪರೇಷೆ ಏನು? ಪರಿಹಾರ ಹೇಗೆ? ನಿರಾಶ್ರಿತರಾಗುವವರ ಸಂಖ್ಯೆ ಎಷ್ಟು? ಸಾಧಕ ಬಾಧಕಗಳೇನು? ಎಂಬ ಇನ್ನಿತರ ಯಾವ ಪ್ರಮುಖ ಅಂಶಗಳನ್ನೂ ಜನರಿಗೆ ತಿಳಿಸದೇ ಯೋಜನೆಯನ್ನು ತರಲಾಗಿದೆ. ಈ ಜಿಲ್ಲೆಯಲ್ಲಿ ಈಗಾಗಲೇ ಸೀಬರ್ಡ್, ಕೈಗಾ, ಕೊಡಸಳ್ಳಿ, ಶರಾವತಿ ಟೇಲರೇಸ್ ಯೋಜನೆಯಿಂದ ಪರಿಹಾರ ಹಾಗೂ ನಿರಾಶ್ರಿತ ಸಮಸ್ಯೆಗಳಿಂದ ಜನರು ಜರ್ಜರಿತರಾಗಿದ್ದಾರೆ.

ಪರಿಸರ ಕಾಯ್ದೆ ಪ್ರಕಾರ ಯಾವುದೇ ಬೃಹತ್ (29) ಯೋಜನೆಗಳು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಿ ಜನರಿಗೆ ಇದರ ಮಾಹಿತಿ ನೀಡಿ ಅವರ ಅಹವಾಲು ಪಡೆಯಬೇಕೆಂದು ತಿಳಿಸಲಾಗಿದೆ. ಇಂತಹ ಬೃಹತ್ (29) ಯೋಜನೆಗಳಲ್ಲಿ ತದಡಿ ಬಂದರು ಯೋಜನೆಯೂ ಒಂದಾಗಿದೆ. ಆದರೆ ಬಂದರು ಪ್ರಾರಂಭಿಸುವ ಪೂರ್ವದಲ್ಲಿ ಸ್ಥಾನಿಕ ಅನುಮತಿ ಪಡೆಯದೆ ಬಂದಿರುವ ಈ ಯೋಜನೆ ಬಗ್ಗೆ ಜನರು ಆತಂಕಗೊಂಡಿದ್ದಾರೆ. ಬಂದರು ಯೋಜನೆ ಯಾರ ಲಾಭಕ್ಕೆ? ಜನಸಾಮಾನ್ಯರನ್ನು ಅತಂತ್ರಗೊಳಿಸಲೇ ಎಂಬ ಗುಮಾನಿ ಇದೆ.

ಪರಿಸರ ವಿಜ್ಞಾನಿಗಳ ಪ್ರಕಾರ ಈ ತದಡಿ ಬೃಹತ್ ಬಂದರು ಯೋಜನೆಯು ಈ ಸೀಮಿತ ಪ್ರದೇಶಕ್ಕೆ ಮಾತ್ರವಲ್ಲದೇ ಇಡೀ ಪಶ್ಚಿಮ ಘಟ್ಟವನ್ನೇ ನಾಶಮಾಡುತ್ತದೆ. ಬಂದರಿನಿಂದಾಗಿ ತದಡಿ - ಅಘನಾಶಿನಿ ಭಾಗದಲ್ಲಿ ದೇಶದಲ್ಲಿಯೇ ಅತ್ಯಧಿಕವಾಗಿ ಸಿಗುತ್ತಿರುವ ಬೆಳಚು (Shellfish) ಹಾಗೂ ಸಿಗಡಿ ಮತ್ತು ಉತ್ತಮ ತಳಿಯ ಮೀನುಗಳು ಬಂದರು ನಿರ್ಮಾಣದ ಆರಂಭದಲ್ಲಿಯೇ ಶಾಶ್ವತವಾಗಿ ನಿರ್ನಾಮವಾಗುವವು. ಜೊತೆಗೆ ರಾಜ್ಯದಲ್ಲಿಯೇ ಉತ್ತಮ ಉಪ್ಪನ್ನು ಉತ್ಪಾದಿಸುವ ಸುಮಾರು 500 ಎಕರೆ ಭೂಪ್ರದೇಶದಲ್ಲಿ ಇನ್ನು ಮುಂದೆ ಉಪ್ಪು ಬೆಳೆಯುವುದು ಇತಿಹಾಸವಾಗುವುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಂದರು ಯೋಜನೆಯ ಹೆಸರಿನಲ್ಲಿ ಬರುವ ಇನ್ನಿತರ ಅನೇಕ ಬೃಹತ್ ಉದ್ದಿಮೆಗಳಿಗೆ ಈ ಬಂದರು ಮಹಾದ್ವಾರವಾಗುವುದು. ಪಶ್ಚಿಮ ಘಟ್ಟದಲ್ಲಿ ಸಿಗುತ್ತದೆ ಎಂದು ಭಾವಿಸಲಾದ ಮ್ಯಾಂಗನೀಸ್ ಮತ್ತು ಭಾರೀ ಪ್ರಮಾಣದಲ್ಲಿ ಕಲ್ಲಿದ್ದಲು ಆಮದು ರಫ್ತು ಹಾಗೂ ಸಂಗ್ರಹಣೆಗೆ ಈಗಾಗಲೇ ನಿಗದಿ ಪಡಿಸಿರುವ ಭಾರಿ ಪ್ರಮಾಣದ ಭೂಪ್ರದೇಶ ಬಳಕೆಯಾಗುವುದು ಎನ್ನಲಾಗಿದೆ.

# ಈ ಅಹವಾಲುಗಳನ್ನು ಕೇಳುವವರಾರು ?

* ಅಘನಾಶಿನಿ ಸಂಗಮ ಪ್ರದೇಶದಲ್ಲಿ 100 ಅಡಿ ಆಳ ಹೂಳೆತ್ತಲಾಗುತ್ತಿರುವುದು ನಿಜವೇ ?
* ಈ ಎತ್ತಿದ ಹೂಳನ್ನು ಬಂದರಿನ ಕಟ್ಟೆ ಹಾಗೂ ಧಕ್ಕೆಗಳನ್ನು ನಿರ್ಮಿಸಲು ಹೊಸ್ಕಟ್ಟಾದ ಸುಮಾರು 120 ಎಕರೆ ಪ್ರದೇಶದಲ್ಲಿ ಹಾಕಲಾಗುತ್ತಿದೆ ಇದು ನಿಜವೇ ?
* ಹೊಸ್ಕಟ್ಟಾ ಮತ್ತು ಇತರೇ ಮಜಿರೆಗಳಲ್ಲಿ ಬಂದರಿಗೆ ಸಂಬಂಧ ಪಟ್ಟಂತ ಗೊಡಾನ್‌ಗಳು, ಕಾರ್ಯಾಲಯಗಳು ನಿರ್ಮಾಣವಾಗುತ್ತಿರುವುದು ನಿಜವೇ ?
* ಗೋಕರ್ಣ ರೈಲ್ವೆ ಸ್ಟೇಷನ್ನಿಂದ ತದಡಿ ಬಂದರಿನ ತನಕ ರೈಲ್ವೆ ಲೈನಿಗಾಗಿ ಜಾಗ ಖಾಲಿ ಮಾಡಬೇಕಾದವರ ಕುಟುಂಬಗಳ ಸಂಖ್ಯೆ ಎಷ್ಟು ?
* ಮಂಗಳೂರಿನಲ್ಲಿ ವಿಸ್ತರಣೆಗೆ ಅವಕಾಶವಿದ್ದರೂ ಮತ್ತು ಇತಿಹಾಸ ಕಾಲದಿಂದಲೂ ಪ್ರಸಿದ್ಧವಾದ ನೈಸರ್ಗಿಕ ಬಂದರಾದ ಕಾರವಾರದಲ್ಲಿ ಸುಲಭವಾಗಿ 400 ಎಕರೆ ಪ್ರದೇಶದಷ್ಟು ಜಮೀನಿದ್ದರೂ ಸಹ ಈ ತದಡಿ ಬಂದರಿನ ಹಿನ್ನೆಲೆಯೇನು ?
* ಬಂದರಿನಲ್ಲಿ ಮತ್ತೆ ಹೂಳು ತುಂಬದಿರುವಂತೆ ಅಘನಾಶಿನಿ ನದಿಯನ್ನು ಕಾಲುವೆ (ಚಾನೆಲ್) ಮೂಲಕ ಸಂಗಮ ಪ್ರದೇಶದ ದಿಕ್ಕನ್ನು ಬದಲಾಯಿಸಲಾಗುತ್ತಿದೆ ಇದು ನಿಜವೇ ?
* 1800 ಎಕರೆ ಪ್ರದೇಶದಲ್ಲಿ ಸಂಗ್ರಹಿಸಬಹುದಾದ [ಆಮದು-ರಫ್ತಿಗಾಗಿ] ವಸ್ತುಗಳು ಯಾವುವು ? ಮತ್ತು ಪ್ರಮಾಣ ಎಷ್ಟು ?
* ಬಂದರಿನಲ್ಲಿ ಏಕಕಾಲದಲ್ಲಿ ಎಷ್ಟು ಹಡಗುಗಳು ಕಾರ್ಯನಿರ್ವಹಿಸುತ್ತವೆ ?
* ಬಂದರು ಯೋಜನೆಯಿಂದ ರೈತ, ಕೂಲಿ ಕಾರ್ಮಿಕರಿಗೆ ಹೇಗೆ ಉದ್ಯೋಗ ದೊರೆಯುತ್ತದೆ. ?
* ಸ್ಥಳೀಯ 17 ಸಾವಿರಕ್ಕೂ ಹೆಚ್ಚು ಮೀನುಗಾರರು, 1700 ಕ್ಕೂ ಮಿಕ್ಕಿದ ದೋಣಿಗಳಿಂದ ವರ್ಷಕ್ಕೆ ಸರಾಸರಿ 12ಸಾವಿರ ಮೆಟ್ರಿಕ್ ಟನ್‌ಗಳಷ್ಟು ಅಧಿಕ ಮೀನು ಉತ್ಪನ್ನ ಇದೆ. ಇದರ ಮುಂದಿನ ಭವಿಷ್ಯವೇನು ? ಮತ್ತು ಇವರಿಗೆ ರಕ್ಷಣೆ ಹೇಗೆ ?
* ನಿರಾಶ್ರಿತರಾಗುವವರಿಗೆ ಪುನರ್ವಸತಿ, ಪರಿಹಾರ ಹಾಗೂ ಉದ್ಯೋಗವಕಾಶಗಳು ಎಷ್ಟು ?
* ಬಂದರು ನಿರ್ಮಾಣದಿಂದ ಸ್ಥಳೀಯರಿಗೆ ಸಿಗುವ ಉದ್ಯೋಗಗಳು ಯಾವವು ಮತ್ತು ಎಷ್ಟು ?
* ಬಂದರು ಯೋಜನೆಯಿಂದ ಉದ್ಯೋಗ ಕಳೆದುಕೊಳ್ಳವವರಿಗೆ ಪರಿಹಾರವೇನು ?
* ಈಗಿರುವ ಡ್ಯಾನಿಶ್ ಬಂದರಿನ ಭವಿಷ್ಯವೇನು ?
* ಮುಂದೆ ಯಾವತ್ತೂ ನಿರಾಶ್ರಿತರ ಹಾಗೂ ಸ್ಥಳೀಯರ ಆರೋಗ್ಯ ರಕ್ಷಣೆ ಹೇಗೆ ?

**ಈ ಎಲ್ಲ ಪ್ರಶ್ನೆಗಳಿಗೆ ಜನರಿಗೆ ಸರಕಾರದಿಂದ ಉತ್ತರ ದೊರಕಿಸಬೇಕಾದ ಕಾರ್ಯ ಸಂಘ ಸಂಸ್ಥೆಗಳು ಹಾಗೂ ಜನ ಪ್ರತಿನಿಧಿಗಳದ್ದು ಅಲ್ಲವೇ ?**

• ಪ್ರಕಟಣೆ •
ಸ್ನೇಹಕುಂಜ
ಕಾಸರಕೋಡ, ಹೊನ್ನಾವರ
☎ : 30332

ದೀನಬಂಧು ಮುದ್ರಣ, ಹೊನ್ನಾವರ. ✆ : 22287

# ಬಂದರು ಬಂದರೆ ಯಾರಿಗೆ ತೊಂದರೆ ?

"ಈ ಭೂಮಿಯ ಮೇಲಿನ ಕಟ್ಟಕಡೆಯ ಮರವನ್ನು ಕಡಿದ ಮೇಲೆ ;
ಈ ಭೂಮಿಯ ಮೇಲಿನ ಕೊನೆಯ ನದಿಯನ್ನು ವಿಷಮಯಗೊಳಿಸಿದ ಮೇಲೆ ;
ಈ ಜಲದಲ್ಲಿಯ ಕೊನೆಯ ಮೀನನ್ನು ಹಿಡಿದು ನುಂಗಿದ ಮೇಲೆಯೇ
ಕೇವಲ ಹಣಮಾತ್ರದಿಂದ, ಏನನ್ನೂ ಮಾಡಲಾಗುವುದಿಲ್ಲ ಎಂಬ ಸತ್ಯ ತಿಳಿಯುತ್ತದೆ."

ಇದೊಂದು ರೆಡ್ ಇಂಡಿಯನ್ ಗಾದೆ. ಕೋಲಂಬಸ್‌ನು ಅಮೇರಿಕ ಶೋಧದ ನಂತರದಲ್ಲಿ ಅಮೇರಿಕೆಯ ಆದಿ ನಿವಾಸಿಗಳಾದ ರೆಡ್ ಇಂಡಿಯನ್ನರ ಮೇಲೆ ಆದ ಸಾಂಸ್ಕೃತಿಕ, ದೈಹಿಕ ಆಘಾತದಲ್ಲಿ ಇಡೀ ರೆಡ್ ಇಂಡಿಯನ್ ಸಮುದಾಯ ನಾಮಾವಶೇಷವಾಗುವ ಹಂತಕ್ಕೆ ಬಂದಾಗ ಆ ಸಮುದಾಯದಿಂದ ಹೊರಹೊಮ್ಮಿದ ಅನುಭವದ – ನೋವಿನ – ಕಟು ವಾಸ್ತವದ ದಾರ್ಶನಿಕ ಮಾತು ಇದು. ಇಂದು ಈ ಮಾತು ಭಾರತಕ್ಕೂ ಅನ್ವಯಿಸುತ್ತದೆ. ಅಂತಹ ವಿಕಟ ಪರಿಸ್ಥಿತಿಯಲ್ಲಿ ಇಲ್ಲಿನ ಕರಾವಳಿ ಸಮುದಾಯ ಸಿಲುಕಿಕೊಳ್ಳುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ತದಡಿಯಲ್ಲಿ ಸ್ಥಾಪಿಸಲುದ್ದೇಶಿಸಿರುವ ಬೃಹತ್ ಬಂದರು ಯೋಜನೆಯು ಸುತ್ತಲಿನ ಬಹುದೊಡ್ಡ ಪ್ರಮಾಣದ ಭೂಭಾಗವನ್ನು ವ್ಯಾಪಿಸಲಿದೆ. ಈ ಪ್ರದೇಶವು ದೇಶದಲ್ಲಿಯೇ ಸುಂದರ ಹಾಗೂ ಜೀವ ವೈವಿಧ್ಯತೆಯ ನೈಸರ್ಗಿಕ ತಾಣವಾಗಿದೆ. ಬಂದರು ಇಲ್ಲಿ ವಸಾಹತು ಹೊಂದುವುದರಿಂದ ಸುಮಾರು 1500ಕ್ಕೂ ಹೆಚ್ಚು ಕುಟುಂಬಗಳು ಉದ್ಯೋಗ ಕಳೆದುಕೊಳ್ಳುವುದರ ಜೊತೆಗೆ ಬಹುದೊಡ್ಡ ಪ್ರಮಾಣದಲ್ಲಿ ನಿರಾಶ್ರಿತ ಸಮಸ್ಯೆಯನ್ನು ಎದುರಿಸಲಿವೆ. ಈ ಸುತ್ತ ಮುತ್ತಲಿನ ಪ್ರದೇಶದಲ್ಲಿ ಮೀನುಗಾರರು, ಹಾಲಕ್ಕಿಗಳು, ನಾಡವ–ನಾಯಕ, ನಾಮಧಾರಿಗಳು, ಪಟಗಾರ, ಹಳ್ಳೇರ, ಗಾಬೀತ, ಮುಸ್ಲಿಂ ಇವರು ಪ್ರಮುಖವಾಗಿ ನೆಲೆಸಿದವರಾಗಿದ್ದಾರೆ. ಇವರೆಲ್ಲರೂ ಹೆಚ್ಚಿನದಾಗಿ ಸಮುದ್ರದ ಉತ್ಪನ್ನವನ್ನು ಅವಲಂಬಿಸಿದ್ದಾರೆ.

ತದಡಿ ಬಂದರು ಪ್ರದೇಶ ಮತ್ತು ಸರಕಾರ ಸ್ವಾಧೀನಪಡಿಸಿಕೊಂಡ ಹಿರೇಗುತ್ತಿ ಬಳಿಯ 1848 ಎಕರೆ ಗಜನಿ ಭೂಮಿಯನ್ನು ವಶಪಡಿಸಿಕೊಂಡು ಯೋಜನೆಯನ್ನು ದಿಢೀರನೆ ಅನುಷ್ಠಾನಕ್ಕೆ ತರಲಾಗಿದೆ. ಈ ಯೋಜನೆಯ ರೂಪರೇಷೆ ಏನು? ಪರಿಹಾರ ಹೇಗೆ? ನಿರಾಶ್ರಿತರಾಗುವವರ ಸಂಖ್ಯೆ ಎಷ್ಟು ? ಸಾಧಕ ಬಾಧಕಗಳೇನು ? ಎಂಬ ಇನ್ನಿತರ ಯಾವ ಪ್ರಮುಖ ಅಂಶಗಳನ್ನೂ ಜನರಿಗೆ ತಿಳಿಸದೇ ಯೋಜನೆಯನ್ನು ತರಲಾಗಿದೆ. ಈ ಜಿಲ್ಲೆಯಲ್ಲಿ ಈಗಾಗಲೇ ಸೀಬರ್ಡ್, ಕೈಗಾ, ಕೊಡಸಳ್ಳಿ, ಶರಾವತಿ ಟೇಲರೇಸ್ ಯೋಜನೆಯಿಂದ ಪರಿಹಾರ ಹಾಗೂ ನಿರಾಶ್ರಿತ ಸಮಸ್ಯೆಗಳಿಂದ ಜನರು ಜರ್ಜರಿತರಾಗಿದ್ದಾರೆ.

ಪರಿಸರ ಕಾಯ್ದೆ ಪ್ರಕಾರ ಯಾವುದೇ ಬೃಹತ್ (29) ಯೋಜನೆಗಳು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಿ ಜನರಿಗೆ ಇದರ ಮಾಹಿತಿ ನೀಡಿ ಅವರ ಅಹವಾಲು ಪಡೆಯಬೇಕೆಂದು ತಿಳಿಸಲಾಗಿದೆ. ಇಂತಹ ಬೃಹತ್ (29) ಯೋಜನೆಗಳಲ್ಲಿ ತದಡಿ ಬಂದರು ಯೋಜನೆಯೂ ಒಂದಾಗಿದೆ. ಆದರೆ ಬಂದರು ಪ್ರಾರಂಭಿಸುವ ಪೂರ್ವದಲ್ಲಿ ಸ್ಥಾನಿಕ ಅನುಮತಿ ಪಡೆಯದೆ ಬಂದಿರುವ ಈ ಯೋಜನೆ ಬಗ್ಗೆ ಜನರು ಆತಂಕಗೊಂಡಿದ್ದಾರೆ. ಬಂದರು ಯೋಜನೆ ಯಾರ ಲಾಭಕ್ಕೆ ? ಜನಸಾಮಾನ್ಯರನ್ನು ಅತಂತ್ರಗೊಳಿಸಲೇ ಎಂಬ ಗುಮಾನಿ ಇದೆ.

ಪರಿಸರ ವಿಜ್ಞಾನಿಗಳ ಪ್ರಕಾರ ಈ ತದಡಿ ಬೃಹತ್ ಬಂದರು ಯೋಜನೆಯು ಈ ಸೀಮಿತ ಪ್ರದೇಶಕ್ಕೆ ಮಾತ್ರವಲ್ಲದೇ ಇಡೀ ಪಶ್ಚಿಮ ಘಟ್ಟವನ್ನೇ ನಾಶಮಾಡುತ್ತದೆ. ಬಂದರಿನಿಂದಾಗಿ ತದಡಿ - ಅಘನಾಶಿನಿ ಭಾಗದಲ್ಲಿ ದೇಶದಲ್ಲಿಯೇ ಅತ್ಯಧಿಕವಾಗಿ ಸಿಗುತ್ತಿರುವ ಬೆಳಚು (Shellfish) ಹಾಗೂ ಸಿಗಡಿ ಮತ್ತು ಉತ್ತಮ ತಳಿಯ ಮೀನುಗಳು ಬಂದರು ನಿರ್ಮಾಣದ ಆರಂಭದಲ್ಲಿಯೇ ಶಾಶ್ವತವಾಗಿ ನಿರ್ನಾಮವಾಗುವವು. ಜೊತೆಗೆ ರಾಜ್ಯದಲ್ಲಿಯೇ ಉತ್ತಮ ಉಪ್ಪನ್ನು ಉತ್ಪಾದಿಸುವ ಸುಮಾರು 500 ಎಕರೆ ಭೂಪ್ರದೇಶದಲ್ಲಿ ಇನ್ನು ಮುಂದೆ ಉಪ್ಪು ಬೆಳೆಯುವುದು ಇತಿಹಾಸವಾಗುವುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಂದರು ಯೋಜನೆಯ ಹೆಸರಿನಲ್ಲಿ ಬರುವ ಇನ್ನಿತರ ಅನೇಕ ಬೃಹತ್ ಉದ್ದಿಮೆಗಳಿಗೆ ಈ ಬಂದರು ಮಹಾದ್ವಾರವಾಗುವುದು. ಪಶ್ಚಿಮ ಘಟ್ಟದಲ್ಲಿ ಸಿಗುತ್ತದೆ ಎಂದು ಭಾವಿಸಲಾದ ಮ್ಯಾಂಗನೀಸ್ ಮತ್ತು ಭಾರೀ ಪ್ರಮಾಣದಲ್ಲಿ ಕಲ್ಲಿದ್ದಲು ಆಮದು ರಫ್ತು ಹಾಗೂ ಸಂಗ್ರಹಣೆಗೆ ಈಗಾಗಲೇ ನಿಗದಿ ಪಡಿಸಿರುವ ಭಾರಿ ಪ್ರಮಾಣದ ಭೂಪ್ರದೇಶ ಬಳಕೆಯಾಗುವುದು ಎನ್ನಲಾಗಿದೆ.

# ಈ ಅಹವಾಲುಗಳನ್ನು ಕೇಳುವವರಾರು ?

* ಅಘನಾಶಿನಿ ಸಂಗಮ ಪ್ರದೇಶದಲ್ಲಿ 100 ಅಡಿ ಆಳ ಹೂಳೆತ್ತಲಾಗುತ್ತಿರುವುದು ನಿಜವೇ ?
* ಈ ಎತ್ತಿದ ಹೂಳನ್ನು ಬಂದರಿನ ಕಟ್ಟೆ ಹಾಗೂ ಧಕ್ಕೆಗಳನ್ನು ನಿರ್ಮಿಸಲು ಹೊಸ್ಕಟ್ಟಾದ ಸುಮಾರು 120 ಎಕರೆ ಪ್ರದೇಶದಲ್ಲಿ ಹಾಕಲಾಗುತ್ತಿದೆ ಇದು ನಿಜವೇ ?
* ಹೊಸ್ಕಟ್ಟಾ ಮತ್ತು ಇತರೇ ಮಜಿರೆಗಳಲ್ಲಿ ಬಂದರಿಗೆ ಸಂಬಂಧ ಪಟ್ಟಂತ ಗೊಡಾನ್‌ಗಳು, ಕಾರ್ಯಾಲಯಗಳು ನಿರ್ಮಾಣವಾಗುತ್ತಿರುವುದು ನಿಜವೇ ?
* ಗೋಕರ್ಣ ರೈಲ್ವೆ ಸ್ಟೇಷನ್ನಿಂದ ತದಡಿ ಬಂದರಿನ ತನಕ ರೈಲ್ವೆ ಲೈನಿಗಾಗಿ ಜಾಗ ಖಾಲಿ ಮಾಡಬೇಕಾದವರ ಕುಟುಂಬಗಳ ಸಂಖ್ಯೆ ಎಷ್ಟು ?
* ಮಂಗಳೂರಿನಲ್ಲಿ ವಿಸ್ತರಣೆಗೆ ಅವಕಾಶವಿದ್ದರೂ ಮತ್ತು ಇತಿಹಾಸ ಕಾಲದಿಂದಲೂ ಪ್ರಸಿದ್ಧವಾದ ನೈಸರ್ಗಿಕ ಬಂದರಾದ ಕಾರವಾರದಲ್ಲಿ ಸುಲಭವಾಗಿ 400 ಎಕರೆ ಪ್ರದೇಶದಷ್ಟು ಜಮೀನಿದ್ದರೂ ಸಹ ಈ ತದಡಿ ಬಂದರಿನ ಹಿನ್ನೆಲೆಯೇನು ?
* ಬಂದರಿನಲ್ಲಿ ಮತ್ತೆ ಹೂಳು ತುಂಬದಿರುವಂತೆ ಅಘನಾಶಿನಿ ನದಿಯನ್ನು ಕಾಲುವೆ (ಚಾನೆಲ್) ಮೂಲಕ ಸಂಗಮ ಪ್ರದೇಶದ ದಿಕ್ಕನ್ನು ಬದಲಾಯಿಸಲಾಗುತ್ತಿದೆ ಇದು ನಿಜವೇ ?
* 1800 ಎಕರೆ ಪ್ರದೇಶದಲ್ಲಿ ಸಂಗ್ರಹಿಸಬಹುದಾದ [ಆಮದು-ರಫ್ತಿಗಾಗಿ] ವಸ್ತುಗಳು ಯಾವುವು ? ಮತ್ತು ಪ್ರಮಾಣ ಎಷ್ಟು ?
* ಬಂದರಿನಲ್ಲಿ ಏಕಕಾಲದಲ್ಲಿ ಎಷ್ಟು ಹಡಗುಗಳು ಕಾರ್ಯನಿರ್ವಹಿಸುತ್ತವೆ ?
* ಬಂದರು ಯೋಜನೆಯಿಂದ ರೈತ, ಕೂಲಿ ಕಾರ್ಮಿಕರಿಗೆ ಹೇಗೆ ಉದ್ಯೋಗ ದೊರೆಯುತ್ತದೆ. ?
* ಸ್ಥಳೀಯ 17 ಸಾವಿರಕ್ಕೂ ಹೆಚ್ಚು ಮೀನುಗಾರರು, 1700 ಕ್ಕೂ ಮಿಕ್ಕಿದ ದೋಣಿಗಳಿಂದ ವರ್ಷಕ್ಕೆ ಸರಾಸರಿ 12ಸಾವಿರ ಮೆಟ್ರಿಕ್ ಟನ್‌ಗಳಷ್ಟು ಅಧಿಕ ಮೀನು ಉತ್ಪನ್ನ ಇದೆ. ಇದರ ಮುಂದಿನ ಭವಿಷ್ಯವೇನು ? ಮತ್ತು ಇವರಿಗೆ ರಕ್ಷಣೆ ಹೇಗೆ ?
* ನಿರಾಶ್ರಿತರಾಗುವವರಿಗೆ ಪುನರ್ವಸತಿ, ಪರಿಹಾರ ಹಾಗೂ ಉದ್ಯೋಗವಕಾಶಗಳು ಎಷ್ಟು ?
* ಬಂದರು ನಿರ್ಮಾಣದಿಂದ ಸ್ಥಳೀಯರಿಗೆ ಸಿಗುವ ಉದ್ಯೋಗಗಳು ಯಾವವು ಮತ್ತು ಎಷ್ಟು ?
* ಬಂದರು ಯೋಜನೆಯಿಂದ ಉದ್ಯೋಗ ಕಳೆದುಕೊಳ್ಳುವವರಿಗೆ ಪರಿಹಾರವೇನು ?
* ಈಗಿರುವ ಡ್ಯಾನಿಶ್ ಬಂದರಿನ ಭವಿಷ್ಯವೇನು ?
* ಮುಂದೆ ಯಾವತ್ತೂ ನಿರಾಶ್ರಿತರ ಹಾಗೂ ಸ್ಥಳೀಯರ ಆರೋಗ್ಯ ರಕ್ಷಣೆ ಹೇಗೆ ?

**ಈ ಎಲ್ಲ ಪ್ರಶ್ನೆಗಳಿಗೆ ಜನರಿಗೆ ಸರಕಾರದಿಂದ ಉತ್ತರ ದೊರಕಿಸಬೇಕಾದ ಕಾರ್ಯ ಸಂಘ ಸಂಸ್ಥೆಗಳು ಹಾಗೂ ಜನ ಪ್ರತಿನಿಧಿಗಳದ್ದು ಅಲ್ಲವೇ ?**

• ಪ್ರಕಟಣೆ •
ಸ್ನೇಹಕುಂಜ
ಕಾಸರಕೋಡ, ಹೊನ್ನಾವರ
☎ : **30332**

ದೀನಬಂಧು ಮುದ್ರಣ, ಹೊನ್ನಾವರ. ✆ : **22287**

ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ
ಸಮುದಾಯ ವಿಜ್ಞಾನ ಕೇಂದ್ರ ಹಾಗೂ ಮಾಧ್ಯಮಿಕ ಶಿಕ್ಷಣ
ಸಮಿತಿ, ನೀರ್ನಳ್ಳಿ ಇವರ ಆಶ್ರಯದಲ್ಲಿ

## ಪರಿಸರ ಬರಹಗಾರರ ಕಾರ್ಯಾಗಾರ ಸಮಾರೋಪ ಸಮಾರಂಭ

# ಆಮಂತ್ರಣ

ದಿನಾಂಕ : ೨೭ ಡಿಸೆಂಬರ್ ೧೯೯೮
ಸಮಯ : ಮಧ್ಯಾಹ್ನ ೪ ರಿಂದ ೫-೩೦

ಸ್ಥಳ : ಮಾಧ್ಯಮಿಕ ಶಿಕ್ಷಣಾಲಯ
ನೀರ್ನಳ್ಳಿ

ಅಧ್ಯಕ್ಷತೆ : **ಶ್ರೀ ಎಂ. ಎಸ್. ಹೆಗಡೆ, ಇಟ್ಗುಳಿ**
ಅಧ್ಯಕ್ಷರು, ಮಾಧ್ಯಮಿಕ ಶಿಕ್ಷಣ ಸಮಿತಿ, ನೀರ್ನಳ್ಳಿ

ಮುಖ್ಯ ಅತಿಥಿಗಳು : **ಶ್ರೀ ನಾಗೇಶ ಹೆಗಡೆ**
ಪ್ರಜಾವಾಣಿ ಪತ್ರಿಕೆ, ಬೆಂಗಳೂರು

**ಡಾ|| ಎನ್. ಎ. ಮಧ್ಯಸ್ಥ, ಉಡುಪಿ**
ವಿಜ್ಞಾನಿಗಳು

**ಶ್ರೀ ಮಂಜುನಾಥ ಹೆಗಡೆ, ಹೊಸಬಾಳೆ**
ವನ್ಯಜೀವಿ ಛಾಯಾಗ್ರಾಹಕರು

## ಆದರದ ಸ್ವಾಗತ

**ಶ್ರೀ ಪಾಂಡುರಂಗ ಹೆಗಡೆ**
ಪರಿಸರ ಸಂರಕ್ಷಣಾ ಕೇಂದ್ರ
ಶಿರಸಿ

**ಶ್ರೀ ವಿ. ಆರ್. ಹೆಗಡೆ**
ಮುಖ್ಯಾಧ್ಯಾಪಕರು
ಮಾಧ್ಯಮಿಕ ಶಿಕ್ಷಣಾಲಯ, ನೀರ್ನಳ್ಳಿ
ಹಾಗೂ ಶಿಕ್ಷಕರು, ಸಿಬ್ಬಂದಿಗಳು

**ಶ್ರೀ ಶ್ರೀನಿವಾಸ ಬಾಳೇಗದ್ದೆ**
ಕಾರ್ಯದರ್ಶಿ
ಸಮುದಾಯ ವಿಜ್ಞಾನ ಕೇಂದ್ರ, ನೀರ್ನಳ್ಳಿ

: ಸಹಕಾರ :

ಯುವಬಳಗ ಹೊನ್ನೇಗದ್ದೆ
ಇಟ್ಗುಳಿ ಗ್ರೂಪ್ ಗ್ರಾಮಗಳ ಸೇವಾ ಸಹಕಾರಿ ಸಂಘ, ನೀರ್ನಳ್ಳಿ.
ನೀರ್ನಳ್ಳಿ, ಹೊನ್ನೇಗದ್ದೆ ಸುತ್ತಲಿನ ಗ್ರಾಮಸ್ಥರು.

PSK F1

# ರೈತ ಮಿತ್ರ

## ನವೀನ ಮಾದರಿಯ ಉರುವಲು ಉಳಿತಾಯ ಶಾಖಪೆಟ್ಟಿಗೆ

## FUEL EFFICIENT DRIER FOR AGRICULTURE CROP DRYING

## ಬಳಕೆದಾರರ ಮಾಹಿತಿ ಕೈಪಿಡಿ


: ತಯಾರಕರು :

ಎಸ್ಸನ್ ಟೆಕ್ನೊಲಜೀಸ್ ಪ್ರೈವೇಟ ಲಿಮಿಟೆಟ್

ವಿಕಾಸ ಕೋಲ್ಡ ಸ್ಟೋರ್ಜ ಕಾಂಪೌಂಡ

ಬನವಾಸಿ ರಸ್ತೆ

ಶಿರಸಿ 581 401 (ಉ.ಕ.)

PH: off: 26855 Resi: 79394

# ನವೀನ ಮಾದರಿಯ ಉರುವಲು ಉಳಿತಾಯದ ಶಾಖಪೆಟ್ಟಿಗೆ

# "ರೈತ ಮಿತ್ರ"

ಬೆಳೆ ಸಂಸ್ಕರಣೆಯು, ಯಾವುದೇ ಕೃಷಿ ಉತ್ಪನ್ನ ಬೆಳೆಗಾರನಿಂದ ಬಳಕೆದಾರನಿಗೆ ಹಸ್ತಾಂತರಗೊಳ್ಳುವ ಪೂರ್ವದ ಅಂತಿಮಘಟ್ಟ. ಈ ವ್ಯವಸ್ಥೆ ಸಮರ್ಪಕವಾಗದಿದ್ದಲ್ಲಿ ಬೆಳೆಗಾರನ ಪ್ರಯತ್ನವೆಲ್ಲ ನಿಷ್ಫಲ. ಸರಿಯಾದ ಕ್ರಮದಲ್ಲಿ ಕನಿಷ್ಠ ತೇವಾಂಶವಿರುವಂತೆ ಬೆಳೆಯನ್ನು ಸಕಾಲದಲ್ಲಿ ಒಣಗಿಸುವುದು, ಬೆಳೆ ಸಂಸ್ಕರಣೆಯಲ್ಲಿ ಅತಿ ಮುಖ್ಯವಾದ ಅಂಶ.

ಇತ್ತೀಚೆಗೆ ಏಲಕ್ಕಿ, ಅಡಿಕೆ, ತೆಂಗು, ಬಾಳೆ, ಮಾವು, ಹಲಸು ಮತ್ತು ವಿವಿಧ ರೀತಿಯ ಕಾಯಿಪಲ್ಲೆ, ಮತ್ತು ಸಂಬಾರ ಬೆಳೆಗಳನ್ನು ಒಣಗಿಸಲು ಸೂಕ್ತವಾದ ವಿವಿಧ ಮಾದರಿಯ ಶಾಖಪೆಟ್ಟಿಗೆ (Drier)ಗಳು ಬಳಕೆಯಲ್ಲಿ ಬರುತ್ತಿವೆ. ಬೆಳೆಗಾರರಿಗೆ ಬಳಸಲು ಅತಿ ಸುಲಭವಾಗಿರಬೇಕು, ಅತಿ ಕಡಿಮೆ ಉರುವಲಿನ ಬಳಕೆಯಿಂದ ಅತಿ ಹೆಚ್ಚಿನ ಪ್ರಮಾಣದ ಬೆಳೆಯನ್ನು ಒಣಗಿಸಲು ಸಾಧ್ಯವಾಗಿರಬೇಕು. ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ವಿವಿಧ ಅಳತೆಯ "ರೈತಮಿತ್ರ" ಶಾಖಪೆಟ್ಟಿಗೆ (Direr)ಗಳನ್ನು ವಿನ್ಯಾಸಗೊಳಿಸಲಾಗಿದೆ. ಇದರಿಂದಾಗಿ ಈ ಮಾದರಿಯ ಶಾಖಪೆಟ್ಟಿಗೆಗಳು ಬೆಳೆಗಾರರಲ್ಲಿ ಬಹು ಜನಪ್ರಿಯಗೊಳ್ಳುತ್ತಿವೆ.

"ರೈತಮಿತ್ರ" ಉರುವಲ ಉಳಿತಾಯದ ಶಾಖಪೆಟ್ಟಿಗೆಯನ್ನು ಬಳಸುವ ಬೆಳೆಗಾರರಿಗೆ ಗರಿಷ್ಠ ಪ್ರಯೋಜನ ದೊರೆತು ಇದರ ಬಳಕೆಯಿಂದ ಉತ್ತಮ ಗುಣಮಟ್ಟದ ಉತ್ಪಾದನೆ ಲಭ್ಯವಾಗುವಂತಾಗಲೆಂಬ ಉದ್ದೇಶದಿಂದ ವಿವಿಧ ಬೆಳೆಗಳಿಗೆ ಸಂಬಂಧಿಸಿದಂತೆ ಈ ನವೀನ ಮಾದರಿ ಶಾಖಪೆಟ್ಟಿಗೆಯನ್ನು ಬಳಸುವ ಕುರಿತು ಕೆಲಸೂಚನೆಗಳನ್ನು ಸಂಗ್ರಹಿಸಿಕೊಡಲಾಗಿದೆ.

ಬೇರೆ ಬೇರೆ ಬೆಳೆಗಳನ್ನು ಒಣಗಿಸುವ ಪೂರ್ವದಲ್ಲಿ ಈ ಕೆಳಗಿನ ಅಂಶಗಳನ್ನು ಅನುಸರಿಸಿ ಸ್ವಲ್ಪ ಪ್ರಮಾಣದ ಉತ್ಪಾದನೆಯನ್ನು ಒಣಗಿಸಿ ಅದರ ಗುಣಮಟ್ಟವನ್ನು ಪರೀಕ್ಷಿಸಿ ಆಮೇಲೆ ಅಧಿಕ ಪ್ರಮಾಣದ ಉತ್ಪಾದನೆಯನ್ನು ಒಣಗಿಸಬಹುದಾಗಿದೆ. ಇದರಿಂದ ಯಾವುದೇ ಕಾರಣದಿಂದ ಉತ್ಪಾದನೆಯ ಗುಣಮಟ್ಟ ಕೆಡದಂತೆ ಮುನ್ನೆಚ್ಚರಿಕೆ ವಹಿಸಿದಂತಾಗುವುದು.

ಕಡಿಮೆ ಅವಧಿಯಲ್ಲಿ ಉತ್ತಮ ಗುಣಮಟ್ಟದ ನಿರ್ದಿಷ್ಟಪಡಿಸಿದ ತೇವಾಂಶವಿರುವ ಉತ್ಪಾದನೆಯನ್ನು ಪಡೆಯಲು ಒಂದು ಬಾರಿಗೆ ಶಾಖಪೆಟ್ಟಿಗೆಯೊಳಗೆ ಸರಿಸುಮಾರು ಒಂದೇ ಪ್ರಮಾಣದ ತೇವಾಂಶವಿರುವ ಒಂದೇ ಬೆಳೆಯನ್ನು ಒಣಗಿಸುವುದು ಸೂಕ್ತ. ಉದಾಹರಣೆ ಬೇರೆ ಬೇರೆ ಪ್ರಮಾಣದಲ್ಲಿ ತೇವಾಂಶವಿರುವ ಅಡಿಕೆ ಮತ್ತು ತೆಂಗಿನ ಬೆಳೆಗಳನ್ನು ಒಂದೇ ಬಾರಿಗೆ ಒಣಗಿಸುವುದು ಅನುಕೂಲಕರವಲ್ಲ.

## ಒಣಗಿಸುವ ವಿಧಾನಗಳು

**ತೆಂಗು :** ಹನ್ನೊಂದು ತಿಂಗಳ ಬೆಳವಣಿಗೆ ಹೊಂದಿದ ತೆಂಗಿನ ಕಾಯಿಗಳನ್ನು ಕೊಯ್ದು ಒಂದು ತಿಂಗಳ ನಂತರ ಸುಲಿಯಬೇಕು. ಈ ರೀತಿ ಸಿಪ್ಪೆ ಸುಲಿದ ಕಾಯಿಗಳನ್ನು ಆದಷ್ಟು ಬೇಗ (ಗರಿಷ್ಠ ಒಂದು ವಾರದ ಒಳಗೆ) ಒಡೆದು ನೀರನ್ನು ಬಸಿಯಲು ಬಿಡಬೇಕು. ಕಾಯಿ ಒಡೆದ ಮೇಲೆ ನಾಲ್ಕು ತಾಸಿಗಿಂತ ಮೊದಲು ಟ್ರೇಯೊಳಗೆ ಕಡಿಗಳನ್ನು ಮೇಲ್ಮುಖವಾಗಿ ಅಥವಾ ಅಡ್ಡವಾಗಿರುವಂತೆ ಜೋಡಿಸಬೇಕು. ಒಮ್ಮೆಗೆ 25 ಕಾಯಿ (50 ಕಡಿ)ಗಳನ್ನು 18 ಇಂಚುX36 ಇಂಚು ಅಳತೆ ಟ್ರೇಯಲ್ಲಿ ಜೋಡಿಸಬಹುದು. ಈ ಟ್ರೇಗಳನ್ನು ಶಾಖಪೆಟ್ಟಿಗೆಯೊಳಗೆ ಜೋಡಿಸಿ ಮೊದಲಿನ 8-10 ತಾಸುಗಳ ವರೆಗೆ 70°c (ಸೆಲ್ಸಿಯಸ್) ಉಷ್ಣತೆಯಲ್ಲಿ ಒಣಗಿಸುವುದರಿಂದ ಕರಟ ಮತ್ತು ಕೊಬ್ಬರಿಯನ್ನು ಬೇರ್ಪಡಿಸುವ ಹಂತಕ್ಕೆ ಬರುತ್ತದೆ. ಕರಟ ಬೇರ್ಪಡಿಸಿದ ಕೊಬ್ಬರಿಯನ್ನು ಪುನಃ ಇದೇ ರೀತಿ ಇಟ್ಟು 65°cಯಿಂದ ಕ್ರಮೇಣ 55°cಗೆ ಇಳಿಯುವಂತೆ 14-16 ತಾಸುಗಳವರೆಗೆ ಒಣಗಿಸಬೇಕು. ಇದರಿಂದ ಅತ್ಯುತ್ತಮ ಗುಣಮಟ್ಟದ ಎಣ್ಣೆ ಪಡೆಯಬಹುದಾದ ಕೊಬ್ಬರಿ ದೊರೆಯುತ್ತದೆ, ಮತ್ತು ಶೇಕಡಾವಾರು ಎಣ್ಣೆ ಪ್ರಮಾಣ ಕೂಡ ಹೆಚ್ಚಿಗೆ ದೊರೆಯುತ್ತದೆ. ಸರಾಸರಿ ಲೆಕ್ಕದಲ್ಲಿ ಉತ್ತಮ ಗುಣಮಟ್ಟದ 115 ಕಾಯಿ 25ಕಿಲೋ ಕೊಬ್ಬರಿ ಮತ್ತು ಅದರಿಂದ 15ಕಿಲೋ ಎಣ್ಣೆ ದೊರೆಯುತ್ತದೆ.

**ಏಲಕ್ಕಿ :** ಚೆನ್ನಾಗಿ ಬೆಳೆದ ಆದರೆ ಪೂರ್ತಿ ಹಣ್ಣಾಗದ (ಹಂಪು) ಏಲಕ್ಕಿ ಕೊಯ್ದ ಬಳಿಕ ಒಂದು ದಿನ ನೆರಳಿನಲ್ಲಿ ಒಣಗಿಸಬೇಕು, ನಂತರ ಟ್ರೇಯಲ್ಲಿ ಹಾಕಿ ಶಾಖಪೆಟ್ಟಿಗೆಯಲ್ಲಿ ಒಣಗಿಸಬೇಕು. ಪ್ರಾರಂಭದ 4-5 ತಾಸು 50°cಯಲ್ಲಿ ಆಮೇಲೆ 10-12 ತಾಸು 55°cಯಲ್ಲಿ ಒಣಗಿಸಬೇಕು. ಹಳದಿ ಬಣ್ಣ ಬೇಕಾದಲ್ಲಿ ಕಾಯಿ ಹಳದಿ ಬಣ್ಣಕ್ಕೆ ತಿರುಗಿದ ಮೇಲೆ ಕೊಯ್ಯಬೇಕು. ಹಣ್ಣಿನ ಮಾಗುವಿಕೆ ಹೆಚ್ಚಾದಂತೆ ಒಣಗಿಸಿದ ಏಲಕ್ಕಿ ಕಾಯಿ ಒಡೆಯುವುದು ಹೆಚ್ಚು. ಒಣಗಿಸಿದ ಏಲಕ್ಕಿ ಹಸಿ ಏಲಕ್ಕಿಯ ಪ್ರತಿಶತ 22 ರಿಂದ 25ರಷ್ಟು ತೂಕವಿರುತ್ತದೆ. 18 ಇಂಚುX36 ಇಂಚು ಅಳತೆಯ ಒಂದು ಟ್ರೇಯಲ್ಲಿ ಸುಮಾರು 2·25 ಕೈಜಿ. ಹಸಿಯಾಲಕ್ಕಿಯನ್ನು ಒಣಗಿಸಬಹುದು.

**ಬಾಳೆ :** ಹಣ್ಣಿನ ಸಿಪ್ಪೆ ಸುಲಿದು ಸುಮಾರು ಅರ್ಧ ಇಂಚು ದಪ್ಪದ ತಾಳಿಗಳನ್ನಾಗಿಸಬೇಕು. ಆ ಬಳಿಕ ತಾಳಿಗಳನ್ನು ತೆಗೆದು ಶಾಖಪೆಟ್ಟಿಗೆಯ ಟ್ರೇ ಮೇಲೆ ಹತ್ತಿ ಬಟ್ಟೆ ಅಥವಾ ರಂಧ್ರವಿರುವ ಪ್ಲಾಸ್ಟಿಕ್ ಬಟ್ಟೆಗಳನ್ನು ಹಾಸಿ ಒಂದರ ಮೇಲೊಂದು ತಾಳಿ ಬಾರದಂತೆ ಹರಡಬೇಕು. 60°c-65°c ಉಷ್ಣತೆಯಲ್ಲಿ 8-10 ತಾಸು ಒಣಗಿಸುವುದರಿಂದ ತಾಳಿಗಳನ್ನು ಬಟ್ಟೆಯಿಂದ ಬಿಡಿಸಲು ಬರುವಂತಾಗುವುದು. ಈ ಹಂತದಲ್ಲಿ ತಾಳಿಗಳನ್ನು ತೆಗೆದು ತೇವಾಂಶ ತಾಗದಂತೆ ಸಂರಕ್ಷಿಸಿಡಬೇಕು. ಸಿಪ್ಪೆ ಸುಲಿದ ಮೇಲೆ ಇಡಿಯ ಹಣ್ಣನ್ನು 3-4 ತಾಸು 60°c-65°c ಉಷ್ಣತೆಯಲ್ಲಿ ಒಣಗಿಸಿಕೊಂಡಲ್ಲಿ ತಾಳಿ ಮಾಡುವದು ಸುಲಭವಾಗುವುದು. 10ಕಿಲೋ ಬಾಳೆ ಹಣ್ಣಿನಿಂದ (ಸಿಪ್ಪೆಗೂಡಿ) ಸುಮಾರು 1 ಕಿಲೋ ಒಣಗಿಸಿದ ಹಣ್ಣು ಅಥವಾ ಸುಕೇಳಿ ದೊರೆಯುವುದು, ಒಟ್ಟು ಒಣಗಿಸುವ ಅವಧಿ 12 ರಿಂದ 15 ತಾಸು ಬೇಕಾಗುವುದು.

ಮಾವು, ಪಪ್ಪಾಯಿ ಮತ್ತು ಹಲಸಿನಹಣ್ಣು (ಬಕ್ಕೆ)ಗನ್ನು ಇದೇ ರೀತಿಯಲ್ಲಿ ಒಣಗಿಸಬಹುದು. ಆದರೆ ಈ ಹಣ್ಣುಗಳಿಗೆ ಗಂಧಕದ ಹೊಗೆಯನ್ನು ಕೇವಲ 15 ನಿಮಿಷ ಕೊಟ್ಟರೆ ಸಾಕು.

**ಅಡಿಕೆ :** 18 ಇಂಚುX36 ಇಂಚು ಅಳತೆಯ ಟ್ರೇಯಲ್ಲಿ ಸುಮಾರು 4·5kg ಬೇಯಿಸಿದ ಅಡಕೆಯನ್ನು ತುಂಬಬಹುದು, 70°cಯಲ್ಲಿ ಅಡಿಕೆಯನ್ನು ಪೂರ್ಣ ಒಣಗಿಸಲು ಸುಮಾರು

22–25 ತಾಸು ಬೇಕು (ಬೆಟ್ಟೆ, ಆಪಿ ಸಹಿತ) ಅಡಿಕೆಯು ಬೆಳವಣಿಗೆಗೆ ಅನುಗುಣವಾಗಿ ತೇವಾಂಶ ಕಳೆದುಕೊಳ್ಳುವ ಪ್ರಮಾಣ ಹೆಚ್ಚು ಕಡಿಮೆ ಆಗುತ್ತದೆ. ಬೆಟ್ಟೆ ರಾಶಿ ಅಡಿಕೆ ಒಣಗಿದ ಮೇಲೆ ಬೇಯಿಸಿದ ಅಡಿಕೆಯು 60 ರಿಂದ 70 ಪ್ರತಿಶತ ತೂಕ ಬಂದರೆ ಆಪಿ ಅಡಿಕೆ ಒಣಗಿದ ಮೇಲೆ ಸುಮಾರು 40 ರಿಂದ 50 ಪ್ರತಿಶತ ತೂಕ ಬರುತ್ತದೆ.

ಸಿಪ್ಪೆ ಸುಲಿದು ಬೇಯಿಸಿದ ಹಸಿ ಅಡಿಕೆಗೆ ಗಂಧಕದ ಹೊಗೆ ಕೊಡಲು ಸಾಧ್ಯವಾದಲ್ಲಿ ಅಡಿಕೆಯು ಗುಣಮಟ್ಟ ಉತ್ತಮಗೊಳ್ಳುವದು ಮತ್ತು ದೀರ್ಘಕಾಲ ಕೆಡದಂತೆ ಇಡಲು ಸಹಾಯವಾಗುವದು. ಅಡಿಕೆಗೆ ಕೆಂಪು ಬಣ್ಣ ಹೆಚ್ಚು ಬರಬೇಕೆಂದಿದ್ದಲ್ಲಿ ಒಂದು ರಾತ್ರಿ ಇಬ್ಬನಿಯಲ್ಲಿ ಹರಗಿ ಆ ಬಳಿಕ ಶಾಖಪೆಟ್ಟಿಗೆಯಲ್ಲಿ ಒಣಗಿಸಬೇಕು.

**ಚಾಲಿ :** ಹಣ್ಣು ಅಡಿಕೆ ಚಾಲಿ ಮಾಡಲು ~~8 ತಾಸುಗಳ ಅವಧಿಗೆ 70°c ಯಲ್ಲಿ ಒಣಗಿಸಿ 8 ತಾಸು ತಣ್ಣಗಾಗಿಸಿ ಪುನಃ 8 ತಾಸು ಒಣಗಿಸುವ ವಿಧಾನ ಉತ್ತಮವಾದ ವಿಧಾನವಾಗಿದೆ.~~ 70°c ಯಲ್ಲಿ 60 ಗಂಟೆ ಒಣಗಿಸಿದರೆ ಪೂರ್ಣವಾಗಿ ಒಣಗುವದು.

**ಉಪ್ಪಾಗೆ ;** 18 ಇಂಚು X 36 ಇಂಚು ಅಳತೆಯ ಟ್ರೆಯಲ್ಲಿ ಸುಮಾರು 4–4·5kg ಯಷ್ಟು ಹಸಿ ಸಿಪ್ಪೆಯನ್ನು ತುಂಬಬಹುದು. ಹಣ್ಣನ್ನು ಒಡೆದು ಬೀಜವನ್ನು ಬೇರ್ಪಡಿಸಿ 6 ಹೋಳುಗಳನ್ನು ಮಾಡಿ ಟ್ರೆಯಲ್ಲಿ ತುಂಬಿ ಒಣಗಿಸಬೇಕು. ಸುಮಾರು 8–10 ತಾಸು 70°c–75°c ಉಷ್ಣತೆಯಲ್ಲಿ ಒಣಗಿಸಬೇಕು. ನಂತರ 6–8 ತಾಸು 65°c–60°c ಗೆ ಉಷ್ಣತೆ ಕ್ರಮೇಣವಾಗಿ ಬರುವಂತೆ ಕಡಿಮೆ ಮಾಡಿ ಒಣಗಿಸಬೇಕು. ಒಣಗಿದ ನಂತರ ತೂಕವು ಹಸಿ ಸಿಪ್ಪೆಯ ತೂಕದ ಪ್ರತಿಶತ 17 ರಿಂದ 18 ರಷ್ಟು ದೊರೆಯುವದು.

ಈ ಶಾಖಪೆಟ್ಟಿಗೆಯಲ್ಲಿ ಮುರಗಲು (ಕೋಕಂ) ಕಾಪಿ ಪಪ್ಪಾಯಿ, ಮೆಣಸು, ಶೇಂಗಾ ತಂಬಾಕು, ಅರಿಶಿನ, ಶುಂಠಿ ಮುಂತಾದ ಹಣ್ಣು ಮತ್ತು ತರಕಾರಿಗಳನ್ನು ಒಣಗಿಸಿ ಉತ್ತಮ ಗುಣಮಟ್ಟದ ಪದಾರ್ಥಗಳನ್ನು ಪಡೆಯಲು ಸಾಧ್ಯವಿದೆ. ಅದರಂತೆ ಮಳೆಗಾಲದಲ್ಲಿ ಬಟ್ಟೆ ಒಣಗಿಸಲೂ ಕೂಡ ಬಳಸಬಹುದಾಗಿದೆ.

ಹಪ್ಪಳ, ಸಂಡಿಗೆ, ಶಾವಿಗೆ ಮುಂತಾದ ಆಹಾರೋದ್ಯಮಗಳಲ್ಲಿ ಹಾಗೂ ಕೈಕಾಗದ ತಯಾರಿಕಾ ಉದ್ಯಮಗಳಲ್ಲಿ ಕೂಡ ಬಳಸಬಹುದು.

PSK F1

# ಕೈಗಾ ಅಣುಸ್ಥಾವರ ಸುರಕ್ಷೆಯ ಮುನ್ನೆಚ್ಚರಿಕೆ

ಉತ್ತರ ಕನ್ನಡದ ಜನರ ಎಷ್ಟೆಲ್ಲ ವಿರೋಧಗಳ ನಡುವೆಯೂ ಕೈಗಾ ಅಣುಸ್ಥಾವರ ಪ್ರಾಯೋಗಿಕವಾಗಿ ಕಾರ್ಯರಂಭ ಮಾಡಿದೆ. ಜಿಲ್ಲೆಯ ರಮಣೀಯ ನಿಸರ್ಗದ ನಡುವೆ ಒಂದು ಬೊಕ್ಕೆ ಎದ್ದಂತಾಗಿದೆ. ಹೊಸ ಸಹಸ್ರಮಾನದ ಹೊಸ್ತಿಲಲ್ಲಿ ಅವತರಿಸಿದ ಈ 'ಇಷ್ಟವಿಲ್ಲದ ಅನಿಷ್ಟ' ಇಷ್ಟಕ್ಕೇ ನಿಲ್ಲುವುದಿಲ್ಲ. ಮುಂದಿನ ವರ್ಷ ಇದರ ಪಕ್ಕದಲ್ಲಿ ಇನ್ನೊಂದು ಸ್ಥಾವರ, ನಂತರ ಮೂರನೆಯದು, ಆಮೇಲೆ ನಾಲ್ಕನೆಯದು ... ಹೀಗೆ ಮುಂದಿನ ಶತಮಾನದುದ್ದಕ್ಕೂ ಇದು ತನ್ನ ಬಾಹುಗಳನ್ನು ವಿಸ್ತರಿಸಲಿದೆ. ಆ ವೇಳೆಗಾಗಲೇ ಬದಲೀ ಶಕ್ತಿ ಮೂಲಗಳು ಲಭ್ಯವಾದರೂ ಕೈಗಾ ಸಂಕೀರ್ಣ ಮಾತ್ರ ಅಂತ್ಯವಿಲ್ಲದ ರಗಳೆಯಾಗಿಯೇ ಮುಂದುವರೆಯಲಿದೆ. ಇಲ್ಲಿನ ಹಳೇ ಸ್ಥಾವರಗಳು ಕುಸಿಯದ ಹಾಗೆ, ಇಲ್ಲಿ ಹೂತ ಕಚಡಾಗಳು ಸ್ಫೋಟಗೊಳ್ಳದ ಹಾಗೆ, ಇದರ ನೆರೆಯ ಅಣೆಕಟ್ಟುಗಳು ಕುಸಿಯದ ಹಾಗೆ, ಇಲ್ಲಿನ ಜನುಗುವ ಅಣುಕಲ್ಮಷಗಳು ನದಿಗೆ ಸೇರದ ಹಾಗೆ, ಇಲ್ಲಿ ಯಾರೂ ಬಾಂಬ್ ಹಾಕದ ಹಾಗೆ ನೋಡಿಕೊಳ್ಳಲು ಮುಂದಿನ ಸಹಸ್ರ ಮಾನದುದ್ದಕೂ ನಾವು ಎಚ್ಚರಾಗಿಯೇ ಇರಬೇಕಾಗುತ್ತದೆ. ಯಾರೋ ಮಾಡಿದ ಕೆಲಸಕ್ಕೆ ಮುಂದಿನ ಪೀಳಿಗೆಯವರು ಬೆಲೆ ತೆರುತ್ತಿರಬೇಕಾಗಿದೆ. ಆ ಮುಂದಿನ ಪೀಳಿಗೆಯವರು ಸುರಕ್ಷಿತವಾಗಿರುವಂತೆ, ಅವರ ಆರೋಗ್ಯ ಸುಸ್ಥಿತಿಯಲ್ಲಿರುವಂತೆ, ನಿಗಾ ವಹಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಅಂಥ ಚಾರಿತ್ರಿಕ ಹೊಣೆಗಾರಿಕೆಯನ್ನು ನಾವು ಈಗಲೇ ನಿಭಾಯಿಸಬೇಕಾಗಿದೆ.

ಅಣುಸ್ಥಾವರ ಆಸ್ಫೋಟಗೊಳ್ಳದೆಂದು ಕೈಗಾ ಅಧಿಕಾರಿಗಳು ಹೇಳುತ್ತಾರೆ. ಒಪ್ಪಿಕೊಳ್ಳೋಣ. ಈವರೆಗೆ ಭಾರತದ ಯಾವ ಅಣುಸ್ಥಾವರವೂ ಚರ್ನೊಬಿಲ್ ಮಾದರಿಯಲ್ಲಿ ಸ್ಫೋಟಗೊಂಡಿಲ್ಲ. ಆದರೆ ಯುರೇನಿಯಂ ಅಗೆತ ಮತ್ತು ಬಳಕೆ ಆಗುತ್ತಿರುವಲ್ಲೆಲ್ಲ ನಿತ್ಯದುರಂತಗಳಾಗುತ್ತಿವೆ. ಬಿಹಾರದ ಜಾದುಗುಡ ಎಂಬಲ್ಲಿ ಯರೇನಿಯಂ ಗಣಿಯ ಸುತ್ತಲಿನ ಗ್ರಾಮಗಳ ಮಣ್ಣು ನೀರು ಗಾಳಿ ಮಲಿನವಾಗಿದೆ. ಅಂಗವಿಕಲ ಮಕ್ಕಳು ಜನಿಸಿವೆ; ಗರ್ಭಸ್ರಾವ, ನಪುಂಸಕತೆ ಪ್ರಕರಣ ಹೆಚ್ಚುತ್ತಿವೆ. ದಮ್ಮು, ಕ್ಷಯ, ಕ್ಯಾನ್ಸರ್ ಮುಂತಾದ ಪೀಡೆಗಳು ಹಬ್ಬಿವೆ. ಕೇರಳದ ಮೊನಸೈಟ್ ಗಣಿಗಳ ಸುತ್ತಲಿನ ಪ್ರದೇಶಗಳಲ್ಲಿ ಕ್ಯಾನ್ಸರ್ ರೋಗ ಹೆಚ್ಚಾಗಿದೆ. ರಾಜಸ್ತಾನದ ಅಣುಸ್ಥಾವರದ ಆಸುಪಾಸಿನ ಹಳ್ಳಿಗಳಲ್ಲಿ ನಾನಾ ತೆರನಾದ ರೋಗಗಳು ಹೆಚ್ಚಾಗಿವೆ. ಪೋಖ್ರಾನ್ ಸುತ್ತಲಿನ ಹಳ್ಳಿಗಳಲ್ಲಿ ರೋಗರುಜಿನೆ ಜಾಸ್ತಿಯಾಗಿದೆ. ಈ ಯಾವುದೂ ಕಟ್ಟುಕತೆಯಲ್ಲ. ಎಲ್ಲ ಕಡೆ ವೈಜ್ಞಾನಿಕ ಅಧ್ಯಯನ ನಡೆಸಿದ ನಂತರವೇ ಬಹಿರಂಗಗೊಂಡ ಸತ್ಯಾಂಶಗಳಿವು.

ಮುಂದಿನ ಐದು-ಹತ್ತು-ಇಪ್ಪತ್ತು ವರ್ಷಗಳಲ್ಲಿ ಉತ್ತರ ಕನ್ನಡದ ಮುಗ್ಧ ಜನ-ಜಾನುವಾರುಗಳು ಅಂಥ ಕಷ್ಟಕ್ಕೆ ಸಿಲುಕದ ಹಾಗೆ ನಾವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

**ವಿದ್ಯುತ್ ಉತ್ಪಾದನೆ ಆರಂಭಿಸುವ ಮೊದಲು ಈ ಕೆಳಗಿನ ಬೇಡಿಕೆಗಳನ್ನು ಕೈಗಾ ಯೋಜನಾ ನಿರ್ದೇಶಕರು ಈಡೇರಿಸಬೇಕು :**

1. ಮೊದಲನೆಯ ಘಟಕದ ಗುಮ್ಮಟ ಕುಸಿದಿದ್ದರ ವರದಿಯನ್ನು ಈವರೆಗೂ ಸಾರ್ವಜನಿಕರ ಗಮನಕ್ಕೆ ಬಾರದಂತೆ ಮುಚ್ಚಿಡಲಾಗಿದೆ. ಅದು ಬಹಿರಂಗವಾಗಬೇಕು. ಮತ್ತೆಂದೂ ಅಂಥ ದುರಂತ ಸಂಭವಿಸದ ಹಾಗೆ ಎಂತೆಂಥ ಮುನ್ನೆಚ್ಚರಿಕೆ ಕ್ರಮಗಳನ್ನು ಹೊಸ ವಿನ್ಯಾಸದಲ್ಲಿ ಅಳವಡಿಸಲಾಗಿದೆ ಎಂಬುದು ನಮಗೆ ಗೊತ್ತಾಗಬೇಕು.

2. ಕೈಗಾ ಸುತ್ತಲಿನ ಅನೇಕ ಗ್ರಾಮವಾಸಿಗಳಿಗೆ ಈಗಲೂ ಪೂರ್ಣ ಪರಿಹಾರ ಸಿಕ್ಕಿಲ್ಲ. ದೂರ ವಲಸೆ ಹೋಗಲು ಬಯಸಿದವರಿಗೆ ಮರುವಸತಿ ವ್ಯವಸ್ಥೆ ಆಗಿಲ್ಲ. ಅವರ ಬೇಡಿಕೆಗಳನ್ನು ಈಡೇರಿಸಬೇಕು. ಸುರಕ್ಷಾ ದಿಗ್ಬಂಧನದಿಂದಾಗಿ ಸಂಚಾರ ಸಂಕಷ್ಟಗಳಿಗೆ ತುತ್ತಾದವರಿಗೂ ಪರಿಹಾರ ಸಿಗಬೇಕು.

3. ಕೈಗಾ ಸುತ್ತಲಿನ ನಿವಾಸಿಗಳ ಪ್ರಾಥಮಿಕ ಆರೋಗ್ಯ ಸಮೀಕ್ಷೆ ನಡೆಸಲಾಗಿದೆಯೆಂದು ಗೊತ್ತಾಗಿದೆ. ಅದರ ವರದಿಯು ಸಾರ್ವಜನಿಕರ ವೀಕ್ಷಣೆಗೆ ಲಭಿಸಬೇಕು ಹಾಗೂ ಜಿಲ್ಲೆಯ ಎಲ್ಲ ಶಾಲಾ-ಕಾಲೇಜುಗಳಲ್ಲಿ ಲಭ್ಯವಿರಬೇಕು. ಪ್ರತಿ ವರ್ಷವೂ ಅಲ್ಲೆಲ್ಲ ಮರುಸಮೀಕ್ಷೆ ನಡೆಸಬೇಕು ಮತ್ತು ಸಾರ್ವಜನಿಕರಿಗೆ ತಿಳಿಯಪಡಿಸಬೇಕು.

4. ಕೈಗಾದ ಉತ್ತರ ಮತ್ತು ಪೂರ್ವ ದಿಕ್ಕಿನ ಪ್ರಮುಖ ಗಾಳಿ ಬೀಸುವ ದಿಕ್ಕಿನಲ್ಲಿ 30 ಕಿಲೊಮೀಟರ್ ವರೆಗಿನ ಹಳ್ಳಿಗಳ ಪಟ್ಟಿ ಸಿದ್ಧವಾಗಬೇಕು. ಆರೋಗ್ಯ ಸಮೀಕ್ಷೆಯನ್ನು ಇಲ್ಲಿಗೂ ವಿಸ್ತರಿಸಬೇಕು.

5. ಕೈಗಾ ಸುತ್ತಲಿನ ಜೀವಾವಾಸದ ಸಸ್ಯ, ಪ್ರಾಣಿ ಮತ್ತು ಜಲಜೀವಿಗಳ ಪರಿಸರ ಸ್ಥಿತಿಗತಿ ಸಮೀಕ್ಷೆ ಈಗಲೂ ನಡೆದಿಲ್ಲ. ಸ್ಥಳೀಯ ಕಾಲೇಜಿನ ಜೀವ ವಿಜ್ಞಾನ ವಿಭಾಗ ಮತ್ತು ಸಾಗರ ಸಂಶೋಧನ ಸಂಸ್ಥೆಯ ತಜ್ಞರು ಮತ್ತು ವಿದ್ಯಾರ್ಥಿಗಳ ನೆರವು ಪಡೆದು ಈ ಸಮೀಕ್ಷೆ ನಡೆಸಬೇಕು. ಅವುಗಳ ಪ್ರತಿಗಳು ಎಲ್ಲ ಕಾಲೇಜುಗಳಲ್ಲಿ ಸಿಗುವಂತಿರಬೇಕು.

6. ಅಪಘಾತ ಸಂಭವಿಸದಿರುವ ಸಾಮಾನ್ಯ ದಿನಗಳಲ್ಲೂ ಸುತ್ತಲಿನ ಪರಿಸರದಲ್ಲಿ ವಿಕಿರಣದ ಮಟ್ಟ ಏರುತ್ತಲೇ ಇರುವುದರಿಂದ 'ಸಾರ್ವಜನಿಕ ಪರಮಾಣು ಸುರಕ್ಷಾ ಸಮಿತಿ' ಯೊಂದನ್ನು ಸಂಘಟಿಸಬೇಕು. ಕೆನರಾ ಸಂಸದರ ಅಧ್ಯಕ್ಷತೆಯ ಈ ಸಮಿತಿಯಲ್ಲಿ ಕಡೇಪಕ್ಷ ಒಬ್ಬ ವಿಜ್ಞಾನ ಶಿಕ್ಷಕ, ಒಬ್ಬ ವಕೀಲ, ಒಬ್ಬ ವೈದ್ಯ, ಒಬ್ಬ ಪತ್ರಕರ್ತ, ಒಬ್ಬ ಜಿಲ್ಲಾ ಪರಿಷತ್ ಸದಸ್ಯ ಮತ್ತು ಸುತ್ತಲಿನ ಹಳ್ಳಿಗಳ ಪಂಚಾಯತ್‌ಗಳ ಒಬ್ಬೊಬ್ಬ ಸದಸ್ಯರಿರಬೇಕು. ಪರಮಾಣು ಶಕ್ತಿ ನಿಯಂತ್ರಣ ಮಂಡಲಿಯ ಪರವಾಗಿ ಒಬ್ಬ ಸದಸ್ಯನ ನೇಮಕವಾಗಬೇಕು. ಸಾಮಾನ್ಯ ದಿನಗಳಲ್ಲಿ ವರ್ಷಕ್ಕೆ ಕನಿಷ್ಠ ಎರಡು ಬಾರಿ ಈ ಸಮಿತಿ ಸಭೆ ಸೇರಬೇಕು. ಕೈಗಾ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಎಂಥದೇ ಅನೈಸರ್ಗಿಕ ಘಟನೆಗಳು ಸಂಭವಿಸಿದರೂ (ಉದಾ: ಗರ್ಭಸ್ರಾವ, ವಿಕೃತ ಶಿಶುಗಳ ಜನನ, ಜಾನುವಾರುಗಳಿಗೆ ವಿಕೃತ ಕರುಗಳ ಜನನ, ಗಿಡಮರಗಳಲ್ಲಿ ವಿಕೃತ ಫಲ ಪುಷ್ಪ ಇತ್ಯಾದಿ ಕಂಡುಬಂದರೂ) ತುರ್ತಾಗಿ ಈ ಸಮಿತಿ ಅದರ ತನಿಖೆ ನಡೆಸಿ ವರದಿಯನ್ನು ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಯುದ್ಧ, ಭೂಕಂಪ, ಅಣೆಕಟ್ಟು ಭಗ್ನ ದಂಥ ವಿಶೇಷ ಸಂದರ್ಭಗಳಲ್ಲಿ ತುರ್ತು ಸಭೆ ಸೇರಬೇಕು.

7. ನೀರು, ಮಣ್ಣು, ಸಸ್ಯ ಮತ್ತು ಗಾಳಿಯಲ್ಲಿನ ನಿತ್ಯದ ವಿಕಿರಣ (ಬ್ಯಾಕ್‌ಗ್ರೌಂಡ್ ರೇಡಿಯೇಶನ್) ಪ್ರಮಾಣ ಎಷ್ಟೆಷ್ಟಿದೆ ಎಂಬುದನ್ನು ತೋರಿಸಬಲ್ಲ 'ಡೋಸಿಮೀಟರ್'ನ ಬಳಕೆ ಹೇಗೆಂಬುದನ್ನು ಈ ಸಮಿತಿಯ ಸದಸ್ಯರಿಗೆ ಮನದಟ್ಟು ಮಾಡಿಕೊಡಬೇಕು. ಸಮಿತಿಯ ತಜ್ಞರ ಬಳಕೆಗೆಂದೇ ಅಂಥ ಕೆಲವು ಡೋಸಿಮೀಟರ್ ಲಭ್ಯವಾಗಬೇಕು.

8. ಅಶಕ್ತ, ಕುಪೋಷಿತ ನಾಗರಿಕರಿಗೇ ವಿಕಿರಣದ ದುಷ್ಫಲ ಶೀಘ್ರ ತಟ್ಟುವುದರಿಂದ, ಕೈಗಾ ಸುತ್ತಲಿನ ಪ್ರಾಥಮಿಕ ಆರೋಗ್ಯ ಸೌಕರ್ಯಗಳು ದ್ವಿಗುಣಿತವಾಗಬೇಕು. ಕಾಳಿ ನದಿಯ ಕೆಳಹರಿವಿನ ನೀರನ್ನು ಬಳಸುವ, ಹಾಗೂ ಗಾಳಿಬೀಸುವ ದಿಕ್ಕಿನಲ್ಲಿರುವ ಊರುಗಳ ಎಲ್ಲ ಗರ್ಭಿಣಿಯರ ಮೇಲೆ ವಿಶೇಷ ನಿಗಾ ಇಟ್ಟಿರಬೇಕು. ಅವರ ಪೋಷಕಾಂಶ ಸ್ಥಿತಿಗತಿಯನ್ನು ಸುಧಾರಿಸುವುದು ಹೇಗೆಂಬ ಬಗ್ಗೆ ಸರಳ ಪಾಠಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಾಗಬೇಕು.

9. ತುರ್ತುಪರಿಸ್ಥಿತಿಯಲ್ಲಿ ಅಯೊಡಿನ್ ಮಾತ್ರೆಗಳ ಬಳಕೆ ಹಾಗೂ ಇತರ ತುರ್ತುಕ್ರಮಗಳು ಹೇಗಿರಬೇಕೆಂಬ ಬಗ್ಗೆ ಜಿಲ್ಲೆಯ ಎಲ್ಲರಿಗೂ (ಕೇವಲ 8 ಕಿ.ಮೀ. ಸುತ್ತಳತೆಯ ಊರಿನ ಜನರಿಗಷ್ಟೇ ಅಲ್ಲ) ತಿಳುವಳಿಕೆ ನೀಡಬೇಕು. ಪರಮಾಣು ಇಂಧನ ಮತ್ತು ತ್ಯಾಜ್ಯವಸ್ತುಗಳ ಸಾಗಣೆ ಮಾಡುವ ಹೆದ್ದಾರಿಯ ಪಕ್ಕದ ನಿವಾಸಿಗಳಿಗೂ ಅಂಥ ತಿಳುವಳಿಕೆ ನೀಡಬೇಕು.

10. ಸ್ಥಾವರ ಸಂಕೀರ್ಣದಲ್ಲಿ ಪ್ರತಿ ಹೊಸ ಘಟಕವನ್ನು ನಿರ್ಮಿಸುವ ಮುನ್ನವೂ ಸಾರ್ವಜನಿಕರ ಒಪ್ಪಿಗೆ ಪಡೆಯುವ ಸಂಪ್ರದಾಯ ಜರ್ಮನಿಯಲ್ಲಿದೆ. ಕೈಗಾದಲ್ಲೂ ಮೂರನೆಯ ಮತ್ತು ಮುಂದಿನ ಹೊಸ ಘಟಕದ ನಿರ್ಮಾಣಕ್ಕೆ ಮುಂಚೆ ಸಾರ್ವಜನಿಕ ವಿಚಾರಣೆ ನಡೆಯಬೇಕು. ಸುತ್ತಲಿನ ನಿವಾಸಿಗಳಿಂದ ನಿರಾಕ್ಷೇಪಣೆ ಪಡೆಯಬೇಕು.

**ಅಶುಭ ಸೂಚನೆಗಳ ಸರಮಾಲೆ :**

ಕೈಗಾ ಅಣುಸ್ಥಾವರ ನಿರ್ಮಾಣದ ನಿರ್ಧಾರ ಕೈಗೊಂಡ ಲಾಗಾಯ್ತು ಎಲ್ಲೆಲ್ಲೂ ಅಶುಭ ಸೂಚನೆಗಳೇ ಕಂಡುಬರುತ್ತಿವೆ. ಕೆಲವು ಉದಾಹರಣೆಗಳು ಇಲ್ಲಿವೆ.

☆ ನಮ್ಮ ಅಣುಶಕ್ತಿ ಆಯೋಗದವರು ತಮ್ಮ ಕುಂಟುತ್ತಿರುವ ಪರಮಾಣು ಸಾಮ್ರಾಜ್ಯವನ್ನು ದೇಶದ ಉದ್ದಗಳಕ್ಕೂ ವಿಸ್ತರಿಸಬೇಕೆಂದು ನಿರ್ಧರಿಸಿದಾಗಲೇ (1979) ಅಮೆರಿಕದಲ್ಲಿ 'ಥ್ರೀ ಮೈಲ್ ಐಲ್ಯಾಂಡ್' ದುರಂತ ಸಂಭವಿಸಿತು. ನಿರ್ಮಾಣ ಹಂತದಲ್ಲಿದ್ದ ಸ್ಥಾವರಗಳನ್ನೂ ಅರ್ಧಕ್ಕೇ ನಿಲ್ಲಿಸಿ ಅಮೆರಿಕದವರು ಇನ್ನೆಂದೂ ಹೊಸ ಸ್ಥಾವರ ಆರಂಭಿಸಬಾರದೆಂದು ನಿರ್ಧಾರ ಕೈಗೊಂಡರು.

☆ ಕೈಗಾದಲ್ಲಿ ಪರಮಾಣು ಸ್ಥಾವರ ನಿರ್ಮಾಣಕ್ಕೆಂದು ಭೂಮಿ ಪೂಜೆಗೆ ಹೊರಟಾಗಲೇ (1986) ಅತ್ತ ಚರ್ನೊಬಿಲ್ ಸ್ಥಾವರ ಸ್ಫೋಟಗೊಂಡಿತು. ಇಡೀ ಜಗತ್ತೇ ತತ್ತರಿಸಿತು.

☆ ಕೈಗಾದ ಮೊದಲ ಘಟಕದ ಗೋಪುರ ನಿರ್ಮಾಣಕ್ಕೆ ಕಂಬಿ ನೇಯ್ಗೆ ಮಾಡುತ್ತಿದ್ದಂತೆಯೇ ಗುಜರಾತಿನ ಕಕ್ರಪಾರಾ ಘಟಕದಲ್ಲಿ ಜಲಪ್ರಳಯ ಸಂಭವಿಸಿತು. ಮುಂದೆ ಕೆಲವೇ ದಿನಗಳಲ್ಲಿ ಕೈಗಾ ಗುಮ್ಮಟದ ಭಾಗ ಕುಸಿದು ಬಿತ್ತು. ವಿದ್ಯುತ್ ಸಾಗಣೆಯ ಪೈಲಾನ್ ಕುಸಿದು ಬಿತ್ತು.

☆ ಕೈಗಾದಲ್ಲಿ ಎರಡನೆಯ ಘಟಕದಲ್ಲಿ ಕ್ಯಾಲಂಡ್ರಿಯಾವನ್ನು ಕೂರಿಸುವ ಸಿದ್ಧತೆಯಲ್ಲಿದ್ದಾಗಲೇ ಅತ್ತ ನರೋರಾದಲ್ಲಿ ಬೆಂಕಿ ಆಕಸ್ಮಿಕ ಸಂಭವಿಸಿತು.

☆ ಕುಸಿದ ಗೋಪುರದ ಭಾವಣಿಯನ್ನು ಕೀಳುತ್ತಿರುವಾಗಲೇ ಫ್ರಾನ್ಸ್‌ನ ಸೂಪರ್ ಫೀನಿಕ್ಸ್ ಮತ್ತು ಜರ್ಮನಿಯ ಕಾಲ್ಕಾರ್‌ನ ಫಾಸ್ಟ್ ಬ್ರೀಡರ್ ಸ್ಥಾವರಗಳನ್ನು ಮುಚ್ಚಿ ಬಿಡಲು ನಿರ್ಧರಿಸಲಾಯಿತು.

☆ ಕೈಗಾದಲ್ಲಿ ಯುರೇನಿಯಂ ಇಂಧನಕ್ಕೆ ಚಕಮಕಿ ಕೊಟ್ಟು ಪ್ರಾಯೋಗಿಕ ಶಾಖ ಹೊಮ್ಮಿಸಿದಾಗ ಅತ್ತ ಜಪಾನಿನ ಟೊಕಾಯಿಮುರಾ ಯುರೇನಿಯಂ ಸ್ಥಾವರ ಆಸ್ಫೋಟಿಸಿತು. ಇದು ಚರ್ನೊಬಿಲ್ ನಂತರದ ಅತಿ ದೊಡ್ಡ ಅಣುದುರಂತವೆನಿಸಿತು.

## ಅಣುವಿರೋಧಿ ನಾಗರೀಕ ಶಕ್ತಿ, ಬೆಂಗಳೂರು

ಮತ್ತು

## ಉತ್ತರ ಕನ್ನಡ ಪರಿಸರ ಸಂರಕ್ಷಣಾ ಸಮಿತಿ, ಉ.ಕ. ಜಿಲ್ಲೆ

PSK 71

# ಕರಾವಳಿಯಲ್ಲಿ
# "ಬಾರ್ಜ ಮೌಂಟೆಡ್" ಬೇಡವೇ ಬೇಡ !!

ನಮ್ಮ ದೇಶದಲ್ಲಿ ಪ್ರಪ್ರಥಮವಾಗಿ ಬರುತ್ತಿರುವ ಬಾರ್ಜಮೌಂಟೆಡ ಘಟಕ ಇಡೀ ಕರಾವಳಿಯ ಜನಜೀವನವನ್ನು ಅಸ್ತವ್ಯಸ್ತಗೊಳಿಸುವ ಎಲ್ಲ ವಿಷಯಗಳನ್ನು ಒಳಗೊಂಡಿದೆ.

ಯಾವುದೇ ಯೋಜನೆ ಬಂದರೂ, ಸಹಿತ ತಲೆತಲಾಂತರದಿಂದ ವಾಸವಾಗಿರುವ ಜನರ ಜೀವನವನ್ನು ಗೊಂದಲಗೊಳಿಸಿ ಅವರ ನೆಲ-ಜಲ-ಸಮುದ್ರ ಸಂಪತ್ತನ್ನು ಕಸಿದುಕೊಂಡು ನಿರ್ಗತಿಕರನ್ನಾಗಿಸಿ, ಕೆಲವೇ ಕೆಲವು ಜನರು ದೊಡ್ಡವರಾಗುವ ಇಂತಹ ಯೋಜನೆಗಳಿಂದ ಈಗಾಗಲೇ ಉ. ಕನ್ನಡ ಶೋಷಣೆಗೆ ಒಳಗಾಗಿದೆ.

ಕರಾವಳಿ ಜನರ ಜೀವನವನ್ನೇ ಹಾಗೂ ಅದನ್ನೇ ಅವಲಂಬಿಸಿದ ಇಡೀ ವ್ಯವಹಾರವನ್ನು ಸಂಪೂರ್ಣ ತಲೆಕೆಳಗು ಮಾಡುವ ಈ ಯೋಜನೆ ಫೆಬ್ರುವರಿ 22 ರ ವರೆಗೂ ರಹಸ್ಯವಾಗಿಯೆ ಮುಂದುವರೆದು ಕೊಂಡು ಬಂದಿವೆ.

ತಮಗೆ ಬೇಕಾದ ಹಾಗೆ ರಿಪೋರ್ಟ ಮಾಡಿಕೊಂಡು ಕೇವಲ ತದಡಿ ಗ್ರಾಮದ ಮೀನುಗಾರರ ಸಂಖ್ಯೆ ಮಾತ್ರ ನಮೂದಿಸಿ, ಅಲ್ಲಿ ಹೆಚ್ಚಿನ ಹಾನಿ ಏನೂ ಆಗುವದಿಲ್ಲವೆಂದು ಸುಳ್ಳು ವರದಿಯನ್ನು ಮುಂದಿಟ್ಟು ಕೊಂಡು ಬಂದ ಈ ಕಂಪನಿಗೆ, ಜಿಲ್ಲೆಯ ರಾಜ್ಯದ ಎಲ್ಲ ಇಲಾಖೆಗಳೂ ನಿರಾಕ್ಷೇಪಣ ಪತ್ರ ನೀಡಿವೆ.

ಬಾರ್ಜ ಮೇಲೆ ಜನರೇಟರ ನಿಲ್ಲಿಸಿ ಅದಕ್ಕೆ ದಿನಕ್ಕೆ 660 ಟನ್ (660000 ಲೀಟರ) ಫರ್ನೆಸ್ ಆಯಿಲ್ (ಸೀಮೆ-ಎಣ್ಣೆಗಿಂತ ಮೇಲ್ದರ್ಜೆ ಡಿಸೆಲ್ ಕೆಳದರ್ಜೆಯ ಆಯಿಲ್) ಉಪಯೋಗಿಸಿ 110 ಮೆಗಾವ್ಯಾಟ ವಿದ್ಯುತ್ ಉತ್ಪಾದಿಸಲು ಹವಣಿಸಿದ್ದಾರೆ. ಇಂತಹ ವಿದ್ಯುತ್ ಉತ್ಪಾದನೆಗೆ ಬೇಕಾದ ಅಪಾರ ಪ್ರಮಾಣದ ನೀರು ನದಿಯಲ್ಲಿ ಪುಕ್ಸಟೆಯಾಗಿ ಸಿಗುತ್ತದೆ ಎಂದುಕೊಂಡು ಇಲ್ಲಿಗೆ ಈ ಯೋಜನೆ ತರಲಾಗಿದೆ.

ಇಲ್ಲಿಂದ ಹುಟ್ಟುವ ಕರೆಂಟನ್ನು ಸಾಗಿಸಲು ಹೆಗಡೆ ಗ್ರೀಡ್‌ವರೆಗೆ ಸಾಗಿಸಲು ಮತ್ತೆ ಈ ಭಾಗದಲ್ಲಿ ಕಂಬ ಹಾಕಲು ಜಾಗ ಕೊಡಬೇಕೆಂಬ ಒತ್ತಾಯ ಬರಲಿದೆ.

ವಿದ್ಯುತ್ ಉತ್ಪಾದನೆಯ ಅವಧಿಯಲ್ಲಿ ಹುಟ್ಟುವ ಅಪಾರ ಪ್ರಮಾಣದ ಶಬ್ದದಿಂದ ಅಲ್ಲಿ ಸುತ್ತಲೂ ಒಂದೆರಡು ಕಿಮಿ ಸುತ್ತಳತೆಯಲ್ಲಿ ಯಾರು ವಾಸಿಸುವ ಸ್ಥಿತಿ ಉಳಿಯುವದಿಲ್ಲ. ಬಾರ್ಜನಲ್ಲಿ ಕೆಲಸ ಮಾಡುವವರಿಗೆ ಕಿವಿಗೆ ರಕ್ಷಾಕವಚಗಳನ್ನು ಕೊಡಲಾಗುತ್ತದೆ. ಎಂದು ಕಂಪನಿಯವರೆ ನಮೂದಿಸಿದ್ದಾರೆ.

ಈ ವಿದ್ಯುತ ಕಂಪನಿಗೆ ಎಲ್ಲ ರೀತಿಯ ಸಬ್ಸಿಡಿ ನೀಡಲಾಗಿದೆ. ಯಾವುದೇ ತೆರಿಗೆ ಇಲ್ಲದೇ ಕೇವಲ ಲಾಭಕ್ಕಾಗಿ ಮಾತ್ರವೆ ತರಲಾದ ಈ ಯೋಜನೆ ಕರಾವಳಿಯನ್ನು ಸಂಪೂರ್ಣ ಹಾಳು ಮಾಡಲಿದೆ.

ದಿನಕ್ಕೆ 660 ಟನ್ ಆಯಿಲ್ ಸುಡುವದರಿಂದ ಹೊರಡುವ ಹೊಗೆಯ ಪ್ರಮಾಣವನ್ನು ಕಲ್ಪಿಸಿಕೊಳ್ಳಲು ಸಾಧ್ಯ-ವಾಗುವದಿಲ್ಲ. ಈ ವಿಷಪೂರಿತ ಹೊಗೆ ಇಡೀ ಕರಾವಳಿ ಹಾಗೂ ಉತ್ತರ ಕನ್ನಡದ ಅನೇಕ ತಾಲೂಕಗಳ ಅರಣ್ಯ ಪರಿಸರ ಜನರ ಆರೋಗ್ಯದ ಮೇಲೆ ಭೀಕರ ಪರಿಣಾಮ ಮಾಡಲಿದೆ ಈ ಹೊಗೆಯಲ್ಲಿ ವಿಷಕಾರಿ ಅಂಶಗಳನ್ನು ಹಾಗೂ ಅದರ ಪರಿಣಾಮವನ್ನು ಸಹಿತ ಕಂಪನಿ ತನ್ನ ವರದಿಯಲ್ಲಿ ತಿಳಿಸಿದೆ.

ಇಂತಹ ವರದಿಯನ್ನು ಕಂಡೂ ಎಲ್ಲಾ ಇಲಾಖೆಗಳು ನಿರಾಕ್ಷೇಪಣಾ ಪತ್ರ ಕೊಟ್ಟಿವೆ. ಇದನ್ನು ಸಾಮಾನ್ಯ ಜನತೆ ಪ್ರಶ್ನಿಸ ಬೇಕಿದೆ.

ರೂ 550 ಕೋಟಿಗೂ ಮಿಕ್ಕಿದ ಈ ಯೋಜನೆ ಕೇವಲ ಒಂದುನೂರು ಜನಕ್ಕೆ ಮಾತ್ರ ನೌಕರಿ ಕೊಡುತ್ತದೆ ಎಂದು ತಿಳಿಸಿದೆ. ಆದರೆ ಅದೆ ಹೊತ್ತಿನಲ್ಲಿ ಕರಾವಳಿಯ 5000 ಕುಟುಂಬಕ್ಕೆ ಮಿಕ್ಕಿದ ಜನರ ಅನ್ನವನ್ನು ಕಸಿಯುತ್ತದೆ. ಜೊತೆಗೆ ಮೀನುಗಾರಿಕೆಯನ್ನು ಅವಲಂಬಿಸಿ ಬದುಕುತ್ತಿದ್ದೆ ಇಡಿ ಸಮುದಾಯದ ಮೇಲೆ ಮಾರಕ ಪರಿಣಾಮ ಬೀರಲಿದೆ.

ಜನರಿಗೆ ಅರ್ಥವಾಗದ ಹಾಗೆ ರಹಸ್ಯವಾಗಿಯೇ ಯೋಜನೆಯನ್ನು ತಂದು ಜನರ ಜೀವನವನ್ನು ಅಲ್ಲೋಲಕಲ್ಲೋಲ ಗೊಳಿಸುತ್ತಿರುವ ಯೋಜನೆಗಳನ್ನು ಇಡೀ ಜಿಲ್ಲೆಯ ಜನತೆ ಒಕ್ಕೊರಲಿನಿಂದ ವಿರೋಧಿಸಬೇಕಿದೆ.

ಬಾರ್ಜ ಮೌಂಟನ ಬಗೆಗೆ ವಿವರವಾದ ಪುಸ್ತಕ ಶೀಘ್ರದಲ್ಲಿ ಪ್ರಕಟವಾಗಲಿದೆ. ಅದರಲ್ಲಿ ಬಾರ್ಜಿನ ವಿಷಯ, ಹಾಗೂ ಪರಿಚಯ ಅದರಿಂದಾಗುವ ಅನಾಹುತಗಳ ವಿವರವಾದ ಚರ್ಚೆ ಇದೆ.

ಈ ಬಾರ್ಜಿನ ವಿರೋಧಕ್ಕೆ ಹಾಗೂ ಕರಾವಳಿಯ ರಕ್ಷಣೆಗೆ ನಾವು ಈಗಿನಿಂದಲೇ ನಿರ್ಧಾರ ತೆಗೆದುಕೊಳ್ಳಬೇಕಿದೆ ಇಲ್ಲವಾದಲ್ಲಿ ದ. ಕನ್ನಡ ಜಿಲ್ಲೆಯ ತಣ್ಣೀರು ಬಾವಿಯಲ್ಲಿ ಅದರಂತೆ ಮಿಲಿಟರಿ ಸಹಾಯದಿಂದ ಬಾರ್ಜ ತಂದು ಹೇರುವ ಪ್ರಯತ್ನ ಇಲ್ಲಿಯೂ ನಡೆಯಬಹುದಾದ ಅಪಾಯವಿದೆ.


ಈಗಲೇ ಎಚ್ಚೆತ್ತು ಈ ಜನ ವಿರೋಧಿ ಯೋಜನೆಯನ್ನು ಇಲ್ಲಿಂದ ದೂರ ಕಳಿಸಲು ಸರಕಾರಕ್ಕೆ ಒತ್ತಾಯ ತರುವಲ್ಲಿ ಶಾಂತಿಯುತ ಹೋರಾಟ ಪ್ರಾರಂಭಿಸಬೇಕಾಗಿದೆ.

"ಸ್ನೇಹ ಕುಂಜ"
ಉತ್ತರ ಕನ್ನಡ ಜಿಲ್ಲಾ ಪರಿಸರ ಸಂರಕ್ಷಣ ಸಮಿತಿ, ಹೊನ್ನಾವರ-ಶಿರಸಿ
ಕರಾವಳಿ ಹಿತರಕ್ಷಣಾ ಸಮಿತಿ ಕುಮಟಾ.

Savdu Branch
[illegible]
Syrup
Bo14
4 ω ml

# MANUVIKAS

A GROUP OF VOLUNTEERS FOR EDUCATION, ENVIRONMENT AND RURAL DEVELOPMENT



*Registered Office:*


**MANUVIKAS(R)**

At: **KARJAGI,** Po:Balur, Tq: Siddapur,

Pin : 581340 Dist:Uttara Kannada

Tele Phone No:91-8389-~~376129~~ 249729

**ABOUT US...**

**MANUVIKAS** is a non-governmental, non-political,voluntary organization committed for education, environment and rural development.It was registered in the year 2003 and is working in Haveri and Uttara Kannada districts.The members of board are from different walks of life like Lawyers,Social workers,Educationists etc.The organization is addressing the issues like poverty aliviation,women empowerment,natural resource management. Awareness activities on different social problems,publicize human rights and child rights, employment creation and various other issues for rural development.

## WHY MANUVIKAS INITIATED

Poverty,migration,illetaracy and lack of awareness on the management of natural resources are resulted in great inbalance between poor and rich are well as rural and urban community. Maximum natural resources are managed by only a few persons and maximum people are looking up for food and shelter.



**MANUVIKAS** thought of responding actively to this problem and started grass root level work in the middle part of Karnataka.

The mentioned area is suffering from the problem like unequal wages for equal work, low wages, unequal distribution of resources and lack of awareness on education etc. In the beginning **MANUVIKAS** is creating awareness among people on education,human rights, women empowerment and natural resources agmenting.

## MAIN OBJECTIVES OF THE ORGANIZATION

* To undertake the preservation of the natural resources, mainly land, water, vegetation to sustain life on this planet by maintaining ecosystem and to prevent exploitation of these resources by some section of the society and ensuring equitable distribution to meet basic need of all especially the poor.

*Care and service for the Educational, Economic,Environmental,Cultural needs,Welfare and well being of all persons residing in India irrespective of caste,creed,race,sex,language or religion and more specifically downtrodden, economically backword rural folk living below the poverty line in particular with prejudice.

## WORK STYLE OF MANUVIKAS

**MANUVIKAS** obviously belives in the community empowerment as sustainable development of the society, so organization is trying to enable the participation of the people in all its developmental initiatives, promotion of self help groups, water user's group, people forum are the different numinculture of the ways of mobilizing people participation.

The organigation is having intention to take up development research and projects for the reduction of poverty,eradication of child labour system, reducing environmental destruction and non-violation of human rights in any quarter.


Main issues which are being addressed by the organization are rain water harvesting, programmes on human rights and AIDS,bio diversity conservation, ensuring quality in education and eradication of child labour system.

## APPEAL

We are requesting donors,NGOs,individuals, corporate houses to take part in the work of MANUVIKAS in the form of financial or non financial support. Post your contribution to.


**Mr. Ganapati Bhat**
Managing Director,
'MANUVIKAS'
At: Karjagi, Po:Balur, Tq: Siddapur,
Dist : Uttara Kannada Phone : 08389-376129.



**Say "Yes " For Children.**